Editor: S.Y.GURUSHANTH Publisher: G.N.NAGARAJ RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–19 | ಸಂಚಿಕೆ–5 | ಜನವರಿ 27–ಫೆಬ್ರವರಿ 2, 2025 | ಪುಟ 16 | ರೂ.10/–
Volume-19 | Issue-5 | January 27 - February 2, 2025 | Pages:16 | Price: 10/-



ಬಹುತ್ವ ಸಂಸ್ಕೃತಿಯ ಭಾರತೋತ್ಸವ

ಬಹುತ್ವದ ಪ್ರಬಲ ಪ್ರತಿಪಾದನೆ: ಕೋಮುವಾದದ ವಿರುದ್ಧ ಪ್ರತಿರೋಧ

ಟ್ರಂಪ್: ಧನಿಕ ವರ್ಗದ ಪ್ರಭುತ್ವ



ಮಹಿಳೆಯರ ಬದುಕಿಗೆ ಉರುಳಾಗುತ್ತಿರುವ ಮೈಕ್ರೋ ಫೈನಾನ್ಸ್‌ಗಳು

ಶೈಕ್ಷಣಿಕ ಧನ ಸಹಾಯ: ಐತಿಹಾಸಿಕ ಗೆಲುವು ಸಾಧಿಸಿದ ಕಟ್ಟಡ ಕಾರ್ಮಿಕರ ಚಳುವಳಿ





ಷೇರು ಕಂಪನಿಗಳೂ, ಷೇರು ಮಾರುಕಟ್ಟೆಗಳೂ, ಬಂಡವಾಳದ ಕೇಂದ್ರೀಕರಣವೂ

ಭಾಗ 12

ಜಿ.ಎನ್. ನಾಗರಾಜ್

ಸಾವಿರಾರು ವರ್ಷಗಳಿಂದ ಮಾನವ ಸಮಾಜ ತನ್ನ ಬಟ್ಟೆ, ಮಡಕೆ, ಪಾತ್ರೆ ಮೊದಲಾದ ಕೃಷಿಯೇತರ ಅಗತ್ಯಗಳನ್ನು ಪೂರೈಸಲು ಆಯಾ ಕೌಶಲ್ಯವನ್ನು ರೂಢಿಸಿಕೊಂಡ ಕುಶಲ ಕರ್ಮಿಗಳನ್ನು ಅವಲಂಬಿಸಿತ್ತು. ಆಯಾ ಕುಶಲಕರ್ಮಿಗಳು ತಾವೇ ರೂಪಿಸಿಕೊಂಡ, ತಮ್ಮದೇ ಸ್ವಂತ ರಾಟೆ, ಮಗ್ಗ, ಕುಲುಮೆ, ತಿದಿ ಮೊದಲಾದವುಗಳನ್ನು ಬಳಸಿ ಇವುಗಳನ್ನು ತಯಾರಿಸುತ್ತಿದ್ದರು.

ಜಾತಿ ಪದ್ಧತಿಯ ಸಮಾಜವಾದ ಭಾರತದಲ್ಲಿ ಈ ಕುಶಲಕರ್ಮಗಳು ವಿವಿಧ ಒಳ ವಿವಾಹವುಳ್ಳ ಜಾತಿಗಳಲ್ಲಿ ಪ್ರತ್ಯೇಕಗೊಂಡರೆ, ಬೇರೆ ದೇಶಗಳಲ್ಲಿ ರೈತಾಪಿ ಕುಟುಂಬಗಳು ಇಂತಹ ಕೌಶಲ್ಯಗಳನ್ನು ರೂಢಿಸಿಕೊಂಡು ತಮ್ಮ ಬಹಳ ಅಗತ್ಯಗಳನ್ನು ತಮ್ಮ ವಿರಾಮ ಕಾಲದಲ್ಲಿ ತಯಾರಿಸಿಕೊಳ್ಳುತ್ತಿದ್ದರು. ಅವರಲ್ಲಿ ಕೆಲವರು ವಿಶೇಷ ಕೌಶಲ್ಯ ಬೆಳೆಸಿಕೊಂಡರೂ ಯಾರು ಯಾವ ಕುಶಲ ಕರ್ಮವನ್ನು ಯಾವಾಗ ಬೇಕಾದರೂ ಕೈಗೊಳ್ಳುತ್ತಿದ್ದರು. ಯುರೋಪಿನ ಕುಶಲ ಕರ್ಮಿಗಳು ತಮ್ಮದೇ ಕೂಟ(ಗಿಲ್ಡ್)ಗಳನ್ನು ಸ್ಥಾಪಿಸಿಕೊಂಡು ತಮ್ಮದೇ ನಿಯಮಗಳನ್ನು ರೂಪಿಸಿಕೊಂಡಿದ್ದರು. ಮಾಸ್ಟರ್ ಕ್ರಾಫ್ಟ್‌ಮೆನ್‌ಗಳು, (ಪರಿಣತ ಕುಶಲಕರ್ಮಿಗಳು), ಅವರ ಹತ್ತಿರ ಕೆಲಸ ಮಾಡುವ ಕುಶಲ ಕರ್ಮಿಗಳ ಸಂಖ್ಯೆ, ಅಪ್ರೆಂಟಿಸ್‌ಗಳಿಗೆ ತರಬೇತಿ ನೀಡುವ ಬಗ್ಗೆ, ಈ ಕೂಟದ ಸದಸ್ಯತ್ವದ ಬಗ್ಗೆ, ಎಲ್ಲರೂ ಒಟ್ಟಾಗಿ ತೀರ್ಮಾನಗಳನ್ನು ಕೈಗೊಳ್ಳುವ ಬಗ್ಗೆ ಬಹಳ ಬಿಗಿಯಾದ ನಿಯಮಗಳಿದ್ದವು. ಇತರ ವರ್ಗದವರ ಜೊತೆ ವ್ಯವಹರಿಸಲು ಈ ಕೂಟಗಳು ಆಧಾರವಾಗಿದ್ದವು.

ವ್ಯಾಪಾರಿ ಬಂಡವಾಳ

ಮಹಾ ಸಾಗರಯಾನಗಳು, ಅಮೇರಿಕ, ಆಸ್ಟ್ರೇಲಿಯಾದಂತಹ ಹೊಸ ಪ್ರದೇಶಗಳ ಶೋಧಗಳು, ಭಾರತದಂತಹ ಪ್ರಾಚೀನ ದೇಶಗಳಿಗೆ ಹೊಸ ಸಾಗರ ಮಾರ್ಗಗಳ ಅನ್ವೇಷಣೆ ಸಾಗರ ವಾಣಿಜ್ಯವನ್ನು ವಿಸ್ತಾರಗೊಳಿಸಿತು. ಮೊದಲ ಹಂತದಲ್ಲಿ ಭಾರತದಂತಹ ಪ್ರದೇಶಗಳಲ್ಲಿ ಉತ್ಪನ್ನವಾಗುತ್ತಿದ್ದ ಸಾಂಬಾರ ಪದಾರ್ಥಗಳು, ಬಟ್ಟೆ, ಸಕ್ಕರೆ ಮುಂತಾದ ವಸ್ತುಗಳನ್ನು ತಂದು ವಿಪರೀತ ಹೆಚ್ಚಿದ ಬೆಲೆಯಲ್ಲಿ ಮಾರುವುದೇ ಈ ವಾಣಿಜ್ಯದ ಪ್ರಧಾನ ಅಂಗವಾಗಿತ್ತು. ಹೀಗೆ ಗಳಿಸಿದ ಲಾಭವೇ ಬಂಡವಾಳವಾಗಿಸಿ ತಮ್ಮ ದೇಶಗಳಲ್ಲಿ ತಯಾರಾದ ವಸ್ತುಗಳಿಗೆ ಈ ಪ್ರದೇಶಗಳನ್ನು ಮಾರುಕಟ್ಟೆಯಾಗಿ ಪರಿವರ್ತಿಸಿದರು.

ಆಗ ವ್ಯಾಪಾರಿಗಳು ಗ್ರಾಮಗಳಲ್ಲಿ ನೆಲೆಸಿದ್ದ ಕುಶಲಕರ್ಮಿಗಳಿಗೆ ತಮಗೆ ಬೇಕಾದ ಉತ್ಪನ್ನಗಳ ತಯಾರಿಕೆಯನ್ನು ಹಂಚಿ ತಮ್ಮ "ಆರ್ಡರ್"ಗಳಿಗೆ ತಕ್ಕಂತೆ ಮುಂಗಡ ನೀಡಿ ಉತ್ಪನ್ನಗಳನ್ನು ಪಡೆಯುತ್ತಿದ್ದರು. ಶೀಘ್ರವಾಗಿ ಉತ್ಪನ್ನಗಳನ್ನು ಪಡೆಯಲು ತಯಾರಿಕೆಗೆ ಅಗತ್ಯವಾದ ಕಚ್ಚಾ ವಸ್ತುಗಳನ್ನು ಕೂಡಾ ತಾವೇ ಸರಬರಾಜು ಮಾಡುವುದು ಆರಂಭವಾಯಿತು. ಕೆಲ ಪ್ರದೇಶಗಳು ನಿರ್ದಿಷ್ಟವಾದ ಉತ್ಪನ್ನಗಳಿಗೆ ವಿಶೇಷವಾಗಿ ಪ್ರಸಿದ್ಧವಾದವು. ವ್ಯಾಪಾರಿಗಳಿಂದ "ಆರ್ಡರ್"ಗಳ ಮೇಲೆ ಅವಲಂಬನೆ ಹೆಚ್ಚಾಯಿತು. ಈ ಎಲ್ಲ ಕಾರಣವಾಗಿ ಕುಶಲಕರ್ಮಿಗಳ ಕೆಲಸ ವ್ಯಾಪಾರಿ ಬಂಡವಾಳದ ಹಿಡಿತ ಹೆಚ್ಚಾಯಿತು. ಹಲವೆಡೆ ಕುಶಲಕರ್ಮಿಗಳ ಕೂಟಗಳು ಕೂಡಾ ಹೆಚ್ಚಿದ ಬೇಡಿಕೆಯ ಪ್ರಯೋಜನ ಪಡೆಯಲು ಸಾಧ್ಯವಾಯಿತು.


ಮ್ಯಾನುಫ್ಯಾಕ್ಚರಿ ಎಂಬ ಉತ್ಪಾದನಾ ವಿಧಾನ

ವ್ಯಾಪಾರ ಮತ್ತಷ್ಟು ಹೆಚ್ಚು ಹೆಚ್ಚು ವಿಸ್ತಾರವಾದಾಗ ಈ ವ್ಯವಸ್ಥೆ ಬಹಳ ತ್ರಾಸದಾಯಕವಾಯಿತು. ಹಲವು ಕುಶಲ ಕರ್ಮಿಗಳು ಒಂದೆಡೆ, ಒಂದೇ ಭಾವಣಿಯ ಅಡಿಯಲ್ಲಿ ತಯಾರಿಕೆಯಲ್ಲಿ ತೊಡಗುವುದು, ಒಂದೇ ಗುಣಮಟ್ಟದ ವಸ್ತುಗಳನ್ನು ತಯಾರಿಸುವುದು, ಕಚ್ಚಾ ವಸ್ತುಗಳನ್ನು ಒದಗಿಸುವುದು, ಪರಿಣತ ಕುಶಲಕರ್ಮಿಗಳ (ಮಾಸ್ಟರ್ ಕ್ರಾಫ್ಟ್‌ಮೆನ್) ಮೇಲುಸ್ತುವಾರಿ ಮತ್ತು ಅಪ್ರೆಂಟಿಸ್‌ಗಳ ತರಬೇತಿ ಮಾಡುವುದು, ವಸ್ತುಗಳ ತಯಾರಿಕೆಯನ್ನು ಹಡಗುಗಳು ಪ್ರಯಾಣಕ್ಕೆ ಹೊರಡುವುದರ ಜೊತೆಗೆ ಮೇಳೈಸುವುದು ಇವುಗಳು ಸುಲಭವಾಯಿತು. ಪ್ರಯಾಣದ, ಕಚ್ಚಾ ವಸ್ತುಗಳ, ಉತ್ಪನ್ನಗಳ ಉಗ್ರಾಣ, ತಯಾರಿಕೆಯ ಕಾರ್ಯಾಗಾರದ ಜಾಗದ ಬಾಡಿಗೆಯ ವೆಚ್ಚ ಇತ್ಯಾದಿಗಳು ಕಡಿಮೆಯಾದವು.

ಈ ವ್ಯವಸ್ಥೆಗೆ ಬ್ರಿಟನ್‌ನಲ್ಲಿ ಮ್ಯಾನುಫ್ಯಾಕ್ಚರಿ ಎಂದು ಕರೆಯಲಾಯಿತು. (ಭಾರತದಲ್ಲಿ ಈ ಹಂತವನ್ನು ತಲುಪಲಿಲ್ಲ.) ಈ ಹಂತದಲ್ಲಿ ಮೊದ ಮೊದಲು ಹಲವು ಕುಶಲ ಕರ್ಮಿಗಳು ಒಟ್ಟಾಗಿ ಒಂದೇ ಭಾವಣಿಯಡಿಯಲ್ಲಿ ಕೆಲಸ ಮಾಡುವಷ್ಟಕ್ಕೆ ಸೀಮಿತಗೊಂಡಿತ್ತು. ಆದರೆ ಒಂದೇ ಭಾವಣಿಯಲ್ಲಿ ಕೆಲಸ ಮಾಡಲಾರಂಭಿಸಿದಾಗ ಮತ್ತು ಉತ್ಪನ್ನಗಳನ್ನು ಶೀಘ್ರವಾಗಿ ಉತ್ಪಾದಿಸುವ ತುರ್ತು ಕೆಲಸದಲ್ಲಿ ಪರಿವರ್ತನೆಗೆ ಒತ್ತಾಯಿಸಿತು. ಮೊದಲಿನಂತೆ ಒಂದು ಉತ್ಪನ್ನ ಪೂರ್ಣಗೊಳ್ಳಲು ಅವಶ್ಯವಾದ ಎಲ್ಲ ಕ್ರಿಯೆಗಳನ್ನು ಒಬ್ಬ ಕುಶಲ ಕರ್ಮಿಯೇ ಪೂರೈಸುವ ಬದಲಾಗಿ, ಅದರ ವಿವಿಧ ಕೆಲಸಗಳನ್ನು ಬೇರೆ ಬೇರೆಯವರಿಗೆ ಹಂಚುವುದು ಆರಂಭವಾಯಿತು. ಇದು ಈ ವಿವಿಧ ಕ್ರಿಯೆಗಳಲ್ಲಿ ವಿಶೇಷಜ್ಞತೆ ಉಂಟಾಗಲು ಆರಂಭವಾಯಿತು. ಈ ವಿಶೇಷಜ್ಞತೆ ಕೇವಲ ವ್ಯಕ್ತಿಗಳಲ್ಲಿ ಮಾತ್ರ ಉಳಿಯಲಿಲ್ಲ. ಇಲ್ಲಿಯವರೆಗೆ ಕುಶಲಕರ್ಮಿಗಳು ಚಾಕು,ಕುಡಗೋಲು, ಸುತ್ತಿಗೆಯಂತಹ ಒಂದು ಉಪಕರಣವನ್ನು ಆ ಉತ್ಪನ್ನದ ತಯಾರಿಕೆಯ ಹಲವು ಕ್ರಿಯೆಗಳಿಗೆ ಬಳಸುತ್ತಿದ್ದರು. ಈಗ ಒಂದು ಉಪಕರಣವನ್ನು ಒಂದೇ ನಿರ್ದಿಷ್ಟ ಕ್ರಿಯೆಗೆ ಮಾತ್ರ ಬಳಸಲಾರಂಭಿಸಿದಾಗ ಆ ಕ್ರಿಯೆಯ ವೇಗವನ್ನು ಹೆಚ್ಚಿಸಲು ಆ ಕ್ರಿಯೆಯ ನಿರ್ದಿಷ್ಟ ಸ್ವರೂಪಕ್ಕೆ ಅನುಗುಣವಾಗಿ ಬದಲು ಮಾಡಿಕೊಳ್ಳಬೇಕಾಯಿತು. ಹೀಗೆ ಉಪಯೋಗಿಸುವ ಉಪಕರಣಗಳಲ್ಲಿಯೂ ವಿಶಿಷ್ಟ ಬದಲಾವಣೆಗಳನ್ನು ತಂದಿತು. ಈ ಬದಲಾವಣೆಗಳು ಎಂತಹ ವಿಶೇಷ ಸ್ವರೂಪ ಪಡೆಯಿತೆಂದರೆ, ಬ್ರಿಟನ್‌ನ ಬರ್ಮಿಂಗ್‌ಹ್ಯಾಮ್ ಎಂಬ ಒಂದು ಪ್ರದೇಶದಲ್ಲಿ 500 ವಿವಿಧ ಬಗೆಯ ಸುತ್ತಿಗೆಗಳನ್ನು ಗುರುತಿಸಲಾಗಿತ್ತು. ಇದು ಕೈಗಾರಿಕಾ ಉತ್ಪಾದನಾ ವಿಧಾನದ ಬೆಳವಣಿಗೆಗೆ ಹಾದಿ ತೆರೆದ ಮುಖ್ಯ ಹಂತ. ಮಾರ್ಕ್ಸ್‌ರವರು "ಬಂಡವಾಳ" ಕೃತಿಯಲ್ಲಿ ಈ ಪ್ರಕ್ರಿಯೆಯನ್ನು ವಿವರವಾಗಿ ಸರಳವಾಗಿ ವಿವರಿಸಿದ್ದಾರೆ.

ಒಂದು ಕಡೆ ಯುರೋಪಿನ ಒಳಗಡೆಯ ವ್ಯಾಪಾರ, ಮತ್ತೊಂದು ಕಡೆ ವಸಾಹತು ಪ್ರದೇಶಗಳಿಗೆ ರಫ್ತು ಸೇರಿ ವ್ಯಾಪಾರ ಬೃಹತ್ ಪ್ರಮಾಣವನ್ನು ಮುಟ್ಟಿತು. ಬೃಹತ್ ಪ್ರಮಾಣದ ವ್ಯಾಪಾರಕ್ಕೆ ಅಗತ್ಯವಾದ ಹಡಗುಗಳು, ಬಟ್ಟೆ ಇತ್ಯಾದಿಗಳ ತಯಾರಿಕೆಯನ್ನು ಶೀಘ್ರವಾಗಿ ಹೆಚ್ಚಿಸಬೇಕಾದ ಒತ್ತಡ ಬಿದ್ದಿತು. ಈ ಒತ್ತಡದಲ್ಲಿ ಹಲವು ಹೊಸ ಶೋಧಗಳು ಬಟ್ಟೆ ತಯಾರಿಕೆ, ಭೂಮಿ ಮತ್ತು ಸಾಗರ ಸಾರಿಗೆಯ ಕ್ಷೇತ್ರದಲ್ಲಿ ನಡೆದು ಹೊಸ ಯಂತ್ರಗಳನ್ನು ಬ್ರಿಟನ್‌ನ ಕುಶಲಕರ್ಮಿಗಳು ಕಂಡು ಹಿಡಿದುದನ್ನು ನೀವು ಹಿಂದಿನ ಲೇಖನಗಳಲ್ಲಿ ಓದಿದ್ದೀರಿ.

ನೂಲುವ ಯಂತ್ರ ಸ್ಪಿನ್ನಿಂಗ್ ಜೆನ್ನಿ, ನೇಯುವ ಯಂತ್ರ ಲೂಮ್ ಮೊದಲಾದ ಮೊದಲ ಹಂತದ ಯಂತ್ರಗಳು ಮೇಲೆ ವಿವರಿಸಿದ ವಿಶಿಷ್ಟ ರೂಪ ತಳೆದ ಉಪಕರಣಗಳನ್ನು ಒಟ್ಟುಗೂಡಿಸಿ ರೂಪಿಸಿದ್ದೇ ಆಗಿತ್ತು. ಜಲ ಶಕ್ತಿಯಿಂದ, ನೀರಿನ ಉಗಿಯ ಸಹಾಯದಿಂದ ಹಲವು ಯಂತ್ರಗಳನ್ನು ನಡೆಸಲಾರಂಭಿಸಿದಾಗ ನೂರಾರು ಕೆಲಸಗಾರರು ಒಂದೇ ಸ್ಥಳದಲ್ಲಿ ಕೆಲಸ ಮಾಡುವ ಪದ್ಧತಿ ರೂಢಿಗೆ ಬಂದಿತು. ಫ್ಯಾಕ್ಟರಿ ಉತ್ಪಾದನಾ ಪದ್ಧತಿಯ ಉಗಮವಾಯಿತು.


ಈಸ್ಟ್ ಇಂಡಿಯಾ ಕಂಪನಿ

ಇಲ್ಲಿಯವರೆಗೆ ಉತ್ಪಾದನೆಗೆ ವ್ಯಾಪಾರೀ ಬಂಡವಾಳಶಾಹಿಯ ಅಪರಿಮಿತ ಲಾಭದ ಒಂದು ಭಾಗ, ಕುಶಲಕರ್ಮಿಗಳಲ್ಲಿ ಕೆಲವು ಮಾಸ್ಟರ್ ಕ್ರಾಫ್ಟ್‌ಮೆನ್ ರಂತಹ ಮೇಲ್ ಸ್ತರದವರು ಗಳಿಸಿದ ಒಂದಷ್ಟು ಆದಾಯ ಕೂಡ ವಸ್ತುಗಳ ಉತ್ಪಾದನೆಯ ಮೇಲೆ ಹೂಡಲ್ಪಟ್ಟಿತ್ತು. ಕೈಗಾರಿಕಾ ಬಂಡವಾಳವಾಗಿತ್ತು.

ಆದರೆ ಆಧುನಿಕ ಯಂತ್ರಗಳಿಂದ ಕೂಡಿದ ಉತ್ಪಾದನಾ ವ್ಯವಸ್ಥೆಗೆ ಕುಶಲಕರ್ಮಿಗಳ ಬಳಿ ಇದ್ದ ಅಲ್ಪ ಸ್ವಲ್ಪ ಬಂಡವಾಳ ಸಾಕಾಗಲಿಲ್ಲ. ವ್ಯಾಪಾರಿಗಳ ಬಂಡವಾಳದ ಹಿಡಿತಕ್ಕೆ ಕುಶಲಕರ್ಮಿಗಳ ಮೂಲದವರು ಪೂರ್ಣವಾಗಿ ಸಿಲುಕಿಕೊಳ್ಳುವ ಸ್ಥಿತಿ ಇತ್ತು. ಇಂತಹ ಸಂದರ್ಭದಲ್ಲಿ ಅವರು ತಮ್ಮ ಬಳಿಯ ಸಣ್ಣ ಸಣ್ಣ ಬಂಡವಾಳಗಳನ್ನು ಒಟ್ಟುಗೂಡಿಸಿದರು. ಒಂದಷ್ಟು ಸಾಲ ಪಡೆದರು. ಕೈಗಾರಿಕೆಗಳನ್ನು ಸ್ಥಾಪಿಸಿದರು. ಇದು ಜಾಯಿಂಟ್ ಸ್ಟಾಕ್ ಕಂಪನಿ ಎಂಬ ರೂಪು ತಳೆಯಿತು.

ವಿವಿಧ ಕೈಗಾರಿಕಾ ರಂಗಗಳಲ್ಲಿ ಕುಶಲಕರ್ಮಿ ಬಂಡವಾಳಗಾರರು ಸ್ಥಾಪಿಸಿದ ಹಲವಾರು ಕೈಗಾರಿಕೆಗಳು ಸ್ಥಾಪಿಸಲ್ಪಟ್ಟವು. ಅವರ ಜೊತೆ ದುಡಿಯುತ್ತಿದ್ದ ಕುಶಲಕರ್ಮಿಗಳು ಅವರ ಈ ಕೈಗಾರಿಕೆಗಳಲ್ಲಿ ಕಾರ್ಮಿಕರಾಗಿ ದುಡಿಯಲಾರಂಭಿಸಿದರು. ಬಂಡವಾಳಶಾಹಿ ಕೈಗಾರಿಕೆಗಳ ಬೆಳವಣಿಗೆಯ ಪರಿಣಾಮವಾಗಿ ಹೀಗೆ ಕುಶಲ ಕರ್ಮಿಗಳ ನಡುವೆ ವರ್ಗ ವಿಭಜನೆ ಉಂಟಾಯಿತು.

ಹೀಗೆ ಕುಶಲಕರ್ಮಿಗಳು ತಂತಮ್ಮ ಸ್ವಂತ ಉಪಕರಣಗಳಿಂದ ಕೆಲಸ ಮಾಡುತ್ತಾ ಸ್ವತಂತ್ರವಾಗಿದ್ದವರು, ಕಾರ್ಮಿಕರಾದರು. ಕುಶಲಕರ್ಮಿಗಳ ನಡುವೆಯಿಂದಲೇ ಒಂದಿಷ್ಟು ಬಂಡವಾಳ ಶೇಖರಿಸಿದವರು, ವ್ಯಾಪಾರಿ ಬಂಡವಾಳಗಾರರ ಕೈಗಾರಿಕೆಗಳಲ್ಲಿ ದುಡಿಯುವಂತಾಯಿತು.

ಷೇರು ಕಂಪನಿಗಳೂ, ಷೇರು ಮಾರುಕಟ್ಟೆಯೂ

ಹಡಗಿನ ಸಾಹಸ ಯಾನಗಳು, ಹೊಸ ಪ್ರದೇಶಗಳ ಶೋಧಗಳು ಸಂಕ್ಷೇಪವಾಗಿ ವಿವರಿಸಿದಾಗ ಅವುಗಳಲ್ಲಿ ಅಡಗಿರುವ ಸರಣಿ ಸರಣಿ ಸೋಲುಗಳು, ಸಾವುಗಳು, ಸಂಕಟಗಳು, ಹಡಗುಗಳು ಸಮುದ್ರದಲ್ಲಿ ತಲೆಕೆಳಕಾಗುವುದು, ಕಡಲ್ಗಳ್ಳರ ದಾಳಿಗೆ ತುತ್ತಾಗುವುದು ಮುಂತಾದವು ನಮ್ಮ ಮನಸ್ಸಿನ ಆಳಕ್ಕೆ ಇಳಿಯದೆ ಮರೆಯಾಗಿ ಬಿಡುತ್ತವೆ. ಇವುಗಳಿಗೆ ಬಹು ದೊಡ್ಡ ಪ್ರಮಾಣದ ಹಣ ಬೇಕು. ಸೋಲುಗಳನ್ನು ಭರಿಸುವಷ್ಟು, ನಷ್ಟಗಳನ್ನು ತುಂಬಿಕೊಳ್ಳುವಷ್ಟು. ರಾಜ ಪ್ರಭುತ್ವಗಳು ಇವುಗಳಿಗೆ ಹಣ ಸುರಿದು ಮೊದಲ ಶೋಧಗಳನ್ನು ಮಾಡಿ ದಾರಿ ತೆರೆದ ಮೇಲೆ, ಯಾನಗಳಿಂದಾಗುವ ಲಾಭದ ಕನಸು ಹಲವರನ್ನು ಉತ್ತೇಜಿಸಿತು. ಇಂತಹ ಹಡಗುಗಳ ಕ್ಯಾಪ್ಟನ್‌ಗಳು, ಮಾಲೀಕರು ಇತರರಿಂದ ಹಣ ಕೂಡಿಸಿ, ಸಾಲ ಪಡೆದು ಯಾನಗಳನ್ನು ಕೈಗೊಂಡರು. ಆದರೆ ಯಾನಗಳು ಅಪಘಾತ, ದಾಳಿಗಳಿಗೆ ತುತ್ತಾಗಿ ಮುಳುಗಿದಾಗ ಅದರ ಮೇಲೆ ಹಣ ಹೂಡಿದ್ದವರಲ್ಲಿ ಹಲವರ ಬದುಕೂ ಮುಳುಗಿಹೋಯಿತು.

ಇಂತಹ ಸಂದರ್ಭದಲ್ಲಿ ಕೆಲವೇ ಜನ ಒಟ್ಟಾಗಿ ಹೂಡಿಕೆ ಮಾಡುವ ಬದಲಾಗಿ ಇಡೀ ದೇಶದಲ್ಲಿ ಯಾರು ಬೇಕಾದರೂ ತಮ್ಮಲ್ಲಿನ ಉಳಿತಾಯವನ್ನು ಬಂಡವಾಳವನ್ನಾಗಿ ಪರಿವರ್ತಿಸುವ ಸಾಧನವಾಗಿ ಜಾಯಿಂಟ್ ಸ್ಟಾಕ್ ಕಂಪನಿಗಳು ಬಹಳ ಉಪಯುಕ್ತವಾಗಿ ಬಳಕೆಗೆ ಬಂದವು.

ಪುಟ 6 ಕ್ಕೆ

ಸ್ಪಷ್ಟತೆಯ, ದಿಟ್ಟತೆಯ ಧೀರ ಸಂಗಾತಿ

ಡಾ.ಕೆ. ಪ್ರಕಾಶ್

"ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ವಿದ್ಯಾರ್ಥಿಗಳು ಸಮರಧೀರ ಹೋರಾಟ ನಡೆಸಿದರು. ಅವರ ಆಶಯಗಳು ಏನಾಗಿತ್ತು? ಇಂದು ಅವು ಈಡೇರಿವೆಯಾ? ಯಾಕೆ? ಸ್ವಾತಂತ್ರ್ಯಾನಂತರ ನಮ್ಮನ್ನಾಳುತ್ತಿರುವ ಸರ್ಕಾರಗಳು ಶಿಕ್ಷಣವನ್ನು ಖಾಸಗೀಕರಣ ಮಾಡಿವೆ, ಶ್ರೀಮಂತರಿಗೆ ಶಿಕ್ಷಣ ಎಂದಾಗುತ್ತಿದೆ... ಇದನ್ನು ಬದಲಾಯಿಸಬೇಕು, ಅದಕ್ಕೆ ವಿದ್ಯಾರ್ಥಿ ಸಮುದಾಯ ಸಂಘಟಿತರಾಗಬೇಕು..." ನಮ್ಮ ಮೆದುಳನ್ನು ಪ್ರೇರೇಪಿಸುವಂತೆ ಮಾತುಗಳು ಬರುತ್ತಿತ್ತು. ಅದು 1988... ನರಸಿಂಹರಾಜ ಕಾಲೋನಿ(ಎನ್ ಆರ್ ಕಾಲೋನಿ)ಯ ಅಂಗಡಿಬೀದಿಯಲ್ಲಿ ಸಮುದಾಯದ ರಾಜ್ಯ ಕಚೇರಿ ಮತ್ತು ಗುಂಡಣ್ಣ ಅವರ ಮನೆಯೂ ಆಗಿದ್ದ ಸಣ್ಣ ಕೋಣೆಯಲ್ಲಿ ಒಂದು ಇಪ್ಪತ್ತೈದು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಬಯ್ಯಾರೆಡ್ಡಿ ಆಡುತ್ತಿದ್ದ ಮಾತುಗಳು.


ಆಗಷ್ಟೇ ಎಪಿಎಸ್ ಸಂಜೆ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯ ತಯಾರಿಯಲ್ಲಿದ್ದೆವು. ಪಿಯುಸಿಯಿಂದಲೂ ಜೊತೆಯಲ್ಲೇ ಓದಿದ ಎಂ.ಅನಂತ ಸಮುದಾಯ ಸಾಂಸ್ಕೃತಿಕ ಸಂಘಟನೆಗೆ ಸೇರಿದ್ದರು. ನಮ್ಮನ್ನೂ ಸಮುದಾಯದ ಸದಸ್ಯರನ್ನಾಗಿ ಮಾಡಿದ್ದರು. ಆ ಸಂಪರ್ಕವನ್ನು ಬಳಸಿ ಎಸ್‌ಎಫ್‌ಐ ಎಂಬ ವಿದ್ಯಾರ್ಥಿಗಳ ಸಂಘಟನೆ ಸಭೆ ಇದೆ, ಅದರಲ್ಲಿ ಭಾಗವಹಿಸಿ ಎಂದು ಕರೆದಿದ್ದರು. ಅದು ಬಯ್ಯಾರೆಡ್ಡಿ ಅವರನ್ನು ಭೇಟಿ ಮಾಡಿದ ಮತ್ತು ಅವರ ಸ್ಪಷ್ಟ ಮತ್ತು ಮೊನಚಾದ ಮಾತುಗಳನ್ನು ಕೇಳಿದ ಮೊದಲ ಸಂದರ್ಭ. ಗಾಂಧಿ, ಭಗತ್‌ಸಿಂಗ್, ಅಂಬೇಡ್ಕರ್, ಮಾರ್ಕ್ಸ್, ಲೆನಿನ್, ಚೆಗೆವಾರ ಮುಂತಾದವರ ಕ್ರಾಂತಿಕಾರಿಗಳ ಮತ್ತು ಆದರ್ಶದ ಜೀವನಗಳು, ತ್ಯಾಗಗಳ ಬಗ್ಗೆ ಚರ್ಚೆಗಳು ನಡೆದವು. ಅಂದು ಆರಂಭವಾದ ಬಯ್ಯಾರೆಡ್ಡಿ ಮತ್ತು ನನ್ನ ಒಡನಾಟ, ಸೈದ್ಧಾಂತಿಕ, ರಾಜಕೀಯ ಮತ್ತು ಸಂಘಟನಾತ್ಮಕವಾಗಿ ಮೂರೂವರೆ ದಶಕಗಳ ಕಾಲ ಅಬಾಧಿತ ಸಂಬಂಧ.

ಭಾರತ ವಿದ್ಯಾರ್ಥಿ ಫೆಡರೇಶನ್ (SFI) ಘಟಕವನ್ನು ಮೊದಲ ಬಾರಿಗೆ ಎಪಿಎಸ್ ಸಂಜೆ ಕಾಲೇಜಿನಲ್ಲಿ ಆರಂಭಿಸಿದೆವು. ಬಯ್ಯಾರೆಡ್ಡಿ ಹಲವು ಬಾರಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳ ಸಭೆಯಲ್ಲಿ ಭಾಗವಹಿಸಿದ್ದರು. ಶಿಕ್ಷಣ ಸಂಸ್ಥೆಗಳಲ್ಲಿ ಎಸ್‌ಎಫ್‌ಐ ಘಟಕ ಇರಬೇಕು ಮತ್ತು ಕ್ರಿಯಾಶೀಲವಾಗಿರಬೇಕು ಎಂಬುದು ಅವರ ದೃಢವಾದ ನಿಲುವು. ಅದೇ ಸಂದರ್ಭಕ್ಕೆ ಬೆಂಗಳೂರಿನ ಟೌನ್‌ಹಾಲಿನಲ್ಲಿ ಅಂದಿನ ಪ್ರಧಾನಿ ರಾಜೀವ್ ಗಾಂಧಿ ಜಾರಿ ಮಾಡಿದ್ದ 'ನೂತನ ಶಿಕ್ಷಣ ನೀತಿ–1986'ರ ವಿರುದ್ಧ ರಾಷ್ಟ್ರೀಯ ಸಮಾವೇಶ ನಡೆಯಿತು. ನಮ್ಮ ಕಾಲೇಜಿನಿಂದ ಸುಮಾರು 50 ವಿದ್ಯಾರ್ಥಿಗಳನ್ನು ಪಾಲ್ಗೊಳಿಸಿದೆವು. ಈಗಿರುವ ಶಿಕ್ಷಣ ವ್ಯವಸ್ಥೆ ಬಗ್ಗೆ ಪರ್ಯಾಯ ವ್ಯವಸ್ಥೆಗಳ ಬಗ್ಗೆ ನಮ್ಮ ಕಣ್ಣೋಟ ಬದಲಾಗಲು ಆರಂಭವಾಯಿತು. NEP–1986 ಶಿಕ್ಷಣವನ್ನು ಹೇಗೆ ಖಾಸಗೀಕರಣ ಮಾಡುತ್ತದೆ, ಸಾಮಾನ್ಯ ಜನರಿಗೆ ಶಿಕ್ಷಣ ಹೇಗೆ ವಂಚನೆಯಾಗುತ್ತದೆ, ಎಂಬುದನ್ನು ನಾವು ವಿದ್ಯಾರ್ಥಿಗಳ ನಡುವೆ ತಿಳಿಸಲು ಆರಂಭಿಸುತ್ತಲೇ ಸಕ್ರಿಯ ಕಾರ್ಯಕರ್ತರಾಗಲು ಶುರು ಮಾಡಿದೆವು. ಇದೇ ಕಾಲಘಟ್ಟಕ್ಕೆ ಜಾರಿಯಾದ ಎಲ್‌ಪಿಜಿ ನೀತಿಗಳು ಪ್ರಜಾಪ್ರಭುತ್ವ ಮತ್ತು ಜನ ಶಿಕ್ಷಣದ ನೀತಿಯನ್ನು ಕೈಬಿಡಲು ಮುನ್ನುಡಿ ಬರೆಯಿತು. ಈಗಿನ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಜಾರಿ ಮಾಡಿರುವ NEP–2020 ಗೆ ಆಧಾರ ಸ್ಥಂಭ ರಾಜೀವ್ ಗಾಂಧಿ ನೇತೃತ್ವದ ಕಾಂಗ್ರೆಸ್ ಸರ್ಕಾರ ಜಾರಿ ಮಾಡಿದ ಶಿಕ್ಷಣ ನೀತಿ. ಇಂತೆಲ್ಲಾ ಬೆಳವಣಿಗೆಗಳ ಬಗ್ಗೆ ಬಯ್ಯಾರೆಡ್ಡಿಯವರು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಪರಿಣಾಮಕಾರಿಯಾಗಿ ಮಾಡುತ್ತಿದ್ದರು. ನನ್ನ ಸಮಕಾಲೀನ ವಿದ್ಯಾರ್ಥಿ ಕಾರ್ಯಕರ್ತರ ಮನೋಭಾವವನ್ನು ಇವೆಲ್ಲವೂ ಸುಪ್ತವಾಗಿ ರೂಪಿಸುತ್ತಿದ್ದವು.

ಸಂಜೆ ಕಾಲೇಜಿನ ವಿದ್ಯಾರ್ಥಿಗಳು ಅನುಭವಿಸುತ್ತಿದ್ದ ಸಮಸ್ಯೆಗಳ ಪರಿಹಾರಕ್ಕೆ ಹಲವು ಬಗೆಯ ಚಟುವಟಿಕೆಗಳನ್ನು ರೂಪಿಸುವುದರಲ್ಲಿ ಅವರ ಮಾರ್ಗದರ್ಶನ ಪ್ರಮುಖವಾಗಿತ್ತು. ಆಗ ಬೆಂಗಳೂರಿನಲ್ಲಿ ಗಣನೀಯ ಸಂಖ್ಯೆಯ ಸಂಜೆ ಕಾಲೇಜುಗಳಿದ್ದವು. ಅಲ್ಲಿನ ವಿದ್ಯಾರ್ಥಿಗಳು ಬೆಳಿಗ್ಗೆ ದುಡಿಮೆ ಮಾಡಿ ಸಂಜೆ ಕಾಲೇಜಿಗೆ ಬರುತ್ತಿದ್ದರಿಂದ ಸರ್ಕಾರ ಅವರಿಗೆ ನೀಡುತ್ತಿದ್ದ ರಿಯಾಯಿತಿ ಬಸ್ ಪಾಸ್ ರದ್ದುಗೊಳಿಸಿತು. ಇದರ ವಿರುದ್ಧ ಎಪಿಎಸ್ ಸಂಜೆ ಕಾಲೇಜು ಕೇಂದ್ರಿತವಾಗಿ ಎಲ್ಲಾ ಸಂಜೆ ಕಾಲೇಜುಗಳ ವಿದ್ಯಾರ್ಥಿಗಳನ್ನು ಜಂಟಿ ಹೋರಾಟಕ್ಕೆ ಅಣಿನೆರೆಸುವುದರಲ್ಲಿ ಬಯ್ಯಾರೆಡ್ಡಿ ಅವರ ಪಾತ್ರ ಮುಖ್ಯವಾದದ್ದು. ಹೋರಾಟಕ್ಕೆ ಸರ್ಕಾರ ಮಣಿಯಿತು. ವಿದ್ಯಾರ್ಥಿಗಳಿಗೆ ಬಸ್ ಪಾಸ್ ಮತ್ತೆ ದೊರೆಯಿತು.

ನಾನು ಕಾಲೇಜಿಗೆ ಸೇರುವ ಮುಂಚೆ ಐಟಿಐ ತರಬೇತಿಯನ್ನು ಪಡೆದಿದ್ದೆ. ಎಸ್‌ಎಫ್‌ಐ ರಾಜ್ಯ ಸಮಿತಿ ವಿಭಾಗವಾರು ವಿದ್ಯಾರ್ಥಿಗಳನ್ನು ಸಂಘಟಿಸಲು ತೀರ್ಮಾನ ಮಾಡಿತ್ತು. ಐಟಿಐ ವಿದ್ಯಾರ್ಥಿಗಳ ರಾಜ್ಯ ಸಮಾವೇಶವನ್ನು 1990ರಲ್ಲಿ ಬೆಂಗಳೂರಿನಲ್ಲಿ ಸಂಘಟಿಸಲು ತೀರ್ಮಾನ ಮಾಡಿ, ನನ್ನನ್ನು ರಾಜ್ಯಾದ್ಯಂತ ಓಡಾಟ ಮಾಡಲು ಹಚ್ಚಿದರು. ಈ ಪ್ರಕ್ರಿಯೆಯಲ್ಲಿ ನನಗರಿವಿಲ್ಲದೆಯೇ ನಾನು ಕ್ರಿಯಾಶೀಲ ಕಾರ್ಯಕರ್ತನಾಗುತ್ತಿದ್ದೆ. ಕುಟುಂಬದ ಪರಿಸ್ಥಿತಿಯ ಕಾರಣಕ್ಕೆ ನಾನು ಒಂದು ಕೆಲಸಕ್ಕೆ ಸೇರಬೇಕಿತ್ತು. ಈ ನಡುವೆ ಅಂದಿನ ಸರ್ಕಾರದ ಕೆಇಬಿ ಇಲಾಖೆಯಲ್ಲಿ ಮೀಟರ್ ರೀಡರ್ ಹುದ್ದೆಗೆ ಅರ್ಜಿಯನ್ನು ಹಾಕಿದ್ದೆ. ಇಂಟರ್‌ವ್ಯೂ ಬಂದಿತ್ತು. ಸಾಕಷ್ಟು ಉತ್ತಮವಾಗಿ ಸಂದರ್ಶನವನ್ನು ನಿಭಾಯಿಸಿದ್ದೆ. ಲಂಚ ಕೊಡದೆ ಕೆಲಸ ಸಿಗುವುದಿಲ್ಲ ಎಂದು ನಂತರ ತಿಳಿಯಿತು. ಇದರಿಂದ ತುಂಬಾ ಬೇಸರಗೊಂಡಿದ್ದೆ. ಇದನ್ನೇ ಬಳಸಿ ಬಯ್ಯಾರೆಡ್ಡಿಯವರು, ಇದು ಹೇಗೆ ಲಂಚಕೋರ ಸಮಾಜವಾಗಿದೆ, ಇದನ್ನು ಬದಲಾವಣೆ ಮಾಡಲು ವಿದ್ಯಾರ್ಥಿಗಳು ಮತ್ತು ಯುವಜನರು ದುಡಿಯುವ ಅಗತ್ಯವಿದೆ ಎಂಬುದನ್ನು ವಿವರಿಸಿ ಮಾತನಾಡಿದ್ದರು. ವ್ಯವಸ್ಥೆಯ ಬಗ್ಗೆ ಕೋಪ ಹೆಚ್ಚುತ್ತಿತ್ತು. ನನ್ನ ಮುಂದಿನ ಭವಿಷ್ಯದ ಬಗ್ಗೆ ಗೊಂದಲಗಳು ಆರಂಭಗೊಂಡಿದ್ದವು.

ನನಗೆ ಐಎಎಸ್ ಮಾಡಬೇಕೆಂಬ ಕನಸು. ಪದವಿ ಮುಗಿಸಿ ಎಂಎ ಚರಿತ್ರೆಗೆ ಬೆಂಗಳೂರು ವಿವಿಗೆ ಸೇರಿದೆ. ಜೊತೆಯಲ್ಲೇ ಕೇಂದ್ರ ಸೇವಾ ಆಯೋಗದ ಪರೀಕ್ಷೆಗಳಿಗೆ ತಯಾರಿ ಮಾಡುತ್ತಿದ್ದೆ. ಹೀಗೇ ಬಿಟ್ಟರೆ ನಾನು ಸಿಗುವುದಿಲ್ಲ ಎಂದು ಎಣಿಸಿದ ಬಯ್ಯಾರೆಡ್ಡಿ ನನ್ನನ್ನು ಎಸ್‌ಎಫ್‌ಐನ ರಾಜ್ಯ ಸಹ–ಕಾರ್ಯದರ್ಶಿ ಎಂದು ಆಯ್ಕೆಯಾಗುವಂತೆ ಮುತುವರ್ಜಿ ಮಾಡಿ, ಕೆಲವು ಜಿಲ್ಲೆಗಳಿಗೆ ಓಡಾಟ ಮಾಡಲು ಹಚ್ಚಿದರು. ಇದೇ ಸಂದರ್ಭಕ್ಕೆ ಅಂದಿನ ಸಿಪಿಐ(ಎಂ)ನ ಕಾರ್ಯದರ್ಶಿಯಾಗಿದ್ದ ಪಿ.ರಾಮಚಂದ್ರರಾವ್ ಅವರ ಬಳಿ ಮಾತನಾಡಿ ನನಗೆ ಮಾಸಿಕ ರೂ.250 ಭತ್ಯೆ ನೀಡಲು ಆರಂಭಿಸಿದರು. ಐಎಎಸ್ ಸಿದ್ಧತೆಗೆಂದು ಸೌತೆಂಡ್ ಸರ್ಕಲ್ ಲೈಬ್ರರಿಗೆ ನಿತ್ಯ ಹೋಗುತ್ತಿದ್ದ ನಾನು ಕ್ರಮೇಣ ಮಲ್ಲೇಶ್ವರಂ ಸರ್ಕಲ್ ಬಳಿಯಿದ್ದ ಎಸ್‌ಎಫ್‌ಐ ಕಚೇರಿಗೆ ಮಾರ್ಗ ಬದಲಾಯಿಸಿದ್ದೆ. ಆರ್ಥಿಕ ಶೋಷಣೆ ಮತ್ತು ಸಾಮಾಜಿಕ ಅಸಮಾನತೆಯ ಸಮಾಜವನ್ನು ಬದಲಾಯಿಸದ ಹೊರತು ನಮ್ಮ ಜನರ ಬದುಕು ಮತ್ತು ಭಾರತದ ಭವಿಷ್ಯ ಉತ್ತಮವಾಗಲಾರದೆಂಬ ಕಣ್ಣೋಟ ಗಟ್ಟಿಯಾಗತೊಡಗಿತು. ಈ ಬದಲಾವಣೆಗೆ ಪ್ರಮುಖವಾಗಿ ಕಾರಣ ಬಯ್ಯಾರೆಡ್ಡಿಯವರು. ಅವರ ಮಾತಿನ ಸ್ಪಷ್ಟತೆ ಮತ್ತು ಖಚಿತತೆ ನನ್ನಲ್ಲಿದ್ದ ಗೊಂದಲವನ್ನು ಕಡಿಮೆ ಮಾಡುತ್ತಿತ್ತು. ಕೊನೆಗೆ ನನ್ನ ಐಎಎಸ್ ಕನಸನ್ನು ಕೈಬಿಟ್ಟೆ. ಪೂರ್ಣಾವಧಿ ಕಾರ್ಯಕರ್ತನಾಗಿ ಮಾರ್ಪಟ್ಟೆ. ಆದರ್ಶದ ಕನಸುಗಳನ್ನು ಹೊತ್ತ ಯುವಜನರನ್ನು ಸಮಾಜದ ಬದಲಾವಣೆಗಾಗಿ ಪರಿವರ್ತನೆ ಮಾಡುವಲ್ಲಿ ಮತ್ತು ತಾನು ಸ್ವತಃ ಅದಕ್ಕೆ ಮಾದರಿಯಾಗಿ ನಡೆದುಕೊಳ್ಳುವಲ್ಲಿ ಬಯ್ಯಾರೆಡ್ಡಿಯವರು ರಾಜ್ಯದ ಎಡ ಚಳುವಳಿಗೆ ಮಹತ್ತರವಾದ ಕೊಡುಗೆಯನ್ನು ನೀಡಿದ್ದಾರೆ. ಇಂದು ರಾಜ್ಯದ ಸಿಪಿಐ(ಎಂ)ನ ಮುಖಂಡತ್ವದಲ್ಲಿರುವ ಹಲವಾರು ಸಂಗಾತಿಗಳನ್ನು ರೂಪಿಸುವಲ್ಲಿ ಅವರ ಕೊಡುಗೆಯಿದೆ.



ಬಯ್ಯಾರೆಡ್ಡಿಯವರಿಗೆ ಕರ್ನಾಟಕ ಪ್ರಾಂತ ರೈತ ಸಂಘದ ಹೊಣೆಗಾರಿಕೆಯ ಕಾರಣಕ್ಕೆ ಎಸ್‌ಎಫ್‌ಐನ ರಾಜ್ಯಾಧ್ಯಕ್ಷ ಸ್ಥಾನದಿಂದ ಬಿಡುಗಡೆ ಹೊಂದಿದಾಗ 1994ರಲ್ಲಿ ನಾನು ರಾಜ್ಯ ಕಾರ್ಯದರ್ಶಿಯಾದೆ. ಅಲ್ಲಿಂದ ನಿರಂತರ ಅವರ ಮಾರ್ಗದರ್ಶನ ಮತ್ತು ಒಡನಾಟ ತೀವ್ರಗೊಳ್ಳುತ್ತಾ ನಡೆಯಿತು. 1991ರಲ್ಲಿ ಬಯ್ಯಾರೆಡ್ಡಿಯವರು ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿ ಸದಸ್ಯರಾದರು. 1997ರಲ್ಲಿ ಅವರು ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದಾಗ ನಾನು ರಾಜ್ಯ ಸಮಿತಿ ಸದಸ್ಯನಾದೆ. ಪಕ್ಷವನ್ನು ಕರ್ನಾಟಕದಲ್ಲಿ ವಿಸ್ತರಿಸಲು ಇರುವ ಅಡ್ಡಿಗಳ ಬಗ್ಗೆ, ಬದಲಾಗಬೇಕಾದ ಅಂಶಗಳ ಬಗ್ಗೆ ಅವರಿಗೂ ಮತ್ತು ನನಗೂ ಬಹುತೇಕ ಸಾಮ್ಯತೆಗಳಿದ್ದವು. ಇದೇ ವಿಚಾರಕ್ಕೆ ಅವರೊಂದಿಗೆ ಗಾಢವಾದ ಸಂಬಂಧ ಏರ್ಪಟ್ಟಿತ್ತು. ಈ ನಿಟ್ಟಿನಲ್ಲಿ ಪಕ್ಷದ ಸದಸ್ಯರು ನಡೆಸಬೇಕಾದ ಆಂತರಿಕ ಬಾಹ್ಯ ಸಂಘರ್ಷಗಳ ಕುರಿತು ಸಮಾನವಾದ ಕಣ್ಣೋಟವಿತ್ತು.

ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ನಂತರ ಅಧ್ಯಕ್ಷರಾಗಿ ಬಯ್ಯಾರೆಡ್ಡಿಯವರು ನಡೆಸಿದ ರೈತರ ಹೋರಾಟಗಳಿಗೆ ಲೆಕ್ಕವಿಲ್ಲ. ಭೂಸ್ವಾಧೀನದ ವಿರುದ್ಧ, ಭೂ ಮಂಜೂರಾತಿಗಾಗಿ, ಸರಿಯಾದ ಭೂ ಪರಿಹಾರಕ್ಕಾಗಿ, ಬೆಳೆಗಳಿಗೆ ವೈಜ್ಞಾನಿಕ ಬೆಲೆಗಾಗಿ, ಕಾವೇರಿ ನದಿ ನೀರಿನ ವಿವಾದ ಪರಿಹಾರಕ್ಕಾಗಿ, ರೇಷ್ಮೆ, ಟೊಮೊಟೊ, ಕಬ್ಬು, ಭತ್ತ, ತೊಗರಿ, ಹಾಲು, ಕೋಳಿ, ವಿದ್ಯುತ್ ಪಂಪ್ ಸೆಟ್, ಮುಂತಾದ ರೈತರ ಪ್ರಶ್ನೆಗಳಿಗೆ ಬಯ್ಯಾರೆಡ್ಡಿ ನೀಡಿದ ನಾಯಕತ್ವ ರಾಜ್ಯದ ರೈತರು ಮರೆಯಲು ಸಾಧ್ಯವಿಲ್ಲ. ಸರ್ಕಾರಗಳ ಜೊತೆ ನಿರ್ದಾಕ್ಷಿಣ್ಯವಾಗಿ ಮಾತುಕತೆ ಮಾಡುತ್ತಿದ್ದ ಅವರಿಗೆ ಸಮಸ್ಯೆಗಳನ್ನು ಇತ್ಯರ್ಥಪಡಿಸುವ ಗುಣವನ್ನು ಸಹಜವಾಗಿ ಮೈಗೂಡಿಸಿಕೊಂಡಿದ್ದರು. ರಾಜ್ಯದಲ್ಲಿ ಕೆಲವು ಪ್ರಮುಖವಾದ ಪ್ರಶ್ನೆಗಳನ್ನು ಕೇಂದ್ರೀಕರಿಸಿ, ನಿರಂತರವಾದ ಮತ್ತು ದೀರ್ಘಾವಧಿ ಹೋರಾಟಗಳನ್ನು ರೂಪಿಸಬೇಕೆಂದು ಪ್ರತಿಪಾದಿಸುತ್ತಿದ್ದರು. ಮುಂದಿನ ದಿನಗಳಲ್ಲಿ ರೈತರು ದೊಡ್ಡ ಪ್ರಮಾಣದಲ್ಲಿ ಭೂಮಿಯನ್ನು ಕಳೆದುಕೊಳ್ಳುತ್ತಾರೆ. ಹಾಗಾಗಿ, ಭೂಮಿಯ ಪ್ರಶ್ನೆಯನ್ನೇ ಅತ್ಯಂತ ಪ್ರಧಾನವಾಗಿ ಇಟ್ಟುಕೊಂಡು ಬೃಹತ್ ಹೋರಾಟಗಳನ್ನು ರೂಪಿಸಬೇಕೆಂಬುದು ಅವರ ನಿಲುವಾಗಿತ್ತು.

ಸಿಪಿಐ(ಎಂ)ನ ಕಣ್ಣೋಟ ಸರಿಯಾಗಿದೆ ಮತ್ತು ಸಮರ್ಥವಾಗಿದೆ ಎಂದು ನಾವು ಹೇಳುವಾಗ, ಹಾಗಾದರೆ ಏಕೆ ಅದು ಜನಮಾನಸದ ರಾಜಕೀಯ ಪಕ್ಷವಾಗಿ ಆಗಿಲ್ಲ ಎಂಬ ಪ್ರಶ್ನೆಗಳ ಬಗ್ಗೆ ತುಂಬಾ ಚರ್ಚಿಸುತ್ತಿದ್ದರು. ಸಿಪಿಐ(ಎಂ)ನ ಸ್ಪಷ್ಟವಾದ ರಾಜಕೀಯ ಕಣ್ಣೋಟವನ್ನು ಪ್ರಸ್ತುತ ಸನ್ನಿವೇಶಗಳಿಗೆ ಅನ್ವಯ ಮಾಡಬೇಕಾದ ಅಂಶಗಳು ಮತ್ತು ಅದಕ್ಕೆ ಬೇಕಾದ ಸಂಘಟನಾ ವಿಧಾನಗಳಲ್ಲಿನ ಬದಲಾವಣೆಗಳ ಬಗ್ಗೆ ಬಲವಾಗಿ ಪ್ರತಿಪಾದಿಸುತ್ತಿದ್ದರು. ಕಮ್ಯುನಿಸ್ಟರಾದವರಿಗೆ ಇರಬೇಕಾದ ಮೌಲ್ಯಗಳ ಕುರಿತು ಅವರಿಗೆ ನಿಖರತೆಯಿತ್ತು ಮತ್ತು ಇದನ್ನು ಪಕ್ಷದೊಳಗೆ ಜಾರಿಗೊಳಿಸಲು ಮುಲಾಜಿಲ್ಲದ ಹೋರಾಟ ನಡೆಸುವ ಚಾತಿಯಿತ್ತು. ಇದರಿಂದ ಉಂಟಾಗಬಹುದಾದ ಪಕ್ಷದೊಳಗಿನ ಸ್ಥಾನಮಾನಗಳ ಏರುಪೇರುಗಳ ಬಗ್ಗೆ ತಲೆಕೆಡಿಸಿಕೊಂಡಿರಲಿಲ್ಲ. ಇತರೆ ಕಾರ್ಯಕರ್ತರನ್ನು ಬೆಳೆಸಲು ತಮ್ಮ ವೈಯುಕ್ತಿಕ ಅವಕಾಶಗಳನ್ನು ಬಿಟ್ಟುಕೊಟ್ಟರು. ಇಂತಹ ಅಂಶಗಳೇ ನನಗೆ ಅವರೊಂದಿಗೆ ಅತ್ಯಂತ ಆತ್ಮೀಯವಾದ ಒಡನಾಡಿತನವನ್ನು ಬೆಳೆಸಿತ್ತು.

ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದಲ್ಲಿ ಜನಿಸಿದ್ದ ಬಯ್ಯಾರೆಡ್ಡಿಯವರು, ಸಹಜವಾಗಿ ಮೂಡಿಬಂದಿದ್ದ ಸಮಸಮಾಜದ ಆಶಯಗಳಿಂದಾಗಿ, ಒಬ್ಬ ಕಮ್ಯುನಿಸ್ಟ್ ಹೋರಾಟಗಾರರಾದರು. ಅವರು ಮೇಲ್ನೋಟಕ್ಕೆ ಒಬ್ಬ ಕಠಿಣ ಮನಸ್ಸಿನ ವ್ಯಕ್ತಿಯಾಗಿ ಕಾಣುತ್ತಿದ್ದರು. ಸಮತಾವಾದವನ್ನು ಕನಸುತ್ತಿದ್ದ, ಜನರನ್ನು ಪ್ರೀತಿಸುತ್ತಿದ್ದ, ಸಂಗಾತಿಗಳ ಕಷ್ಟಗಳಿಗೆ ಜೊತೆಯಾಗಿದ್ದ ಒಬ್ಬ ನೈಜ 'ಕಾಮ್ರೇಡ್' ಅವರೊಳಗಿದ್ದ. ಕೆಲವು ವರ್ಷಗಳಿಂದ ಅವರ ಶ್ವಾಸಕೋಶದ ಸಮಸ್ಯೆಗಳು ತೀವ್ರವಾಗಿ ಬಾಧಿಸಲು ಆರಂಭಿಸಿತ್ತು. ಆದರೆ ವಿಶ್ವಾಸವನ್ನು ಕಳೆದುಕೊಂಡಿರಲಿಲ್ಲ. ಪಕ್ಷದ ತುಮಕೂರು ಸಮ್ಮೇಳನದ ಮೂರು ದಿನಗಳ ಹಿಂದಿನವರೆಗೆ ಉತ್ಸಾಹದಿಂದ ಕೆಲಸಗಳಲ್ಲಿ ಭಾಗಿಯಾದ್ದರು. ಅನಾರೋಗ್ಯದ ಕಾರಣಕ್ಕೆ ಪಕ್ಷದ ಕಚೇರಿಯಲ್ಲೇ ಉಳಿದು ಕೆಲಸ ಮಾಡುವ ಬಗ್ಗೆ ಮಾತನಾಡುತ್ತಿದ್ದರು. ಚೆನ್ನರಾಯಪಟ್ಟಣ ರೈತರ ಹೋರಾಟವನ್ನು ತುಂಬಾ ಅಭಿಮಾನದಿಂದ ಮಾರ್ಗದರ್ಶನ ಮಾಡುತ್ತಿದ್ದರು. ರೈತರ ಈ ಹೋರಾಟದಲ್ಲಿ ಸಾಯುವುದಿದ್ದರೆ, ತಾನೇ ಮುಂಚೂಣಿಯಲ್ಲಿರುತ್ತೇನೆ ಎಂದು ಹಲವು ಬಾರಿ ಹೇಳುತ್ತಿದ್ದರು. ಕಠಿಣವಾದ ಅನಾರೋಗ್ಯದ ಕೊನೆಯ ದಿನಗಳಲ್ಲೂ ರೈತರಿಗಾಗಿ ಬಯ್ಯಾರೆಡ್ಡಿ ಮನ ಮಿಡಿಯುತ್ತಿತ್ತು.

ನಾನು ತುಮಕೂರು ಸಮ್ಮೇಳನದಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿಯಾಗಿ ಆಯ್ಕೆಯಾದ ನಂತರ ಅವರನ್ನು ಭೇಟಿ ಮಾಡಲು ಸುಗುಣ ಆಸ್ಪತ್ರೆಗೆ ಹೋಗಿದ್ದೆ. ಕಲಾಪಗಳ ಬಗ್ಗೆ ತಿಳಿದುಕೊಂಡರು.

ಪುಟ 6 ಕ್ಕೆ



ಬದ್ಧತೆ ಹಾಗೂ ಸಂಗಾತಿತನಕ್ಕೆ ಮತ್ತೊಂದು ಹೆಸರೇ ಬಯ್ಯಾರೆಡ್ಡಿ

ಕೆ.ಮಹಾಂತೇಶ

ಅದು 1988ರ ಮೇ ತಿಂಗಳು. ಆಗಷ್ಟೇ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿದ್ದ ನಾನು ರಜೆಯಲ್ಲಿ ದಾವಣಗೆರೆಯ ಶಾಂತಿ ವಿಲಾಸ ಲಾಡ್ಜ್‌ನಲ್ಲಿ ರೂಂ ಬಾಯ್ ಆಗಿ ಕೆಲಸಕ್ಕೆ ಸೇರಿದ್ದೆ. ನಾನು ಕೆಲಸ ಮಾಡುತ್ತಿದ್ದ ಲಾಡ್ಜ್‌ಗೆ ಬಂದ ಅಂದಿನ ಎಸ್‌ಎಫ್‌ಐ ನಾಯಕರಾಗಿದ್ದ ಕಾಮ್ರೇಡ್ ಕೃಷ್ಣಾಜೀ ಕಲಾಲ್ ಅವರು, ಬಯ್ಯಾರೆಡ್ಡಿಯವರು ನಿನ್ನನ್ನು ಕರೆದುಕೊಂಡು ಬರಲು ಹೇಳಿದ್ದಾರೆ ಎಂದು ನನ್ನನ್ನು ಹರಿಹರಕ್ಕೆ ಕರೆದೊಯ್ದರು. ಹರಿಹರ ತಾಲೂಕಿನ ಕೊಂಡಜ್ಜಿಯಲ್ಲಿ ಎಸ್‌ಎಫ್‌ಐನ ರಾಜ್ಯಮಟ್ಟದ ಶಿಬಿರವನ್ನು ಜೂನ್ 2 ರಿಂದ 6 ವರೆಗೆ ಆಯೋಜಿಸಲಾಗಿತ್ತು. ಅದರ ತಯಾರಿ ಕೆಲಸಕ್ಕಾಗಿ ಅವರು ಹರಿಹರಕ್ಕೆ ಬಂದಿದ್ದರು. ಅದನ್ನು ಯಶಸ್ವಿಗೊಳಿಸುವ ಭಾಗವಾಗಿ ನನ್ನನ್ನೂ ಅಲ್ಲಿಗೆ ಅವರು ಕರೆಸಿಕೊಂಡಿದ್ದರು. ನಾನು ಅಲ್ಲಿಗೆ ಸೇರುವ ಹೊತ್ತಿಗಾಗಲೇ ಮೊಳಕಾಲ್ಮೂರು ತಾಲೂಕಿನ ನಾಯಕರಾಗಿದ್ದ ಎ.ಜಿ. ಗಂಗಾಧರ್, (ಈಗ ನಿವೃತ್ತ ಜಿಲ್ಲಾ ನ್ಯಾಯಾಧೀಶರು) ಡಿ.ಎಂ. ಮಲಿಯಪ್ಪ, ಹೊಸಪೇಟೆಯಿಂದ ಎಲ್. ಮಂಜುನಾಥ್ ಬಂದು ಸೇರಿದ್ದರು. ಹರಿಹರದಲ್ಲಿ ಆಗ ಎಸ್‌ಎಫ್‌ಐ ನಾಯಕರಾಗಿದ್ದವರು ಆರ್. ಅಣ್ಣಪ್ಪ. ಅವರು ನನ್ನ ಬಂಧುವೂ ಆಗಿದ್ದರು.

ನಾನು 1987 ಡಿಸೆಂಬರ್‌ನಲ್ಲಿ ಅದೇ ಹರಿಹರದಲ್ಲಿ ನಡೆದ ಎಸ್‌ಎಫ್‌ಐ ಜಿಲ್ಲಾ ಸಮ್ಮೇಳನ ಹಾಗೂ 1988 ಜನವರಿ ಕಲುಬರುಗಿಯಲ್ಲಿ ನಡೆದ ಎಸ್‌ಎಫ್‌ಐ 5ನೇ ರಾಜ್ಯ ಸಮ್ಮೇಳನದಲ್ಲೂ ಪ್ರತಿನಿಧಿಯಾಗಿ ಭಾಗವಹಿಸಿದ್ದೆ. ಆ ಸಮ್ಮೇಳನದಲ್ಲೇ ಎಸ್‌ಎಫ್‌ಐ ರಾಜ್ಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿ ಜಿ.ಸಿ. ಬಯ್ಯಾರೆಡ್ಡಿ ಹಾಗೂ ಎಸ್.ವೈ. ಗುರುಶಾಂತ್ ಆಯ್ಕೆಯಾಗಿದ್ದರು. ಆದರೆ ಹರಿಹರಕ್ಕೆ ಬರುವವರೆಗೂ ಅವರಿಬ್ಬರ ಜತೆ ನೇರವಾಗಿ ನನಗೆ ಸಂಪರ್ಕ ಇರಲಿಲ್ಲ. ಹರಿಹರ ಶಿಬಿರ ತಯಾರಿಗಾಗಿ ಕೆಲಸ ಮಾಡುವ ದಿನಗಳಿಂದಷ್ಟೇ ಅವರೊಂದಿಗಿನ ಒಡನಾಟ ಆರಂಭವಾಯಿತು. ಬಯ್ಯಾರೆಡ್ಡಿ ಅವರು ಶಿಸ್ತಿನ ಸಂಗಾತಿಯಾಗಿದ್ದರು. ಅವರು ನಿತ್ಯ ಎಲ್ಲರಿಗಿಂತ ಮುಂಚೆ ಎದ್ದು ರೆಡಿಯಾಗುತ್ತಿದ್ದರು. ನಾವುಗಳು ರೆಡಿಯಾದ ಬಳಿಕ ಎಲ್ಲರೂ ಹೋಟೆಲ್‌ಗೆ ಹೋಗಿ ತಿಂಡಿ ತಿನ್ನುವುದು, ಬಳಿಕ ಹರಿಹರದ ಬೀದಿಯ ಅಂಗಡಿಗಳಲ್ಲಿ ಶಿಬಿರ ಯಶಸ್ವಿಗೆ ಹಣಸಂಗ್ರಹ ಮಾಡುವುದು ಮಧ್ಯಾಹ್ನ ಹಾಗೂ ರಾತ್ರಿ ಮೊದಲೇ ನಿಗದಿಪಡಿಸಲಾದ ಯಾವುದಾದರೂ ಕಾರ್ಮಿಕ ಸಂಘಟನೆ ಸಿಐಟಿಯು ಹಾಗೂ ಸಿಪಿಐ(ಎಂ)ನ ಸಂಗಾತಿಗಳ ಮನೆಗೆ ಊಟಕ್ಕೆ ಹೋಗುವುದು ಹಲವು ದಿನಗಳು ನಿರಂತರವಾಗಿ ನಡೆದಿತ್ತು. ಪ್ರತಿದಿನ ಸಂಜೆ ಅಲ್ಲಿ ಪಕ್ಷದ ಮುಖಂಡರಾಗಿದ್ದ ಕಾಂ. ನಿತ್ಯಾನಂದಸ್ವಾಮಿ ನೇತೃತ್ವದಲ್ಲಿ ಪಕ್ಷದ ಕಾರ್ಯಕರ್ತರು, ಹಿತೈಷಿಗಳು, ಮೈಸೂರು ಕಿರ್ಲೋಸ್ಕರ್, ಹರಿಹರ ಪಾಲಿಫೈಬರ್ಸ್, ಗ್ರಾಸಿಂ ಡಿವಿಜನ್, ರಾಮ್ಕೋ ಸಿಮೆಂಟ್, ಸಂಗಮ್ ಸಾಲ್ವೆಂಟ್, ಬೀಡಿ ಯೂನಿಯನ್ ಇತ್ಯಾದಿ ಹತ್ತಾರು ಕಾರ್ಯಕರ್ತರು ಶಿಬಿರದ ಯಶಸ್ವಿಗೆ ಬೀದಿ ಸಂಗ್ರಹದಲ್ಲಿ ಕೈಜೋಡಿಸುತ್ತಿದ್ದರು. ಹೀಗೆ ಸತತವಾಗಿ ಸುಮಾರು ಒಂದು ತಿಂಗಳು ಕಾಲ ಈ ಶಿಬಿರದ ಯಶಸ್ವಿಗೆ ಬಯ್ಯಾರೆಡ್ಡಿ ಅವರೊಂದಿಗೆ ಮೊದಲ ಬಾರಿಗೆ ಕೆಲಸ ಮಾಡಿದ ಅನುಭವ ನನಗಾಯಿತು.

ಕಾಲೇಜು ಘಟಕದ ಕಾರ್ಯದರ್ಶಿ

ಕೊಂಡಜ್ಜಿ ಶಿಬಿರದ ಬಳಿಕ ನಾನು ಪ್ರಥಮ ಪಿಯುಸಿಗೆ ದಾವಣಗೆರೆ ಮೋತಿ ವೀರಪ್ಪ ಸರ್ಕಾರಿ ಕಾಲೇಜು ಸೇರಿದ್ದೆ. ಈ ನಡುವೆ ಒಂದು ಬಾರಿ ಹರಿಹರದಲ್ಲಿ ನಡೆದ ಜಿಲ್ಲಾ ಸಭೆಗೆ ಬಂದಿದ್ದ ಬಯ್ಯಾರೆಡ್ಡಿ ಜಿಲ್ಲೆಯ ವಿವಿಧ ಶಾಲಾ ಕಾಲೇಜುಗಳಲ್ಲಿ ಎಸ್‌ಎಫ್‌ಐ ಘಟಕಗಳನ್ನು ಆರಂಭಿಸಲು ಸೂಚಿಸಿದರು. ಒಬ್ಬನೇ ಶಾಲೆ ಕಾಲೇಜುಗಳಿಗೆ ಹೋಗಿ ಘಟಕ ರಚಿಸುವ ಬಗ್ಗೆ ನನಗೆ ಹಿಂಜರಿಕೆ ಇತ್ತು. ನಾನು ಕೇವಲ ಅವರಿವರ ಬಳಿ ಖುಷಿಯಾಗಿ ಮಾತಾಡುತ್ತಾ ಒಂದು ರೀತಿಯಲ್ಲಿ ಟೈಂಪಾಸ್ ಮಾಡುವುದರಲ್ಲೇ ಖುಷಿ ಪಡುತ್ತಿದ್ದೆ. ಇದನ್ನು ಗಮನಿಸಿದ್ದ ಅವರು ನೀನು ಕೇವಲ ಹುಡುಗಾಟಿಕೆ ಮಾಡಿಕೊಂಡು ಹಾಡುಗಳನ್ನು ಹೇಳುತ್ತಾ ತಿರುಗಿದರೆ ಸಾಲದು, ದಾವಣಗೆರೆಯಲ್ಲಿ ಘಟಕಗಳನ್ನು ಮಾಡಲು ಗಮನ ನೀಡು ಎಂದು ತಾಕೀತು ಮಾಡಿದ್ದರು ಮತ್ತು ಸ್ವತಃ ತಾವೇ ನಮ್ಮ ಕಾಲೇಜಿನಲ್ಲಿ ಘಟಕ ರಚಿಸಲು ಬರುವುದಾಗಿ ದಿನಾಂಕ ನೀಡಿದ್ದರು.

ನನಗೋ ಅವರು ಬರುವ ದಿನ ಹತ್ತಿರವಾದಂತೆ ಒಳಗೊಳಗೆ ಭಯ ಶುರುವಾಗಿತ್ತು. ಏನು ಮಾಡುವುದೋ ಎಂದು ಯೋಚಿಸುತ್ತಲೇ ಅಂತೂ ಧೈರ್ಯ ಮಾಡಿ ಅವರು ಬರುವ ಬೆಳಗ್ಗೆ ಪ್ರಿನ್ಸಿಪಲ್ ಚೇಂಬರ್‌ಗೆ ಹೋಗಿ ವಿದ್ಯಾರ್ಥಿಗಳ ಒಂದು ಸಭೆ ನಡೆಸಲು ಅವಕಾಶ ಬೇಕೆಂದು ಅದಕ್ಕೆ ಎಸ್‌ಎಫ್‌ಐ ರಾಜ್ಯ ಅಧ್ಯಕ್ಷರು ಬರುತ್ತಾರೆಂದು ಕೋರಿಕೆ ಸಲ್ಲಿಸಿ ತರಗತಿಗೆ ಹಾಜರಾಗಿದ್ದೆ. ನನ್ನ ಮಾತನ್ನು ಕೇಳಿಸಿಕೊಂಡಿದ್ದ ಪ್ರಿನ್ಸಿಪಾಲ್ ಶ್ರೀ ಸಾಯಿಗಾವಿ ಅವರು ಮೇಲಿಂದ ಕೆಳಗೆ ನನ್ನ ಗಮನಿಸಿ ಪ್ರತಿಕ್ರಿಯೆ ಏನು ನೀಡದೇ ಆಯ್ತು ನೋಡೋಣ ಎಂದಷ್ಟೇ ಹೇಳಿದ್ದರು.

ಸುಮಾರು 9.30ರ ಹೊತ್ತಿಗೆ ನಮ್ಮ ಇನ್ನೋರ್ವ ಮುಖಂಡ ಡಿ.ಎಂ. ಮಲಿಯಪ್ಪ, ತಮ್ಮ ಹೆಗಲಿಗೆ ಬ್ಯಾಗನ್ನು ಹಾಕಿಕೊಂಡು ಬಯ್ಯಾರೆಡ್ಡಿ ಅವರು ನಮ್ಮ ಕಾಲೇಜು ಹಿಂಭಾಗದ ರಸ್ತೆಯಲ್ಲಿ ನಡೆದುಕೊಂಡು ಹಾದು ಬಂದ ದೃಶ್ಯ ಈಗಲೂ ನನ್ನ ಕಣ್ಣ ಮುಂದೆ ಕಟ್ಟಿದಂತಿದೆ. ಅವರಿಬ್ಬರು ಹರಿಹರದಿಂದ ಬಸ್ ಇಳಿದು ಸುಮಾರು 3 ಕಿಮೀ ದೂರದ ನಮ್ಮ ಕಾಲೇಜಿಗೆ ನಡೆದೇ ಬಂದಿದ್ದರು. ಈಗ ಅಂತಹ ಪರಿಸ್ಥಿತಿಯನ್ನು ಊಹೆ ಕೂಡ ಮಾಡಿಕೊಳ್ಳಲು ಆಗುವುದಿಲ್ಲ. ಕಾಲೇಜು ಆವರಣಕ್ಕೆ ಬಂದ ಅವರನ್ನು ನಾನು ನೇರವಾಗಿ ಪ್ರಿನ್ಸಿಪಾಲ್ ಚೇಂಬರ್‌ಗೆ ಕರೆದೊಯ್ದೆ. ಅವರೊಂದಿಗೆ ಶೈಕ್ಷಣಿಕ ರಂಗದ ಸಮಸ್ಯೆಗಳನ್ನು ಚರ್ಚಿಸಿದ ಬಯ್ಯಾರೆಡ್ಡಿ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಭೆ ನಡೆಸಲು ಅವರಿಂದ ಅನುಮತಿ ಪಡೆದರು. ಬಳಿಕ ಮಲಿಯಪ್ಪ ನಾನು ಎಲ್ಲ ವಿಭಾಗಗಳಿಗೂ ತೆರಳಿ ಬಿಡುವಿನ ವೇಳೆಯಲ್ಲಿ ವಿದ್ಯಾರ್ಥಿಗಳ ಒಂದು ಸಭೆ ನಡೆಸುವುದಾಗಿ ಹೇಳಿ ಅವರನ್ನು ಆಹ್ವಾನಿಸಿದೆವು. ಇದಾದ ಬಳಿಕ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಬಳಿಕ ದಾವಣಗೆರೆಯಲ್ಲಿ ಪ್ರಥಮ ಎಸ್‌ಎಫ್‌ಐ ಘಟಕವನ್ನು ರಚಿಸಿದರು. ಕಾಲೇಜಿನಲ್ಲೇ ಉತ್ತಮ ಚರ್ಚಾಪಟುವಾಗಿದ್ದ ಚಂದ್ರಮ್ಮ ಎನ್ನುವ ವಿದ್ಯಾರ್ಥಿನಿ ಅಧ್ಯಕ್ಷರಾಗಿ, ನಾನು ಕಾರ್ಯದರ್ಶಿಯಾಗಿ ಆಯ್ಕೆಯಾದೆವು. ಹೀಗೆ ಒಂದು ಕಾಲೇಜು ಘಟಕವನ್ನು ಆರಂಭಿಸುವಾಗ ಆರಂಭಗೊಂಡ ಬಯ್ಯಾರೆಡ್ಡಿಯವರ ಜೊತೆಗಿನ ಸಂಗಾತಿತನದ ಸಂಬಂಧ ಇತ್ತೀಚೆಗೆ ಅವರು ನಿಧನರಾಗುವವರೆಗೂ, ಅಂದರೆ ಸುದೀರ್ಘ 36 ವರ್ಷಗಳ ಕಾಲ ಮುಂದುವರೆದಿತ್ತು. ಡಿಸೆಂಬರ್ ಕೊನೆಯಲ್ಲಿ ಅವರು ಆಸ್ಪತ್ರೆಗೆ ಸೇರುವ ಒಂದು ವಾರದ ಮುಂಚೆಯಷ್ಟೇ ಪಕ್ಷದ ರಾಜ್ಯ ಸಮಿತಿ ಅಡಿಯಲ್ಲಿ ಹಿರಿಯ ಸಂಗಾತಿಗಳ ಯೋಗಕ್ಷೇಮಕ್ಕಾಗಿ ರಚಿಸಲಾಗಿದ್ದ "ಸಾಂತ್ವನ" ಕೋರ್ ಕಮಿಟಿ ಸಭೆಯನ್ನು ಅವರ ನೇತೃತ್ವದಲ್ಲೇ ಪಕ್ಷದ ರಾಜ್ಯ ಸಮಿತಿ ಕಚೇರಿಯಲ್ಲಿ ನಡೆಸಿ ಮುಂದಿನ ದಿನಗಳಲ್ಲಿ ಹಮ್ಮಿಕೊಳ್ಳಬೇಕಾದ ಯೋಜನೆಗಳನ್ನು ಸಿದ್ದಪಡಿಸಲಾಗಿತ್ತು. ಅಂದು ಅವರು ತೋರಿಸಿದ ಆ ಉತ್ಸಾಹದ ಹಿಂದೆ ಈ ಅನಿರೀಕ್ಷಿತವಾದ ಸಾವು ಬಂದು ಮನೆ ಮಾಡಿದ್ದು ನಮಗೆ ಗೊತ್ತಾಗಲೇ ಇಲ್ಲ. ಮಾತ್ರವಲ್ಲ, ಬಯ್ಯಾರೆಡ್ಡಿ ಅವರನ್ನು ಮತ್ತೆ ಜೀವಂತವಾಗಿ ನೋಡಲು ಸಾಧ್ಯವೇ ಆಗಲಿಲ್ಲ.

ನಾನೂ ಸೇರಿದಂತೆ ಇವತ್ತು ಸಿಪಿಐ(ಎಂ) ಪಕ್ಷದಲ್ಲಿ ಪೂರ್ಣಾವಧಿ ಕಾರ್ಯಕರ್ತರಾಗಿ ದುಡಿಯುತ್ತಿರುವ ಹತ್ತಾರು ಸಂಗಾತಿಗಳು ತಮ್ಮ ವೈಯಕ್ತಿಕ ಬದುಕಿನ ಆದ್ಯತೆಗಳು ಹಾಗೂ ನೌಕರಿಗಳನ್ನು, ನೌಕರಿಯ ಅವಕಾಶಗಳನ್ನು ಬಿಟ್ಟು ಸಮಾಜ ಬದಲಾವಣೆಯ ಚಳುವಳಿಗಾಗಿ ತೊಡಗಿಸಿಕೊಂಡಿದ್ದರೆ ಅದಕ್ಕೆ ಬಯ್ಯಾರೆಡ್ಡಿಯವರ ವಿಶೇಷವಾದ ಆಸಕ್ತಿ ಹಾಗೂ ಬದ್ದತೆ ಪ್ರಮುಖ ಕಾರಣವಾಗಿದೆ. ನಾನು ದಾವಣಗೆರೆಯಲ್ಲಿ ವಿದ್ಯಾರ್ಥಿ ಸಂಘಟನೆಯ ಕಾರ್ಯಕರ್ತನಾಗಿ ಕೆಲಸ ಮಾಡುವಾಗಲೇ ನಿರಂತರವಾಗಿ ಸಭೆಗಳಿಗೆ ಬರುತ್ತಿದ್ದ ಅವರು, 1994ರ ಒಂದು ರಾತ್ರಿ ಬೆಂಗಳೂರಿಗೆ ಹೊರಡುವಾಗ ನನ್ನ ಕೈಯಲ್ಲಿ ರೂ.250 ರುಪಾಯಿ ನೀಡಿ, ಇನ್ನು ಮುಂದೆ ನಿನ್ನ ಓಡಾಟದ ಖರ್ಚಿಗಾಗಿ ಪ್ರತಿ ತಿಂಗಳು ಪಕ್ಷದ ವತಿಯಿಂದ ಈ ಹಣ ನೀಡುವುದಾಗಿ ತಿಳಿಸಿ, ನಾನು ಭವಿಷ್ಯದಲ್ಲಿ ಚಳವಳಿಯಲ್ಲೇ ಮುಂದುವರೆಯಬೇಕೆಂಬ ಒತ್ತಾಸೆ ಇದೆ ಎಂದು ಹೇಳಿ ಪೂರ್ಣಾವಧಿತನದ ಬೀಜಾಂಕುರ ಹಾಕಿದ್ದರು.

ಅವರು ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಬೆಂಗಳೂರಿಗೆ ಬಂದಾಗ ನಾನು, ಕ್ರಿಯಾ ಚಂದ್ರು ಶ್ರಮವಹಿಸಿ ನಾವು ಆಗಲೇ ವಾಸವಿದ್ದ ತ್ಯಾಗರಾಜನಗರದ ಸಮೀಪದ ಶಾಸ್ತ್ರಿ ನಗರದಲ್ಲೇ ಅವರಿಗೆ ಮನೆ ಹುಡುಕಿದೆವು. ಅವರು ಹಲವು ವರ್ಷ ಅಲ್ಲಿ ವಾಸವಿದ್ದರು. ಬಯ್ಯಾರೆಡ್ಡಿಯವರಿಗೆ ಚಳವಳಿಯ ಕಾರ್ಯಕರ್ತರ ಬಗೆಗೆ ಅತ್ಯಂತ ಪ್ರೀತಿ ಮತ್ತು ಆಸಕ್ತಿ ಸದಾ ಇರುತ್ತಿತ್ತು. ಅವರು ಸದಾ ಕಾಮ್ರೇಡ್ ಪಿ. ಸುಂದರಯ್ಯ ಅವರನ್ನು ತಮ್ಮ ಚಳವಳಿ ಹಾಗು ಕೆಲಸದ ಆದರ್ಶವಾಗಿ ನೆನಪಿಸಿಕೊಳ್ಳುತ್ತಿದ್ದರು. ಹೀಗಾಗಿಯೇ ರಾಜ್ಯದಲ್ಲಿ ಸಕ್ರಿಯವಾಗಿ ದುಡಿಯುತ್ತಿದ್ದ ಕಾರ್ಯಕರ್ತರನ್ನು ಗುರುತಿಸಿ ಅವರಿಗೆ ಆರ್ಥಿಕ, ಶೈಕ್ಷಣಿಕ, ಆರೋಗ್ಯ, ಕೆಲಸ ಇತ್ಯಾದಿಗಳ ಸಹಾಯ ಮಾಡುವುದರಲ್ಲಿ, ಮಾಡಿಸುವುದರಲ್ಲಿ ಸದಾ ಮುಂದಿದ್ದರು. ವಿವಿಧ ಪಕ್ಷಗಳ ಸಚಿವರು, ಶಾಸಕರು, ಅಧಿಕಾರಿಗಳು ಹೀಗೆ ಯಾರನ್ನು ಬೇಕಾದರೂ ಸಕಾಲದಲ್ಲಿ ಸಂಪರ್ಕಿಸುವಷ್ಟು ಸಲೀಸಾದ ಸಂಬಂಧಗಳನ್ನು ಅವರು ಬೆಳೆಸಿಕೊಂಡಿದ್ದರು. ಹೀಗಾಗಿ ಚಳವಳಿಯಲ್ಲಿ ದುಡಿಯುತ್ತಿರುವ ನಮ್ಮಂತ ಕಾರ್ಯಕರ್ತರಿಗೆ ನಮ್ಮ ಕುಟುಂಬಗಳಿಗೆ ಯಾವುದೇ ತರಹದ ಸಮಸ್ಯೆಗಳು ಎದುರಾದಾಗ ಅವುಗಳನ್ನು ಸೂಕ್ತ ರೀತಿಯಲ್ಲಿ ಬಗೆಹರಿಸಿಕೊಳ್ಳಲು ಬೇಕಾದ ದಾರಿಗಳನ್ನು, ಮಾರ್ಗದರ್ಶನಗಳನ್ನು, ಸಾಧ್ಯವಾದರೆ ಸಹಾಯ ಹಸ್ತವನ್ನು ಚಾಚುವುದರಲ್ಲಿ ಅವರು ಮುಂದೆ ಬರುತ್ತಿದ್ದರು.

ಬಯ್ಯಾರೆಡ್ಡಿ ಅವರು ಸುದೀರ್ಘವಾಗಿ ನಾಲ್ಕು ದಶಕಗಳ ಕಾಲ ನಮ್ಮ ಚಳವಳಿಯ ಒಡನಾಡಿಯಾಗಿದ್ದರು. ಇತ್ತೀಚಿನ ವರ್ಷಗಳಲ್ಲಿ ಅವರು ಜಂಟಿ ರೈತ ಚಳವಳಿಗೆ ಒಂದು ಸಮರ್ಥವಾದ ನಾಯಕತ್ವವನ್ನು ತಮ್ಮ ಆರೋಗ್ಯದ ಏರಿಳಿತಗಳ ನಡುವೆಯೂ ನೀಡಿ ಇಡೀ ರಾಜ್ಯದ ರೈತ, ಕಾರ್ಮಿಕ, ಕೂಲಿಕಾರ, ದಲಿತ, ಮಹಿಳಾ ಚಳವಳಿಯ ಅತ್ಯಂತ ಆಪ್ತ ಒಡನಾಡಿಯಾಗಿದ್ದರು. ಅವರು ಚಳುವಳಿಯ ಬಲದೊಂದಿಗೆ, ಇಡೀ ತಮ್ಮ ಅನುಭವ ಹಾಗೂ ಬುದ್ದಿಮತ್ತೆಯನ್ನು ಬಳಸಿ ಮುಖ್ಯಮಂತ್ರಿಯಾದಿಯಾಗಿ, ಹಲವು ಹಿರಿ–ಕಿರಿ ಸಚಿವರನ್ನು ಹಿರಿ–ಕಿರಿ ಅಧಿಕಾರಿಗಳನ್ನು ಸಮರ್ಥವಾಗಿ ಮನವೊಲಿಸಿ ಜನರ ಕೆಲಸ ಮಾಡಿಸಿಕೊಡಲು ಹಾಗೂ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಬೇಕಾದ ಚಾತಿ ರೂಢಿಸಿಕೊಂಡಿದ್ದರು.

ಅವರು ಚಳವಳಿಯಲ್ಲಿ ಹಲವು ಸಿಹಿ–ಕಹಿ ಎರಡನ್ನೂ ಅನುಭವಿಸಿದ ಸಂಗಾತಿಯಾಗಿದ್ದರು. ಹಲವು ವಿಷಯಗಳಲ್ಲಿ ಅವರಿಗೆ ನಮ್ಮ ಜತೆ ಸಣ್ಣ ಪುಟ್ಟ ಭಿನ್ನಾಭಿಪ್ರಾಯಗಳಿದ್ದವು. ಆದರೆ ಒಟ್ಟಾರೆ ಚಳವಳಿಗೆ ಅವರು ನೀಡಿದ ಕಾಣಿಕೆ ಮಾತ್ರ ಅಮೋಘವಾದದ್ದು.

ಸಮಕಾಲೀನ ಸನ್ನಿವೇಶದಲ್ಲಿ ಅವರ ಇರುವಿಕೆಯೇ ನಮಗೊಂದು ಆನೆಬಲವಾಗಿತ್ತು. ಹೀಗಾಗಿಯೇ ಅವರು ತೀವ್ರ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿ ಪಕ್ಷದ ಸಮ್ಮೇಳನಕ್ಕೆ ಗೈರಾದಾಗಲೂ ಸ್ವತಃ ಅವರೇ ಪಕ್ಷದ ಉನ್ನತ ನಾಯಕತ್ವದ ಭಾಗವಾಗಿ ತಾವು ಇರುವುದು ಬೇಡ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾಗ್ಯೂ ಅವರು ಚಳವಳಿಗೆ ನೀಡಿದ ಕೊಡುಗೆಯ ಆಧಾರದಲ್ಲಿ ತುಮಕೂರು ಪಕ್ಷದ ಸಮ್ಮೇಳನದ ಸಂದರ್ಭದಲ್ಲಿ ಪಕ್ಷದ ರಾಜ್ಯ ಸಮಿತಿ ಅವರನ್ನು ರಾಜ್ಯ ಕಾರ್ಯದರ್ಶಿ ಮಂಡಳಿಗೆ ಪುನರಾಯ್ಕೆ ಮಾಡಿತ್ತು.

ಅವರ ಈ ಅನಿರೀಕ್ಷಿತ ಅಗಲುವಿಕೆ ನನಗೆ ಹಾಗೂ ನನ್ನ ಇಡೀ ಕುಟುಂಬಕ್ಕೆ ಆಘಾತ ಉಂಟು ಮಾಡಿದೆ. ಅವರು ಬೆಂಗಳೂರಿಗೆ ಬಂದ ಬಳಿಕ ನಾನು ಹಾಗೂ ನನ್ನ ಕುಟುಂಬ, ಅವರ ಕುಟುಂಬ ಅತ್ಯಂತ ನಿಕಟವಾದ ಒಡನಾಟ ಹಾಗೂ ಸಂಬಂಧ ಹೊಂದಿದ್ದ ಕುಟುಂಬಗಳಾಗಿದ್ದವು. ನಾನು ನನ್ನ ಕುಟುಂಬ ಹಲವಾರು ವೈಯಕ್ತಿಕ ಸಮಸ್ಯೆಗಳನ್ನು ಸಂಕಟಗಳನ್ನು ಎದುರಿಸಿದಾಗ ಆಗ ನಮ್ಮ ಜತೆ ದೃಢವಾಗಿ ನಿಂತವರು ಬಯ್ಯಾರೆಡ್ಡಿಯವರು. ಅವರ ಅಗಲುವಿಕೆ ಸಿಪಿಐ(ಎಂ) ಪಕ್ಷಕ್ಕೆ ಹಾಗೂ ರಾಜ್ಯದ ಜನಚಳುವಳಿಗೆ ಅಪಾರವಾದ ನಷ್ಟ ಉಂಟುಮಾಡಿದೆ.

ಅವರ ಉಪಸ್ಥಿತಿ ಹಾಗೂ ಮಾರ್ಗದರ್ಶನ ಇನ್ನೂ ಹಲವು ವರ್ಷಗಳ ಕಾಲ ನಮ್ಮ ಚಳವಳಿಗೆ ಅಗತ್ಯವಿತ್ತು. ಇಂತಹ ಸನ್ನಿವೇಶದಲ್ಲಿ ಅವರು ನಮ್ಮಿಂದ ದೂರವಾಗಿದ್ದಾರೆ. ಬಯ್ಯಾರೆಡ್ಡಿ ಅವರು ಕಂಡ ಸಮತೆಯ ಸಮಾಜದ ಕನಸನ್ನು ಸಾಕಾರಗೊಳಿಸಲು ಶ್ರಮಿಸುವ ಮೂಲಕ ನಾವು ಅವರಿಗೆ ನೈಜ ಶ್ರದ್ಧಾಂಜಲಿ ಸಲ್ಲಿಸೋಣ. ❍

ಖಾಸಗಿ ಮೈಕ್ರೋ ಪೈನಾನ್ಸ್ ಸಂಸ್ಥೆಗಳಿಂದ ಸಹಸ್ರಾರು ಜನರು ಕಿರುಕುಳಕ್ಕೆ ಒಳಗಾಗುತ್ತಿರುವ ಇತ್ತೀಚಿನ ಸುದ್ದಿಗಳು ಬೆಚ್ಚಿಬೀಳಿಸುತ್ತಿವೆ. ಇವುಗಳ ದೌರ್ಜನ್ಯದಿಂದ ರಾಜ್ಯದಲ್ಲಿ ಹಲವರು ಪ್ರಾಣ ಕಳೆದುಕೊಂಡಿದ್ದಾರೆ, ನೂರಾರು ಮಂದಿ ಗ್ರಾಮಗಳನ್ನೇ ತೊರೆಯುತ್ತಿದ್ದಾರೆ. ಮೈಕ್ರೋ ಪೈನಾನ್ಸ್‌ಗೆ ಅಂಕುಶ ಹಾಕುವುದಾಗಿ ರಾಜ್ಯ ಸರ್ಕಾರ ಹೇಳುತ್ತಿದೆ. ಸ್ವಸಹಾಯ ಸಂಘಗಳನ್ನು ವ್ಯವಸ್ಥಿತವಾಗಿ ನಾಶ ಮಾಡಿರುವುದು, ನೂರಕ್ಕೂ ಹೆಚ್ಚು ಔಪಚಾರಿಕ ಬ್ಯಾಂಕಿಂಗ್ ಸಂಸ್ಥೆಗಳು ಬಡವರ, ವಿಶೇಷವಾಗಿ ಮಹಿಳೆಯರ ಹಣಕಾಸು ಅಗತ್ಯಗಳನ್ನು ಪೂರೈಸುವ ವಿಷಯದಲ್ಲಿ ವಿಫಲವಾಗಿರುವುದೂ ಖಾಸಗಿ ಕಿರು ಹಣಕಾಸು ಸಂಸ್ಥೆಗಳಲ್ಲಿ ಸಾಲ ಪಡೆಯಲು ಮತ್ತು ಇವುಗಳ ಬಲೆಗೆ ಸಿಲುಕಿಕೊಳ್ಳುವ ಅನಿವಾರ್ಯತೆಗೆ ಒಂದು ಕಾರಣ.

ಮಹಿಳೆಯರ ಬದುಕಿಗೆ ಕೊಳ್ಳಿ ಇಡುತ್ತಿರುವ ಮೈಕ್ರೋ ಫೈನಾನ್ಸ್ ನಿಯಂತ್ರಣ ಇಲ್ಲವೇ?

ಸಿ. ಕುಮಾರಿ

ಸೂಕ್ಷ್ಮ ಆರ್ಥಿಕ ಮಸೂದೆ, ಬ್ಯಾಂಕ್ ಹಾಗೂ ಸರ್ಕಾರದ ನೀತಿಗಳು ಮೈಕ್ರೋ ಫೈನಾನ್ಸ್ (NBFC– ನಾನ್ ಬ್ಯಾಂಕಿಂಗ್ ಫೈನಾನ್ಸ್ ಕಂಪನಿ)ಗಳ ದುಬಾರಿ ಬಡ್ಡಿ ಸಾಲಕ್ಕೆ ನಿಯಂತ್ರಣವಿಲ್ಲದೆ ಸಾಹಸ್ರಾರು ಮಹಿಳೆಯರು ಸಂಕಷ್ಟದ ಸುಳಿಯಲ್ಲಿ ಸಿಲುಕಿದ್ದಾರೆ. ಇನ್ನು ಕೆಲವರು ಅಪಮಾನಕ್ಕೊಳಗಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಸಾಲ ವಸೂಲಾತಿಗಾಗಿ ವಾಣಿಜ್ಯ ಮತ್ತು ಲಾಭ ಕೇಂದ್ರಿತ ಕಾರ್ಪೋರೇಟ್ ಕಿರು ಹಣಕಾಸು ಸಂಸ್ಥೆಗಳ ಸಿಬ್ಬಂದಿಗಳಿಂದ ಆದ ತೋಳ್ಬಲ ಬಳಕೆ ಮತ್ತು ಮಾನಸಿಕ ಕಿರುಕುಳಗಳಿಂದಾಗಿ ಆತ್ಮಹತ್ಯೆಗಳಂತಹ ಪ್ರಕರಣಗಳು ಜರುಗುತ್ತಿವೆ. ಸಾಲ ವಸೂಲಾತಿಗೆ ಅನುಸರಿಸುವ ಬಲವಂತದ ದಬ್ಬಾಳಿಕೆಯಿಂದ ಬೇಸತ್ತು 100ಕ್ಕೂ ಹೆಚ್ಚು ಮಹಿಳೆಯರು ಆತ್ಮಹತ್ಯೆಗೀಡಾಗಿದ್ದಾರೆ. ಇದೇ ರೀತಿಯ ಘಟನೆಗಳು ದೇಶದ ಬೇರೆ ರಾಜ್ಯಗಳಲ್ಲೂ ನಡೆದ ಬಗ್ಗೆ ವರದಿಯಾಗಿದೆ. ಆದರೆ, ಈ ಮೈಕ್ರೋ ಫೈನಾನ್ಸ್ ಗಳ ಹಾವಳಿಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಿಯಂತ್ರಿಸದೆ ಕೈಕಟ್ಟಿ ಕುಳಿತಿವೆ.



ನೂರಕ್ಕೂ ಹೆಚ್ಚು ಔಪಚಾರಿಕ ಬ್ಯಾಂಕಿಂಗ್ ಸಂಸ್ಥೆಗಳು ಬಡವರ, ವಿಶೇಷವಾಗಿ ಮಹಿಳೆಯರ ಹಣಕಾಸು ಅಗತ್ಯಗಳನ್ನು ಪೂರೈಸುವ ವಿಷಯದಲ್ಲಿ ವಿಫಲವಾಗಿರುವ ಸಂದರ್ಭದ ದುರ್ಬಳಕೆ ಮಾಡುತ್ತಿರುವ ಹೊಸ ರೀತಿಯ ಲೇವಾದೇವಿಗಾರಿಕೆಯಾಗಿರುವ ಕಿರು ಹಣಕಾಸು ಸಂಸ್ಥೆಗಳು, ಕೇಂದ್ರ ಸಂಘಗಳನ್ನು ಮಾಡುವಂತೆ ಮಹಿಳೆಯರ ಮೇಲೆ ಒತ್ತಡ ಹಾಕಿ, ನಂತರ ಶೇ. 48ರಿಂದ 60ರವರೆಗೆ ವಾರ್ಷಿಕ ಬಡ್ಡಿದರ ವಿಧಿಸುತ್ತಿವೆ. ಒಬ್ಬ ಮಹಿಳೆಗೆ ಹಲವು ಕಿರು ಹಣಕಾಸು ಸಂಸ್ಥೆಗಳು ಸಾಲ ನೀಡಿವೆ. ಹೀಗಿದ್ದಾಗ್ಯೂ ಬಡತನ ನಿರ್ಮೂಲನೆ ಮತ್ತು ಆರ್ಥಿಕ ಸಬಲೀಕರಣಕ್ಕಾಗಿ ಸಾಲಸೌಲಭ್ಯ ಇರುವಂತಹವು ಎಂದು ಬಿಂಬಿಸಲಾಗುತ್ತಿದೆ.

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ)ದ ಗೈಡ್‌ಲೈನ್ ಪ್ರಕಾರ, ಹಣಕಾಸು ಸಂಸ್ಥೆಗಳು ಕುಟುಂಬದ ಆದಾಯ 3 ಲಕ್ಷಕ್ಕಿಂತ ಕಡಿಮೆಯಿದ್ದಲ್ಲಿ, ಯಾವುದೇ ಅಡಮಾನವಿಲ್ಲದೆ ಹಾಗೂ ದುಬಾರಿ ಬಡ್ಡಿ ಲಾಭ ದೃಷ್ಟಿಕೋನ ಇಟ್ಟುಕೊಳ್ಳದೆ ಸಾಲ ನೀಡಬೇಕು. ಆದರೆ, ಮೈಕ್ರೋ ಫೈನಾನ್ಸ್‌ಗಳು ಈ ನಿಯಮಗಳನ್ನು ಸಂಪೂರ್ಣವಾಗಿ ಉಲ್ಲಂಘಿಸುತ್ತಿವೆ.

ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳು ದೇಶದ ಆರ್ಥಿಕತೆಯ ಭಾಗವಾಗಿದೆ

ಸಣ್ಣಪುಟ್ಟ ಉಳಿತಾಯ ಮಾಡಿ ಕೂಡಿಟ್ಟ ಹಣವೂ ನಿತ್ಯ ಬಳಕೆಗೆ ಶಿಕ್ಷಣ, ಆರೋಗ್ಯ, ಮನೆ ನಿರ್ವಹಣೆಗೆಂದು ಖರ್ಚಾಗುತ್ತಿದೆ. ಗ್ರಾಮೀಣ ಹಾಗೂ ನಗರ ಪ್ರದೇಶದ ಬಡ ಮಹಿಳೆಯರು, ತಾವು ದಿನವಿಡೀ ಶ್ರಮವಹಿಸಿ ದುಡಿದು ತಂದ ಹಣ ಶ್ರೀಮಂತರ, ಮಾರ್ವಾಡಿಗಳ ದುಬಾರಿ ಬಡ್ಡಿ ಸಾಲಕ್ಕೆ, ದಿನದ ಮತ್ತು ವಾರದ ಬಡ್ಡಿಗೆ, ಕಂತಿನ ಹಣಕ್ಕೆ, 100ಕ್ಕೆ 10ರಿಂದ 20 ರೂ ಬಡ್ಡಿ ತೆತ್ತು, ಸಾಲದ ಸುಳಿಯಲ್ಲಿ ಸಿಲುಕಿವೆ. ಇಂತಹ ಕುಟುಂಬಗಳನ್ನು ಆರ್ಥಿಕವಾಗಿ ಹೆಚ್ಚು ಸ್ವಾವಲಂಬಿಗಳನ್ನಾಗಿಸಬೇಕು ಎನ್ನುವ ನಿಟ್ಟಿನಲ್ಲಿ ಸ್ವಸಹಾಯ ಗುಂಪು ಹಾಗೂ ಸ್ತ್ರೀಶಕ್ತಿ ಗುಂಪುಗಳು ರಚಿತಗೊಂಡಿವೆ. ಸ್ವಸಹಾಯ ಗುಂಪುಗಳನ್ನು ಮೂರು ವಿಧಗಳಾಗಿ ವಿಂಗಡಿಸಬಹುದು; ಮಹಿಳೆಯರ ಸ್ವಸಹಾಯ ಸಂಘಗಳು, ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳು, ಮಹಿಳೆ ಹಾಗೂ ಪುರುಷರು ಸೇರಿ ರಚಿಸಿಕೊಂಡ (ಜಂಟಿ ಬಾಧ್ಯತಾ) ಸ್ವಸಹಾಯ ಸಂಘಗಳು ಮತ್ತು ಪುರುಷರ ಸ್ವಸಹಾಯ ಸಂಘಗಳು.

ಇವು ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಗೆ ಸಾಮೂಹಿಕ ಗುರಿ ಹೊಂದಿದ ಮತ್ತು ತಮ್ಮದೇ ಆದ ಸಮಸ್ಯೆಗಳಿಗೆ ಸಹಭಾಗಿತ್ವದಿಂದ ಸೂಕ್ತವಾದ ತೀರ್ಮಾನಗಳನ್ನು ತೆಗೆದುಕೊಳ್ಳುವ ಜನರ ಗುಂಪುಗಳು. ಈ ಗುಂಪಿನ ಮಹಿಳೆಯರು ಹೊಟ್ಟೆ, ಬಟ್ಟೆ ಕಟ್ಟಿ ಸಾಸಿವೆ, ಜೀರಿಗೆ, ಎಲೆಅಡಿಕೆ ಚೀಲಗಳಲ್ಲಿ ಜೋಪಾನ ಮಾಡುತ್ತಿದ್ದ ಹಣ ಇಡಲು 15–20 ಜನರ ಉಳಿತಾಯ ಗುಂಪಿನ ಹೆಸರಿನಲ್ಲಿ ಸ್ಥಳೀಯ ಬ್ಯಾಂಕ್‌ಗಳಲ್ಲಿ ಖಾತೆ ತೆರೆಯಲಾಗಿದೆ. ಪರಸ್ಪರ ಸಹಾಯ ಸಹಕಾರದಿಂದ ಪ್ರತಿವಾರ ಸರದಿ ನಾಯಕತ್ವದಲ್ಲಿ ಸಂಘದ ಉಳಿತಾಯ ಮತ್ತು ಆಂತರಿಕ ಸಾಲ, ಬ್ಯಾಂಕ್ ಸಾಲದ ಮರುಪಾವತಿ ಮಾಡುತ್ತಿರುವುದು 'ಒಬ್ಬರು ಎಲ್ಲರಿಗಾಗಿ ಎಲ್ಲರು ಒಬ್ಬರಿಗಾಗಿ' ಎನ್ನುವ ತತ್ವದಡಿ, ಸರದಿ ಪ್ರಕಾರ ಬ್ಯಾಂಕಿಗೆ ಹಣ ಜಮಾ ಮಾಡುವುದು ನಿಜಕ್ಕೂ ಮೆಚ್ಚುವಂತಹ ವಿಚಾರ. ಅದರಲ್ಲೂ ಪ್ರಮುಖವಾಗಿ ಬ್ಯಾಂಕ್‌ಗಳಿಂದ ಪಡೆದ ಸಾಲವನ್ನು ನಿಯಮಿತ ಮರುಪಾವತಿ ಮಾಡುವ ಮೂಲಕ ಹೆಜ್ಜೆ ಗುರುತಿನ ದಾಖಲೆಯನ್ನು ನಿರ್ಮಿಸಿವೆ. ಸ್ವಸಹಾಯ ಗುಂಪುಗಳು ಈ ಮಹಿಳೆಯರಿಗೆ ನಿಜಕ್ಕೂ ಆಧಾರ ಸ್ತಂಬದಂತಿವೆ. ಈ ರೀತಿ ಸಮಾನ ಮನಸ್ಥಿತಿಯವರು ಅವರ ಕೌಶಲ ಮತ್ತು ಸಂಪನ್ಮೂಲ ಜ್ಞಾನವನ್ನು ತೊಡಗಿಸಿ ನ್ಯಾಯಯುತವಾಗಿ ಸೌಲಭ್ಯಗಳನ್ನು ಪಡೆದುಕೊಳ್ಳಲು ಹಾಗೂ ಪರಸ್ಪರ ಉಳಿತಾಯ ಸಾಲ ಸೌಲಭ್ಯಗಳನ್ನು ಪಡೆಯಲು ಒಂದುಗೂಡುವ ವೇದಿಕೆಯಾಗಿವೆ.

ಸರ್ಕಾರಗಳು ನೀಡುವ ಸುತ್ತು ನಿಧಿ, ಸಬ್ಸಿಡಿ, ಬ್ಯಾಂಕ್‌ಗಳು ನೀಡುವ ಲಕ್ಷಾಂತರ ರೂ. ಸಾಲ ಸಂಘದ ಸದಸ್ಯರಿಗೆ ವರದಾನವಾಗುತ್ತಿರುವ ಪರಿಣಾಮ ಸ್ವಸಹಾಯ ಸಂಘಗಳು ಕುಟುಂಬ ನಿರ್ವಹಣೆಯಲ್ಲಿ ಬಹುಮುಖ್ಯ ಪಾತ್ರ ನಿರ್ವಹಿಸುವಲ್ಲಿ ಹೆಚ್ಚು ಸಹಕಾರಿಯಾಗಿವೆ. ಆದರೂ ಸರ್ಕಾರ ಮತ್ತು ಬ್ಯಾಂಕ್‌ಗಳು ನೀಡಬೇಕಾದ ಸುತ್ತುನಿಧಿ, ಸಬ್ಸಿಡಿ ಹಾಗೂ ಬ್ಯಾಂಕ್ ಸಾಲ ನೀಡುವ ಹೊಣೆಗಾರಿಕೆ ಸಾಲದಾಗಿದೆ.

ನವ ಉದಾರವಾದಿ ಚೌಕ್ಕಟಿನೊಳಗೆ ಸ್ವಸಹಾಯ ಗುಂಪುಗಳಿಗೆ ಹೊಸದೊಂದು ಸವಾಲು

ಉಳಿತಾಯ ಗುಂಪುಗಳು ಪ್ರಾರಂಭಗೊಂಡು ಎರಡು ದಶಕ ಕಳೆದರೂ ಇತ್ತೀಚಿನ ವರ್ಷಗಳಲ್ಲಿ ಸ್ವಸಹಾಯ ಗುಂಪುಗಳ ಕ್ರಮಬದ್ಧ ಬಲವರ್ಧನೆಗೆ ಪ್ರಭುತ್ವದ ಮೇಲೆ ಪ್ರಗತಿಪರ ಮಹಿಳಾ ಚಳುವಳಿಗಳಿಂದ ಒತ್ತಡ ಹೆಚ್ಚುತ್ತಿದೆ. ಒಂದೆಡೆಯಲ್ಲಿ ಸಂಘಟಿತ ಸ್ತ್ರೀಯರ ಗುಂಪುಗಳಿಗೆ ಹೊಸ ಅವಕಾಶಗಳನ್ನು ತೆರೆದಿಟ್ಟಿದ್ದಾರೆ. ಇನ್ನೊಂದೆಡೆ ಮಹಿಳೆಯು ಎದುರಿಸುತ್ತಿರುವ ಎಲ್ಲಾ ಸಮಸ್ಯೆಗಳಿಗೆ ಇದೇ ಅಂತಿಮ ಪರಿಹಾರವೆಂದು ಬಿಂಬಿಸಲ್ಪಟ್ಟಿರುವುದು. ಈ ನವ ಉದಾರೀಕರಣ ನೀತಿಗಳ ಹಿನ್ನೆಲೆಯಲ್ಲಿ ನಮ್ಮೆದುರು ಹೊಸದೊಂದು ಸವಾಲೊಡ್ಡಿದೆ. ಕುಗ್ಗುತ್ತಿರುವ ಗ್ರಾಮೀಣ ಮೂಲಭೂತ ಸೌಲಭ್ಯಗಳು ಮತ್ತು ಸಾಂಪ್ರದಾಯಿಕ ಬ್ಯಾಂಕಿಂಗ್ ಸಂಸ್ಥೆಗಳ ವಾತಾವರಣದಲ್ಲಿ ಸರ್ಕಾರವು ತನ್ನದೇ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತದೆ. ಖಾಸಗೀಕರಣದ ಮಾರ್ಗವಾಗಿ ಗ್ರಾಮೀಣ ಹಣಕಾಸು ವ್ಯವಸ್ಥೆಯ ವಿಸ್ತೀರ್ಣವನ್ನು ಸಾಧಿಸಲು ಪ್ರಕಟಿಸುತ್ತಿರುವ ಸರ್ಕಾರ ತರುತ್ತಿರುವ ನೀತಿಗಳು ಮತ್ತು ಶಾಸನಗಳಿಂದ ಇದು ಸ್ಪಷ್ಟವಾಗುತ್ತದೆ.

ಮೈಕ್ರೊ ಫೈನಾನ್ಸ್ ವ್ಯವಸ್ಥೆಯು ವಾಸ್ತವವಾಗಿ ವಿಶ್ವಬ್ಯಾಂಕ್ ಪ್ರಾಯೋಜಿತ ಕಾರ್ಯತಂತ್ರವಾಗಿದ್ದು ಸರ್ಕಾರೇತರ ಸಂಸ್ಥೆಗಳನ್ನು ಬಳಸಿಕೊಂಡು ಬಡವರ ಅಲ್ಪಸ್ವಲ್ಪ ಉಳಿತಾಯವನ್ನು ಕಾರ್ಪೋರೇಟ್ ಕಂಪನಿಗೆ ವರ್ಗಾಯಿಸುವ ಹುನ್ನಾರ ಹೊಂದಿದೆ. ಈ ರೀತಿಯ ಪ್ರಕ್ರಿಯೆಯಲ್ಲಿ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳ ರಚನೆಯಿಂದ ಉಂಟಾದ ಅಲ್ಪಸ್ವಲ್ಪ ಸಾಮೂಹಿಕತೆಯನ್ನು ವ್ಯವಸ್ಥಿತವಾಗಿ ನಾಶಗೊಳಿಸಲಾಗಿದೆ. ಅದರ ಪರಿಣಾಮವೆ ಬಡ ಮಹಿಳೆಯರು ಸಾಲದ ಸುಳಿಗೆ ಸಿಲುಕಿ ಆತ್ಮಹತ್ಯೆ ದಾರಿ ಹಿಡಿದಿದ್ದಾರೆ. ಕಿರು ಹಣಕಾಸು ಸಂಸ್ಥೆಗಳು ವಿಧಿಸುವ ಕಠಿಣ ನಿಯಮವನ್ನು ಈಡೇರಿಸಲು ಸಾಧ್ಯವಾಗದಾಗಿದೆ. ಮಹಿಳೆಯರನ್ನು ಸಾಲದ ಸುಳಿಯಲ್ಲಿ ಸಿಲುಕಿಸಿಕೊಳ್ಳಲು ಆಂಧ್ರಪ್ರದೇಶ ಒಂದರಲ್ಲೇ 32 ಕಿರು ಹಣಕಾಸು ಸಂಸ್ಥೆಗಳು 25 ಸಾವಿರ ಕೋಟಿ ರೂ. ಮೌಲ್ಯದ ಸಾಲವನ್ನು ಆಂಧ್ರ ಹಾಗೂ ಕರ್ನಾಟಕದಲ್ಲಿ ಬಡ ಮಹಿಳೆಯರಲ್ಲಿ ಶೇ.40 ರಷ್ಟು ಬಡ್ಡಿಗೆ ನೀಡಲಾಗಿದೆ.

ಸಣ್ಣ ಉಳಿತಾಯ ಅಭಿವೃದ್ಧಿ ಮತ್ತು ನಿಯಂತ್ರಣ ಮಸೂದೆಯನ್ನು ಲೋಕಸಭೆಯಲ್ಲಿ ಚರ್ಚೆಗೆ ಇಡುವ ಮೂಲಕ ಈ ಹಿಂದಿನ ಕೇಂದ್ರ ಸರ್ಕಾರ ಈ ಕೆಲಸಕ್ಕೆ ಕೈಹಾಕಿದೆ. ಆದ್ದರಿಂದ ಈ ಮಸೂದೆ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳು ಹಾಗೂ ಸಣ್ಣ ಉಳಿತಾಯಕ್ಕೆ ಮರಣ ಶಾಸನದಂತಿದ್ದು ಇದನ್ನು ಕಾಯ್ದೆಯಾಗದಂತೆ ತಡೆ ಹಿಡಿಯಬೇಕಿದೆ. ಈ ಮಸೂದೆ ಜನ ವಿರೋಧಿ ಹಾಗೂ ಸಂಘ ವಿರೋಧಿಯಾಗಿದ್ದು ಇಂತಹ ಮಾರಕ ಕಾಯ್ದೆಯು ತಿದ್ದುಪಡಿಗೊಳಬೇಕೆಂದು ಮಹಿಳಾ ಸಂಘಟನೆಗಳು ಈಗಾಗಲೇ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದಿವೆ. ಇನ್ನು ಮುಂದೆಯೂ ತಿದ್ದುಪಡಿಯಾಗದೇ ಶಾಸನವಾಗದಂತೆ ನೋಡಿಕೊಳ್ಳಬೇಕಿದೆ.

ರೆಗ್ಯೂಲೇಟ್ ಅಥಾರಿಟಿ ಜಾರಿಗೆ ತರಬೇಕು

ಹಾಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಮಹಿಳಾ ಸಬಲೀಕರಣದ ಬಗ್ಗೆ ನಿಜವಾದ ಕಾಳಜಿ ಇದ್ದರೆ, ಖಾಸಗಿ ಮತ್ತು ಮೈಕ್ರೋ ಫೈನಾನ್ಸ್ ವ್ಯವಹಾರ ನಿಯಂತ್ರಿಸಲು ರೆಗ್ಯೂಲೇಟ್ ಅಥಾರಿಟಿ ಜಾರಿಗೆ ತರಬೇಕು. ಗ್ರಾಮೀಣ ಪ್ರದೇಶದಲ್ಲಿರುವ ಮಹಿಳೆಯರಿಗೆ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ (NRLM) ಮೂಲಕ ಗ್ರಾಮೀಣ ಸಂಜೀವಿನಿ ಒಕ್ಕೂಟಗಳನ್ನು ಸಮರ್ಥವಾಗಿ ಮುನ್ನಡೆಸಲು ನಾರಿಶಕ್ತಿ ಯೋಜನೆ ಮೂಲಕ ಅತೀ ಕಡಿಮೆ ಬಡ್ಡಿದರದಲ್ಲಿ ಸಾಲ ಸೌಲಭ್ಯಗಳನ್ನು ನೀಡಬೇಕು. ಹಾಗೂ ಆದಾಯದಾಯಕ ಚಟುವಟಿಕೆಗಳನ್ನು ಪ್ರೋತ್ಸಾಹಿಸಿ ಸ್ಥಳೀಯ ಮಾರುಕಟ್ಟೆ ಒದಗಿಸಬೇಕು. ಪಂಚಾಯತ್ ಮಟ್ಟದಲ್ಲಿ ಮಹಿಳಾ ಭವನಗಳನ್ನು ನಿರ್ಮಿಸಿ ನಿರಂತರವಾಗಿ ತರಬೇತಿ ನೀಡುವ ಮೂಲಕ ಸಬಲೀಕರಣಕ್ಕೆ ಮುಂದಾಗಬೇಕು. ಸ್ತ್ರೀಶಕ್ತಿ ಸ್ವಸಹಾಯ ಸಂಘಗಳ ಸಾಲ ಮರುಪಾವತಿಗೂ ಅದಾಲತ್ ವ್ಯವಸ್ಥೆ ಇರಬೇಕು. ದೊಡ್ಡ ದೊಡ್ಡ ಬಂಡವಾಳಶಾಹಿಗಳಿಗೆ ಸಾಲ ಮರುಪಾವತಿಗೆ ನೀಡುವ 'ಒನ್ ಟೈಮ್ ಸೆಟ್ಲ್‌ಮೆಂಟ್ (OTS) ಮತ್ತು NPA ಸೌಲಭ್ಯವನ್ನು ಸ್ವಸಹಾಯ ಸಂಘಗಳಿಗೂ ಅನ್ವಯಮಾಡುವುದು ಅತ್ಯಗತ್ಯವಾಗಿದೆ.

ಬ್ಯಾಂಕುಗಳಿಗಿರುವ ಸಾಮಾಜಿಕ ಹೊಣೆಗಾರಿಕೆಯನ್ನು ಎತ್ತಿ ಹಿಡಿಯಬೇಕಿದೆ

ಸರಿ ಸುಮಾರು ಶೇ.70ಕ್ಕೂ ಹೆಚ್ಚು ಗುಂಪುಗಳು ಈಗಲೂ ಬ್ಯಾಂಕ್ ಸಾಲ ಸೌಲಭ್ಯದ ವ್ಯಾಪ್ತಿಗೆ ಒಳಪಟ್ಟಿಲ್ಲ. ಸಾಲದ ಮೇಲಿನ ಅರ್ಜಿಗೆ ಮುದ್ರಾಂಕ ಶುಲ್ಕದ ವಿನಾಯಿತಿಯನ್ನು ಕಡ್ಡಾಯಗೊಳಿಸುವ ಹಾಗೂ RBI ಮತ್ತು ನಬಾರ್ಡ್ ಮಾರ್ಗದರ್ಶಿ ಸೂತ್ರದ ಪ್ರಕಾರ ಬ್ಯಾಂಕ್‌ಗಳು ಸಂಘದ ಉಳಿತಾಯಕ್ಕಿಂತ ನಾಲ್ಕೈದು ಪಟ್ಟು ಹಾಗೂ ಅದಕ್ಕೂ ಹೆಚ್ಚಿನ ಅನುಪಾತದಲ್ಲಿ ಸಾಲ ನೀಡುವ ಮೂಲಕ ಬ್ಯಾಂಕುಗಳಿಗಿರುವ ಸಾಮಾಜಿಕ ಹೊಣೆಗಾರಿಕೆಯನ್ನು ಎತ್ತಿ ಹಿಡಿಯಬೇಕಾಗಿದೆ.


ರಾಮನಗರದ 60 ವರ್ಷದ ಯಶೋಧಮ್ಮ ಮೈಕ್ರೋ ಫೈನಾನ್ಸ್ ಗೆ ಬಲಿಯಾಗಿದ್ದಾರೆ.

ಮಾರಾಟ, ಮಣ್ಣಿನ ಮಡಿಕೆಯನ್ನು

ಪುಟ 7 ಕ್ಕೆ

ಒಡನಾಡಿ ಬಯ್ಯಾರೆಡ್ಡಿಗೆ ನುಡಿನಮನ

ಎಸ್.ಆರ್. ಆರಾಧ್ಯ, ಹಿರಿಯ ಪತ್ರಕರ್ತರು

ಅದು ಎಂಬತ್ತರ ದಶಕದ ಆರಂಭ. ಆಗಷ್ಟೇ ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿಯಾಗಿದ್ದ ನಾನು ಸಂಘಟನೆಯ ವಿಸ್ತರಣೆಗಾಗಿ ವಿವಿಧ ಜಿಲ್ಲೆಗಳಿಗೆ ಸತತ ಪ್ರವಾಸ ಮಾಡುತ್ತಿದ್ದೆನು. ಅದರ ಭಾಗವಾಗಿ ಆಗಾಗ್ಗೆ ಕೋಲಾರ ಜಿಲ್ಲೆಗೂ (ಅವಿಭಜಿತ) ಭೇಟಿ ನೀಡುತ್ತಿದ್ದೆನು.

ಆಗ ಅಲ್ಲಿ ಪ್ರಬಲ ರೈತ ನಾಯಕರಾಗಿದ್ದ ಬೈರಾಬಂಡದ ಜಿ.ವಿ. ಅಶ್ವತ್ಥನಾರಾಯಣ ರೆಡ್ಡಿಯವರ ಬೆಂಬಲದಿಂದ ಮುನಿನಾರಾಯಣಸ್ವಾಮಿ, ಆರ್.ಮನೋಹರ್ ಮುಂತಾದವರ ಸಹಕಾರದಿಂದ ಎಸ್‌ಎಫ್‌ಐ ಘಟಕವನ್ನು ಬಲಿಷ್ಠವಾಗಿ ಬೆಳಸಲು ಪ್ರಯತ್ನಿಸಿದೆವು.

ಆ ಸಂದರ್ಭದಲ್ಲಿ ಈಗ ವಕೀಲರಾಗಿರುವ ಟಿ.ಎನ್. ಶಿವಾರೆಡ್ಡಿ, ಕೆ.ವಿ. ಸತ್ಯನಾರಾಯಣ, ಜಯಪ್ರಸಾದ್ ರೆಡ್ಡಿ, ಹರೀಂದ್ರ, ರಾಮಚಂದ್ರಪ್ಪ, ನಾರಾಯಣರೆಡ್ಡಿ, ರಾಮಕೃಷ್ಣ ಮುಂತಾದ ಧೈರ್ಯಶಾಲಿ ವಿದ್ಯಾರ್ಥಿಗಳ ಪಡೆಯೇ ಸಂಘಟನೆಯ ಮುಂದಾಳತ್ವ ವಹಿಸಿತ್ತು. ಆಗ ಕಾಂಗ್ರೆಸ್ ಮತ್ತು ಇಂದಿರಾಗಾಂಧಿಯವರ ಕಟ್ಟಾ ಬೆಂಬಲಿಗರಾಗಿದ್ದ ಜಿ.ಸಿ. ಬಯ್ಯಾರೆಡ್ಡಿಯವರ ಮನವೊಲಿಸಿ ಎಸ್‌ಎಫ್‌ಐಗೆ ಆಕರ್ಷಿಸಿದೆವು.

ಹೀಗೆ ಎಡಪಂಥೀಯ ಕ್ರಾಂತಿಕಾರಿ ಹೋರಾಟದ ಅಖಾಡಕ್ಕೆ ಧುಮುಕಿದ ಕಾಮ್ರೇಡ್ ಬಯ್ಯಾರೆಡ್ಡಿ ಚಿಂತಾಮಣಿ ತಾಲ್ಲೂಕು ಮತ್ತು ಕೋಲಾರ ಜಿಲ್ಲೆಯಲ್ಲಿ ಎಸ್‌ಎಫ್‌ಐ ಸಂಘಟನೆಯನ್ನು ಪ್ರಬಲವಾಗಿ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಕರ್ನಾಟಕದಲ್ಲಿ ಎಸ್‌ಎಫ್‌ಐ ಮೊಳಕೆಯೊಡೆದಿದ್ದೇ ಚಿಂತಾಮಣಿ ತಾಲ್ಲೂಕಿನ ಕೋನಕೊಂಟ್ಲುನಲ್ಲಿ ಜರುಗಿದ ಶಿಬಿರದ ಮೂಲಕ ಎಂಬ ಸಂಗತಿ ಮರೆಯುವಂತಿಲ್ಲ. ನಿವೃತ್ತ ನ್ಯಾಯಮೂರ್ತಿಗಳಾದ ವಿ. ಗೋಪಾಲಗೌಡ, ಕಾಮ್ರೇಡ್ ಎಂ.ಕೆ. ಭಟ್, ಮಾಜಿ ಶಾಸಕ ಜಿ.ವಿ.ಶ್ರೀರಾಮರೆಡ್ಡಿ, ಮಾಜಿ ಶಾಸಕ ಮೋಹನ ಕುಮಾರ ಕೊಂಡಜ್ಜಿ, ತಿಪಟೂರಿನ ಆರ್.ಎಸ್. ಚನ್ನಬಸವಣ್ಣ ಮೊದಲ ರಾಜ್ಯ ಪದಾಧಿಕಾರಿಗಳಾಗಿ ಸಾರಥ್ಯ ವಹಿಸಿದ್ದರು.

ಕಮ್ಯುನಿಸ್ಟ್ ಚಳವಳಿಯ ಪ್ರಬಲ ನೆಲೆಯಾಗಿದ್ದ ಕೋಲಾರ ಜಿಲ್ಲೆಯ ಮಣ್ಣಿನಲ್ಲಿ ಅರಳಿದ ಬಯ್ಯಾರೆಡ್ಡಿ ಎಸ್‌ಎಫ್‌ಐ ರಾಜ್ಯ ಅಧ್ಯಕ್ಷರಾಗಿ ವಿದ್ಯಾರ್ಥಿ ಚಳವಳಿ ಮಾತ್ರವಲ್ಲದೆ, ನಂತರ ಪ್ರಾಂತ ರೈತ ಸಂಘದ ರಾಜ್ಯ ನಾಯಕನಾಗಿ ರೂಪುಗೊಂಡು ಸಿಪಿಐ(ಎಂ) ಪಕ್ಷದಲ್ಲಿ ಪ್ರಮುಖ ಸ್ಥಾನ ಅಲಂಕರಿಸಿದ್ದರು. ಅನಾರೋಗ್ಯದ ನಡುವೆಯೂ ಅವಿರತವಾಗಿ ಕಾಯಕಜೀವಿಗಳ ಕಲ್ಯಾಣಕ್ಕಾಗಿ ಸಮಾಜವಾದಿ ಸಮಾಜ ನಿರ್ಮಾಣದ ಗುರಿಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಅಪರೂಪದ ಜನನಾಯಕ.

ಸಂಯುಕ್ತ ಹೋರಾಟ ಕರ್ನಾಟಕ ವೇದಿಕೆಯ ಸಂಚಾಲಕರಾಗಿಯೂ ಐಕ್ಯ ಜನಾಂದೋಲನ ಕಟ್ಟುವಲ್ಲಿ ಅಮೂಲ್ಯ ಕೊಡುಗೆ ನೀಡಿದ ಸಮಾಜಮುಖಿ ಚಿಂತನೆಯ ತ್ಯಾಗಜೀವಿ ಗೆಳೆಯ ಬಯ್ಯಾರೆಡ್ಡಿ ಅಗಲಿಕೆ ತುಂಬಲಾರದ ನಷ್ಟವೇ ಸರಿ. ಅವರ ಸಾರ್ಥಕ ಜೀವನ ಪಯಣದ ನೆನಪು ಅಜರಾಮರ. ❍

ಸ್ಪಷ್ಟತೆಯ, ದಿಟ್ಟತೆಯ ಧೀರ ಸಂಗಾತಿ..... ಪುಟ 3 ರಿಂದ

ಅವರಿಗೆ ತುಂಬಾ ಖುಷಿಯಾಗಿತ್ತು. ಆಸ್ಪತ್ರೆಯ ಯಂತ್ರಗಳ ನಡುವೆ ಬಂಧಿಯಾಗಿದ್ದ ಬಯ್ಯಾರೆಡ್ಡಿಯವರು ಉಸಿರಾಡಲು ಕಷ್ಟಪಡುತ್ತಿದ್ದರು. ಮನಸ್ಸಿನಾಳದಿಂದ ಅವರು ಹುಷಾರಾಗಿ ಬರುತ್ತಾರೆಂಬ ಬಲವಂತದ ನಂಬಿಕೆ, ಯಂತ್ರಗಳನ್ನೇ ಉಸಿರಾಡುತ್ತಿರುವ ದೇಹದ ಸಾಮರ್ಥ್ಯದ ಕುರಿತ ತಿಳುವಳಿಕೆ. ಭಾರವಾದ ಮನಸ್ಸಿಂದ ಹೊರಬಂದೆ. ಎರಡು ದಿನದಲ್ಲಿ ಧೀರೋದ್ದಾತ ದೇಹದೆದರು ಅಧೀರನಾಗಿ ನಿಂತಿದ್ದೆ, ನನ್ನ ಜೀವನದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿದ ಜಿಸಿಬಿ ಮಾತು ನಿಲ್ಲಿಸಿದ್ದರು.

ಪಕ್ಷದಲ್ಲಿ ಕೆಲಸ ಮಾಡಿದ ಸಂಗಾತಿಗಳನ್ನು ಅವರ ಕೊನೆಯ ದಿನಗಳಲ್ಲಿ ಪಕ್ಷ ಗಮನ ಕೊಡಬೇಕೆಂಬ ಕಾಳಜಿಯಿಂದ "ಸಾಂತ್ವನ" ಸಮಿತಿಯನ್ನು ಮಾಡಲು ಮುತುವರ್ಜಿ ಮಾಡಿದ್ದರು. ಪಕ್ಷದ ಪೂರ್ಣಾವಧಿ ಕಾರ್ಯಕರ್ತರ ಜೀವನ ನಿರ್ವಹಣೆ ಕುರಿತು ಕಾಳಜಿ, ಅದಕ್ಕಾಗಿ ಬೆಂಗಳೂರಿನ ಹರಿಹರನ್ ನೀಡಿದ್ದ ಜಾಗವನ್ನು ಪೂರ್ಣಾವಧಿ ಕಾರ್ಯಕರ್ತರಿಗೆ ವಸತಿ ಯೋಜನೆಯಾಗಿ ರೂಪಿಸುವಲ್ಲಿ ಪಾತ್ರ ವಹಿಸಿದ್ದರು. ಈ ಯೋಜನೆಯನ್ನು ಆದ್ಯತೆಯ ಮೇರೆಗೆ ಜಾರಿಗೊಳಿಸಬೇಕಾಗಿದೆ.

ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಕಾಮ್ರೇಡ್ ಸೂರಿ (ಎಸ್.ಸೂರ್ಯನಾರಾಯಣ ರಾವ್) ಅನಾರೋಗ್ಯದಿಂದ ನಾರಾಯಣ ಹೃದಯಾಲಯದಲ್ಲಿ ಕೊನೆಯ ಕ್ಷಣಗಳಲ್ಲಿ, "ಪಕ್ಷವನ್ನು ಕಾಪಾಡಿ, ಪಕ್ಷವನ್ನು ಬೆಳೆಸಿ" ಎಂದು ತಮಗೆ ಹೇಳಿದ ಮಾತುಗಳನ್ನು ಬಯ್ಯಾರೆಡ್ಡಿಯವರು ಪದೇ ಪದೇ ನೆನಪಿಸಿಕೊಳ್ಳುತ್ತಿದ್ದರು. ಈ ಮಾತುಗಳು ನಮ್ಮೆಲ್ಲರ ಮುಂದಿವೆ. ❍

ಷೇರು ಕಂಪನಿಗಳೂ, ಷೇರು ಮಾರುಕಟ್ಟೆಗಳೂ... ಪುಟ 2 ರಿಂದ

ಜಗತ್ತಿನಲ್ಲಿ ಮೊತ್ತ ಮೊದಲ ಜಾಯಿಂಟ್ ಸ್ಟಾಕ್ ಕಂಪನಿ ಎಂದು ಪರಿಗಣಿಸಲಾದದ್ದು 240 ಷೇರುದಾರರೊಂದಿಗೆ 1551 ರಲ್ಲಿ ಸ್ಥಾಪಿಸಲಾದ "ಕಂಪನಿ ಆಫ್ ಮರ್ಚಂಟ್ ಅಡ್ವೆಂಚರರ್ಸ್ ಟು ನ್ಯೂಲ್ಯಾಂಡ್ಸ್" (ಹೊಸ ಪ್ರದೇಶಗಳತ್ತ ಸಾಹಸಿ ವ್ಯಾಪಾರಿಗಳ ಕಂಪನಿ) ಎಂಬ ಅದರ ಹೆಸರೇ ಕಂಪನಿಯ ಉದ್ದೇಶವನ್ನು ಸ್ಪಷ್ಟ ಪಡಿಸುತ್ತದೆ.

ನಮ್ಮ ದೇಶದ ಚರಿತ್ರೆಯಲ್ಲಿ 200 ವರ್ಷಗಳ ಲೂಟಿಗೆ ಅವಕಾಶ ನೀಡಿದ, 1600 ರಲ್ಲಿ ಸ್ಥಾಪಿಸಲಾದ ಈಸ್ಟ್ ಇಂಡಿಯಾ ಕಂಪನಿ ಅಂತಹುದ್ದೊಂದು. ಇದರ ಬಗ್ಗೆ ನಾವು ಬಹಳ ವಿವರವಾಗಿ ತಿಳಿದುಕೊಳ್ಳಬೇಕಲ್ಲವೇ! ಮುಂದಿನೊಂದು ಲೇಖನದಲ್ಲಿ ನಿರೀಕ್ಷಿಸಿ.

ಇದರ ನಂತರ ಹಲವಾರು ಈಸ್ಟ್ ಇಂಡಿಯಾ ಕಂಪನಿಗಳು, ವೆಸ್ಟ್ ಇಂಡಿಯಾ ಕಂಪನಿಗಳು ಸ್ಥಾಪಿಸಲ್ಪಟ್ಟವು. ಹಾಲಂಡ್, ಫ್ರೆಂಚ್, ಡೆನ್ಮಾರ್ಕ್ ಈಸ್ಟ್ ಇಂಡಿಯಾ ಕಂಪನಿಗಳು ಇಂತಹವು.

1602ರಲ್ಲಿ ಸ್ಥಾಪನೆಯಾದ ಹಾಲಂಡಿನ ಈಸ್ಟ್ ಇಂಡೀಸ್ ಕಂಪನಿ –ವಿಒಸಿ. ಈ ಕಂಪನಿ ನೂರಾರು ಹಡಗುಗಳ ಪಡೆಯಿಂದ ಇಂಡಿಯಾ ಮಲಯಾ, ಇಂಡೋನೇಷ್ಯಾಗಳಲ್ಲಿ ವ್ಯಾಪಾರ ಆರಂಭಿಸಿತು. ಕೊನೆಗೆ ಎರಡು ಶತಮಾನಗಳ ಕಾಲ ಇಂಡೋನೇಷ್ಯಾವನ್ನು (ಸ್ವಾತಂತ್ರ್ಯ ಪಡೆಯುವವರೆಗೂ ಇದಕ್ಕೆ ಈಸ್ಟ್ ಇಂಡೀಸ್ ಎಂಬ ಹೆಸರಿತ್ತು) ಆಕ್ರಮಿಸಿಕೊಂಡು ಆಳಿತು, ದೋಚಿತು.

ಈ ಕಂಪನಿ ತನ್ನಲ್ಲಿ ಹೂಡಿದ ಬಂಡವಾಳದ ಬಗ್ಗೆ ಷೇರು ಸರ್ಟಿಫಿಕೇಟ್‌ಗಳನ್ನು ನೀಡಿತು. ಈ ಸರ್ಟಿಫಿಕೇಟ್‌ಗಳನ್ನು ಷೇರುದಾರರು ಮಾರಾಟ ಮಾಡಲಾರಂಭಿಸಿದರು. ಹೀಗೆ ಹಾಲಂಡ್‌ನ ಅಮ್ಸ್ಟರ್‌ಡಾಮ್‌ನಲ್ಲಿ ಮೊದಲ ಸ್ಟಾಕ್ ಎಕ್ಸ್‌ಚೇಂಜ್ ಸ್ಥಾಪನೆಯಾಯಿತು.

ಹಾಗೆಯೇ ಹಲವು ಕಂಪನಿಗಳು ಅಮೇರಿಕದ ವಿವಿಧ ಪ್ರದೇಶಗಳಲ್ಲಿ ವಸಾಹತು ಸ್ಥಾಪಿಸುವ ಗುರಿಯಿಂದ ಲಂಡನ್ ಕಂಪನಿ, ಪೆನ್ಸಿಲ್ವೇನಿಯ ಕಂಪನಿ, ವರ್ಜೀನಿಯಾ ಕಂಪನಿ ಮೊದಲಾದವು ಅಸ್ತಿತ್ವಕ್ಕೆ ಬಂದವು.

ಮೊದಲ ಹಂತದ ಈ ಷೇರು ಕಂಪನಿಗಳ ಸಾಹಸಯಾನಗಳು ಅಥವಾ ಸ್ಥಾಪಿಸಿದ ಕೈಗಾರಿಕೆಗಳು ನಷ್ಟಕ್ಕೊಳಗಾದರೆ ಒಬ್ಬ ವ್ಯಕ್ತಿ ಅಥವಾ ಕುಟುಂಬದ ಮಾಲೀಕತ್ವದ ಉದ್ದಿಮೆಗಳಂತೆ ಎಲ್ಲ ಷೇರುದಾರರ ಆಸ್ತಿಗಳೂ ಅದಕ್ಕೆ ಹೊಣೆಯಾಗಬೇಕಾಗಿತ್ತು. ಆಗ ಸಣ್ಣ ಸಣ್ಣ ಷೇರುದಾರರು ಇದರಿಂದ ಭಯಪಟ್ಟು ಹೂಡಿಕೆ ಮಾಡಲು ಹಿಂಜರಿದರು. ಆಗ ಷೇರು ಕಂಪನಿಗಳು ಯಾವುದೇ ನಷ್ಟಕ್ಕೆ ಷೇರುದಾರರು ಬಾಧ್ಯರಲ್ಲ ಎಂಬ ಶರತ್ತಿನೊಂದಿಗೆ ಷೇರುಗಳನ್ನು ಮಾರಲಾರಂಭಿಸಿದರು. ನಂತರ ಸರ್ಕಾರದ ಮೇಲೆ ಒತ್ತಾಯ ತಂದು ಅದಕ್ಕಾಗಿಯೇ ಲಿಮಿಟೆಡ್ ಲಯಬಿಲಿಟಿ (ಸೀಮಿತ ಹೊಣೆ) ಕಾನೂನು 1856ರಲ್ಲಿ ಜಾರಿಯಾಯಿತು. ಇದೇ ಕಂಪನಿಗಳ ಹೆಸರಿನ ಜೊತೆಗೆ ಸೇರಿಕೊಂಡ ಲಿಮಿಟೆಡ್ ಎಂಬ ಪದದ, ಪರಿಕಲ್ಪನೆಯ ಇತಿಹಾಸ.

ಸೀಮಿತ ಹೊಣೆಯ ಷೇರು ಕಂಪನಿಗಳು ಅಸ್ತಿತ್ವಕ್ಕೆ ಬಂದ ಮೇಲೆ ಹಲ ಹಲವು ಸಾವಿರ ಜನರು ತಮ್ಮ ಉಳಿತಾಯಗಳನ್ನು ಇಂತಹ ವ್ಯಾಪಾರಿ ಅಥವಾ ಕೈಗಾರಿಕಾ ಕಂಪನಿಗಳಲ್ಲಿ ಹೂಡತೊಡಗಿದರು. ಲಂಡನ್ ಸ್ಟಾಕ್ ಎಕ್ಸ್ಚೇಂಜ್ ಇಡೀ ಯುರೋಪಿನ ಮುಖ್ಯ ಷೇರು ಮಾರಾಟದ ಸಂಸ್ಥೆಯಾಯಿತು. ಇಂಗ್ಲೆಂಡ್‌ನ ಜನ ಮಾತ್ರವಲ್ಲ ಇಡೀ ಯುರೋಪಿನ ಹಲ ಜನರು ಇಂಗ್ಲೀಷ್ ಕಂಪನಿಗಳಲ್ಲಿ ಹಣ ಹೂಡತೊಡಗಿದರು.

ರೈಲ್ವೆ ಮಾರ್ಗಗಳನ್ನು ವ್ಯಾಪಕವಾಗಿ ಹಾಕತೊಡಗಿದ ಅವಧಿಯಲ್ಲಿ ಬಂಡವಾಳದ ಮಾರುಕಟ್ಟೆ ಹೊಸ ರೂಪವನ್ನೇ ತಳೆಯಿತು. ಲಂಡನ್ ಮಾತ್ರವಲ್ಲ ಇಂಗ್ಲೆಂಡ್‌ನ ಲಿವರ್ ಪೂಲ್, ಮ್ಯಾಂಚೆಸ್ಟರ್, ಗ್ಲಾಸ್ಗೊ ಮೊದಲಾದ ನಗರಗಳಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ಗಳು ತುಂಬಿ ತುಳುಕತೊಡಗಿದವು. ಇದಕ್ಕೆ 1840 ರ ದಶಕದ ಮೇನಿಯಾ (ಹುಚ್ಚು) ಎಂದು ಕರೆಯಲಾಗಿದೆ.

"ಬಂಡವಾಳ" ಕೃತಿಯಲ್ಲಿ ಷೇರು ಬಂಡವಾಳ

ಬಂಡವಾಳದ ಈ ವಿಶೇಷ ವಿದ್ಯಮಾನದ ಬಗ್ಗೆ ಬಂಡವಾಳ ಕೃತಿಯಲ್ಲಿ ವಿಶ್ಲೇಷಣೆ ಮಾಡದಿರುವುದು ಸಾಧ್ಯವೇ! ಷೇರುಗಳ ಮೂಲಕ ಬಂಡವಾಳ ಸಂಗ್ರಹಣೆಯನ್ನು ಕೇಂದ್ರೀಕರಣ ಎಂದು ವಿವರಿಸಿರುವ ಮಾರ್ಕ್ಸ್‌ರವರು ಕೈಗಾರಿಕೆಗಳ ಒಳಗೆ ಪಡೆಯಲಾಗುವ ಮಿಗುತಾಯ ಮೌಲ್ಯವನ್ನು ಮತ್ತೆ ಅಲ್ಲಿಯೇ ಹೂಡಲಾಗುವ ಬಂಡವಾಳದ ಶೇಖರಣೆ ಬಹಳ ನಿಧಾನವಾದ ಪ್ರಕ್ರಿಯೆ. ಆದರೆ ಹಲವರ ಬಂಡವಾಳವನ್ನು ಒಗ್ಗೂಡಿಸುವ ಷೇರು ಕಂಪನಿಗಳ ಮೂಲಕ ನಡೆಯುವ ಈ ಕ್ರಿಯೆ ಸರಾಗವಾದದ್ದು ಮತ್ತು ವೇಗವಾದದ್ದು. ಈ ಕೇಂದ್ರೀಕರಿಸಿದ ಬಂಡವಾಳದಿಂದ ಹಲ ಹಲವು ಜನರ ಸಾಮೂಹಿಕ ಕೆಲಸವನ್ನು ಇನ್ನೂ ಹೆಚ್ಚು ಸಮಗ್ರವಾಗಿ ಸಂಘಟಿಸಲು ನೆರವಾಗುತ್ತದೆ. ಪರಂಪರಾಗತ ಪದ್ಧತಿಗಳಿಂದ ನಡೆಯುತ್ತಿರುವ ಉತ್ಪಾದನೆಯನ್ನು ಸಮೂಹದಲ್ಲಿ ಒಗ್ಗೂಡಿಸಿ ವೈಜ್ಞಾನಿಕವಾಗಿ ವ್ಯವಸ್ಥೆಗೊಳಿಸಿ ಪ್ರಗತಿಪರವಾಗಿ ರೂಪಾಂತರಗೊಳಿಸಲು ಸಹಾಯಕವಾಗುತ್ತದೆ.

ಕೈಗಾರಿಕೆಗಳ ಒಳಗಿನ ಬಂಡವಾಳದ ಪುನರುತ್ಪಾದನೆಯನ್ನು ನೆಚ್ಚಿದ್ದರೆ ರೈಲ್ವೆ ಮಾರ್ಗಗಳ ನಿರ್ಮಾಣ ಇಲ್ಲಿಯವರೆಗೂ ಸಾಧ್ಯವಾಗುತ್ತಿರಲಿಲ್ಲ (ಬಂಡವಾಳ ಕೃತಿ ಬರೆಯುತ್ತಿದ್ದ ವೇಳೆಯವರೆಗೂ). ಅದರ ಉಪಯೋಗದಿಂದ ಸಾರಿಗೆ, ವ್ಯಾಪಾರ, ಕೈಗಾರಿಕಾ ಬೆಳವಣಿಗೆಯ ದೊಡ್ಡ ಪ್ರಮಾಣದ ಹಾಗೂ ವೇಗವಾದ ಬೆಳವಣಿಗೆ ಸಾಧ್ಯವಾಗುತ್ತಿರಲಿಲ್ಲ. ಆದರೆ ಷೇರು ಕಂಪನಿಗಳ ಮೂಲಕ ಕಣ್ಣವೆ ಪಿಳುಕಿಸುವುದರೊಳಗೆ ಅವಶ್ಯ ಬಂಡವಾಳದ ಸಂಗ್ರಹಣೆ ಸಾಧ್ಯವಾಯಿತು.

ಹೀಗೆ ರಾತ್ರೋರಾತ್ರಿ ಕೇಂದ್ರೀಕರಣದ ಮೂಲಕ ಜನಸಮೂಹದ ಬಂಡವಾಳ ಮತ್ತೆ ಬೇರೆ ವಿಧಾನಗಳಿಗಿಂತ ವೇಗವಾಗಿ ಪುನರುತ್ಪಾದನೆಗೊಳ್ಳುತ್ತದೆ ಮತ್ತು ಸಾಮಾಜಿಕ ಬಂಡವಾಳ ಸಂಗ್ರಹಣೆಯ ಹೊಸ, ಶಕ್ತಿಯುತವಾದ ಕೀಲಿಕೈ ಆಗುತ್ತದೆ. ಬಂಡವಾಳದ ತಾಂತ್ರಿಕ, ಸ್ಥಿರ ಭಾಗವನ್ನು ಹೆಚ್ಚಿಸುತ್ತದೆ. ವೈಜ್ಞಾನಿಕ ಸಂಶೋಧನೆಗಳ ವ್ಯಾಪಕ ಕೈಗಾರಿಕಾ ಬಳಕೆಗೆ ಪ್ರಚೋದಕವಾಗುತ್ತದೆ' ಎಂದಿದ್ದಾರೆ.

ಷೇರುದಾರರೆಂಬ ಪರೋಪಜೀವಿಗಳೂ, ಜೂಜಾಟದ ಹಗರಣಗಳೂ

ಹೀಗೆ ಆರಂಭವಾದ ಷೇರು ಕಂಪನಿಗಳು ಈಗ ವಿಶ್ವದಲ್ಲಿ ಎಲ್ಲೆಲ್ಲೂ ನಾನೆ ಎಂಬಂತೆ ಪಸರಿಸಿವೆ. ಈ ಕಂಪನಿಗಳು ಅದರ ಎಲ್ಲ ಕೆಲಸಗಾರರು, ವ್ಯವಸ್ಥಾಪಕರನ್ನು ಕಿತ್ತು ಹಾಕಿದರೂ, ಷೇರುದಾರರು ಅದರಲ್ಲಿನ ತಮ್ಮ ಷೇರುಗಳನ್ನು, ಆ ಕಂಪನಿಯ ಯಂತ್ರಗಳು, ಸ್ವತ್ತುಗಳನ್ನು ಮಾರಿದರೂ ಅಸ್ತಿತ್ವದಲ್ಲಿರುತ್ತವೆ. ಕಾನೂನಿನ ಪ್ರಕಾರ ಕೋರ್ಟ್ ಒಂದು ಅದರ ಅಸ್ತಿತ್ವಕ್ಕೆ ಇತಿಶ್ರೀ ಹಾಡುವವರೆಗೆ. ಹೀಗೆ ಕಂಪನಿಯೊಂದು ಜೀವವಿಲ್ಲದ ವ್ಯಕ್ತಿಯಾಗಿದೆ.

ಈ ರೀತಿಯ ಬಂಡವಾಳದ ಸಂಗ್ರಹಣೆ ಒಂದು ಹೊಸ ರೀತಿಯ ಪರೋಪಜೀವಿಗಳನ್ನು ಹುಟ್ಟುಹಾಕಿದೆ. ಉತ್ಪಾದನಾ ಪ್ರಕ್ರಿಯೆ, ಅದರ ಕಾರ್ಯಗಳಿಗೇನೂ ಸಂಬಂಧವಿಲ್ಲದ, ಆದರೆ ಅದರಿಂದ ಡಿವಿಡೆಂಡ್ (ಪಾಲು) ಪಡೆಯುತ್ತಾ ವಿರಾಮ ಜೀವನ ನಡೆಸುವ ಪರೋಪಜೀವಿಗಳು. ಹಿಂದೆ ಹಳ್ಳಿಗಳ ಹೊಲ ತೋಟಗಳನ್ನು ಲಾವಣಿ, ಗೇಣಿಗೆ ಕೊಟ್ಟು ನಗರ ಸೇರಿ ಕೇವಲ ಇವುಗಳ ಹುಟ್ಟುವಳಿಯನ್ನು ಪಡೆದು ಜೀವಿಸುತ್ತಿದ್ದ ಗೈರುಹಾಜರಿ ಜಮೀನುದಾರರು, ಭೂಮಾಲಕರಂತೆ.

ಈ ಕಂಪನಿಗಳ ಲಾಭ ನಷ್ಟದ ಹೊರತಾಗಿ ಬೇರೇನೂ ಸಂಬಂಧವಿರದ ಈ ಸ್ಥಿತಿಯೇ ಈ ಕಂಪನಿಗಳ ಕಪ್ಪು ಜನರ ಮೇಲಿನ ಕ್ರೌರ್ಯ, ಅಮಾನವೀಯ ಗುಲಾಮಗಿರಿ, ಮೂಲನಿವಾಸಿಗಳ ನರಹತ್ಯೆ ಮೊದಲಾದ ನೀಚತನ ಅವುಗಳಲ್ಲಿ ಷೇರುಗಳ ಮೂಲಕ ಭಾಗಶಃ ಒಡೆಯರಾದ ಷೇರುದಾರರ ನೈತಿಕ ಪ್ರಜ್ಞೆಗೆ ಯಾವ ಬಾಧಕವನ್ನೂ ತರದಿರುವುದು.

ಅವರು ಷೇರು ಹೂಡಿರುವ ಕಂಪನಿಗಳು ಇಂತಹ ಯಾವುದೇ ಕುಕೃತ್ಯ, ಘೋರತರ ಅಪರಾಧಗಳನ್ನು ಎಸಗುತ್ತಿದ್ದರೂ ಅದರ ಷೇರುದಾರರು ನೈತಿಕತೆ, ಮಾನವೀಯತೆಗಳ ಉಪದೇಶ ಮಾಡುತ್ತಾ ಸಮಾಜದ ಗೌರವ ಪಡೆಯುತ್ತಾ ಸುಭಗರಂತೆ ಬದುಕಲು ಅವಕಾಶ ಮಾಡಿಕೊಟ್ಟಿದೆ.

ಇನ್ನೂ ಮುಂದುವರೆದು ಷೇರುಗಳ ಮಾರಾಟ ಒಂದು ಜೂಜಾಟವಾಗಿ, ಷೇರು ಮಾರುಕಟ್ಟೆ ಕುಸಿತ, ಷೇರು ಹಗರಣ ಮುಂತಾದ ಪ್ರಸಂಗಗಳಿಗೆ ಎಡೆ ಮಾಡಿಕೊಟ್ಟಿದೆ. ಲಕ್ಷಾಂತರ ಜನರನ್ನು ಪಾಪರೆಬ್ಬಿಸಿದೆ, ಹಸಿವಿಗೆ, ಸಾವಿಗೆ ದೂಡಿದೆ. ❍



ಟ್ರಂಪ್‌ರ ಧನಿಕ ವರ್ಗದ ಪ್ರಭುತ್ವ

ಪ್ರಕಾಶ್ ಕಾರತ್

ಡೊನಾಲ್ಡ್ ಟ್ರಂಪ್ ಅಮೆರಿಕದ ಹೊಸ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿ ಮಾಡಿದ ಭಾಷಣ ಮತ್ತು ಅಧಿಕಾರದ ಮೊದಲ ದಿನವೇ ಹೊರಡಿಸಿದ ಪುಂಖಾನುಪುಂಖ ಕಾರ್ಯಾದೇಶಗಳು, ಟ್ರಂಪ್ ಏನು ಹೇಳುತ್ತಾರೋ ಅದನ್ನೇ ಮಾಡುತ್ತಾರೆ ಎನ್ನುವುದನ್ನು ತೋರಿಸುತ್ತದೆ. ಅಮೆರಿಕವನ್ನು ಮತ್ತೆ ಮಹಾನ್ ದೇಶವನ್ನಾಗಿ ಮಾಡಬೇಕೆನ್ನುವ ಭರದಲ್ಲಿ ಟ್ರಂಪ್ ಪನಾಮಾ ಕಾಲುವೆಯನ್ನು ವಶಪಡಿಸಿಕೊಳ್ಳುವ ಬೆದರಿಕೆ ಹಾಕಿದ್ದಾರೆ. 1977ರ ಒಡಂಬಡಿಕೆಯನ್ವಯ ಈ ಕಾಲುವೆಯನ್ನು ಪನಾಮಾಕ್ಕೆ ಹಸ್ತಾಂತರಿಸಲಾಗಿತ್ತು. 'ಮೆಕ್ಸಿಕೋ ಕೊಲ್ಲಿ'ಯನ್ನು ಅವರು 'ಅಮೆರಿಕ ಕೊಲ್ಲಿ' ಎಂದು ಮರುನಾಮಕರಣ ಮಾಡಿದ್ದಾರೆ. ಅಮೆರಿಕದ ಪ್ರಾದೇಶಿಕ ಸರಹದ್ದನ್ನು ವಿಸ್ತರಿಸಲು ಹೆಚ್ಚೆಚ್ಚು ಸಾಮ್ರಾಜ್ಯಶಾಹಿ ಕ್ರಮಗಳನ್ನು ಕೈಗೊಳ್ಳುವುದಾಗಿ ಪ್ರಕಟಿಸಿದ್ದಾರೆ. ಇತ್ತೀಚಿನ ಇತಿಹಾಸದಲ್ಲಿ ಅಮೆರಿಕದ ಯಾವ ಅಧ್ಯಕ್ಷರೂ ಹೀಗೆ ಮಾಡಿದ ದೃಷ್ಟಾಂತವಿಲ್ಲ. ಮೆಕ್ಸಿಕೋದೊಂದಿಗಿನ ದಕ್ಷಿಣ ಗಡಿಗಳಲ್ಲಿ ತುರ್ತು ಪರಿಸ್ಥಿತಿಗೆ ಟ್ರಂಪ್ ಆದೇಶಿಸಿದ್ದು ಗಡಿ ದಾಟಿ ಬರುವ ವಲಸಿಗರನ್ನು ತಡೆಯಲು ಸೇನೆಯನ್ನು ನಿಯೋಜಿಸಿದ್ದಾರೆ. ಜನ್ಮಸಿದ್ಧ ಪೌರತ್ವ ಹಕ್ಕಿನ ರದ್ದತಿ ಸಹಿತ ಇನ್ನೂ ಹಲವು ವಲಸೆ-ವಿರೋಧಿ ಕ್ರಮಗಳನ್ನು ಕೈಗೊಂಡಿದ್ದಾರೆ. ಇದು ಅನ್ಯ-ದ್ವೇಷವನ್ನು ಹೆಚ್ಚಿಸಿ ಅತಿ-ಬಲಪಂಥೀಯರ ಆಟಾಟೋಪಗಳಿಗೆ ಇಂಬು ನೀಡಲಿದೆ.

ತಾಪಮಾನ ಕುರಿತ ಪ್ಯಾರಿಸ್ ಒಡಂಬಡಿಕೆಯಿಂದ ಅಮೆರಿಕ ಹೊರಬರುವ ಆದೇಶಕ್ಕೂ ಟ್ರಂಪ್ ಅಂಕಿತ ಹಾಕಿದ್ದಾರೆ. ದೇಶದೊಳಗಿನ ಪರಿಸರ ರಕ್ಷಣೆ ಕ್ರಮಗಳನ್ನು ರದ್ದುಪಡಿಸುವ ಆದೇಶವೂ ಒಂದಾಗಿದೆ. ನಿಯಂತ್ರಣಗಳ ಕಟ್ಟುಪಾಡುಗಳು ಹೋಗಿ ಸಿಗುವ ಸ್ವಾತಂತ್ರ್ಯವನ್ನು ಎಗ್ಗಿಲ್ಲದಂತೆ ದುರುಯೋಗಪಡಿಸಿಕೊಳ್ಳಲು ತೈಲ ಲಾಬಿ ತುದಿಗಾಲ ಮೇಲೆ ನಿಂತಿದೆ.

ಟ್ರಂಪ್ ಎರಡನೇ ಸಲ ಅಧ್ಯಕ್ಷರಾಗಿದ್ದಕ್ಕೆ ತಂತ್ರಜ್ಞಾನ ದಿಗ್ಗಜರು ಮತ್ತು ಅತಿ ಧನಾಢ್ಯರ (ಸೂಪರ್ ರಿಚ್) ಬೆಂಬಲ ಟ್ರಂಪ್‌ಗಿರುವುದು ಅವರ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಹಾಜರಿದ್ದ ಜನರಿಂದಲೇ ಗೊತ್ತಾಗುತ್ತದೆ. ಜಗತ್ತಿನ ಅತ್ಯಂತ ಶ್ರೀಮಂತ ವ್ಯಕ್ತಿ ಎಲಾನ್ ಮಸ್ಕ್ ಮತ್ತು ಅಮೆರಿಕದ ಆಡಳಿತದಲ್ಲಿರುವ ಇತರ ಶತಕೋಟ್ಯಧಿಪತಿಗಳು ವಹಿಸಲಿರುವ ಪಾತ್ರವನ್ನು ಗಮನಿಸಿದರೆ ಟ್ರಂಪ್ ಸರ್ಕಾರ ನಿಶ್ಚಿತವಾಗಿಯೂ ಧನಿಕರ ಪ್ರಭುತ್ವ (ಪ್ಲುಟೋಕ್ರಸಿ) ಎನ್ನುವುದನ್ನು ಸಾಬೀತು ಪಡಿಸುತ್ತದೆ.

ಫೆಡರಲ್ ಸರಕಾರದ ಗಾತ್ರವನ್ನು ಕುಗ್ಗಿಸಲು ಮತ್ತು ಸಾಮಾಜಿಕ ಕಲ್ಯಾಣದ ವೆಚ್ಚಗಳನ್ನು ತಗ್ಗಿಸಲು ಸರಕಾರ ಕೈಗೊಳ್ಳುವ ಕ್ರಮಗಳಿಗೆ ಸಾಮಾಜಿಕ ಭದ್ರತಾ ಕ್ರಮಗಳು ಬಲಿಯಾಗಲಿವೆ ಎಂಬ ಭಯಕ್ಕೆ ಸಕಾರಣವಿದೆ. ಈ ಆಡಳಿತವು ದೊಡ್ಡ ವಾಣಿಜ್ಯೋದ್ಯಮಿಗಳು ಮತ್ತು ಕಾರ್ಪೊರೇಟ್ ಕಂಪನಿಗಳಿಗೆ ಲಂಗುಲಗಾಮಿಲ್ಲದ ಅವಕಾಶ ನೀಡಲಿದೆ.

ಅಂತಾರಾಷ್ಟ್ರೀಯ ಸಂಬಂಧಗಳ ವಿಚಾರದಲ್ಲಿ ಹೇಳುವುದಾದರೆ ಬಹುತ್ವವಾದ, ವಾಣಿಜ್ಯ ಟ್ಯಾರಿಫ್‌ಗಳು ಮತ್ತು ತಾಪಮಾನ ಬದಲಾವಣೆಗೆ ಸಂಬಂಧಿಸಿ ಟ್ರಂಪ್ ಆಡಳಿತ ಭಿದ್ರಕಾರಿಯಾಗಿ ಸಾಬೀತುಪಡಿಸುವುದಾದರೂ ಮೂಲಭೂತವಾಗಿ ಅಮೆರಿಕದ ಸಾಮ್ರಾಜ್ಯಶಾಹಿ ಹಿತಗಳನ್ನು ರಕ್ಷಿಸುವ ಪ್ರಕ್ರಿಯೆಯ ಮುಂದುವರಿಕೆಯಾಗಲಿದೆ.

ಜೋ ಬೈಡೆನ್ ಆಡಳಿತವು ತನ್ನ ನವಸಂಪ್ರದಾಯವಾದಿ ವಿದೇಶಾಂಗ ನೀತಿಗಾಗಿ ಕುಖ್ಯಾತವಾಗಿತ್ತು. ಬೈಡೆನ್ ಅಧಿಕಾರಾವಧಿಯಲ್ಲಿ ಗಾಜಾ ಮೇಲಿನ ಇಸ್ರೇಲ್‌ನ ನರಹತ್ಯೆಯ ಯುದ್ಧಕ್ಕೆ ಇಸ್ರೇಲ್ ಹಣಕಾಸು ಒದಗಿಸಿತ್ತು. ಮತ್ತು ರಷ್ಯಾ-ಉಕ್ರೇನ್ ಸಂಘರ್ಷವು ಪೂರ್ಣ ಪ್ರಮಾಣದ ಯುದ್ಧವಾಗಲು ಉಕ್ರೇನ್‌ಗೆ ಉದಾರ ಮಿಲಿಟರಿ ಹಾಗೂ ಆರ್ಥಿಕ ನೆರವನ್ನು ಒದಗಿಸಿತ್ತು. ಚೀನಾದೊಂದಿಗೆ ಸಂಘರ್ಷ ಹೆಚ್ಚಿಸುವುದನ್ನು ಹಾಗೂ ಏಷ್ಯಾ-ಪೆಸಿಫಿಕ್ ವಲಯದಲ್ಲಿ ಮೈತ್ರಿಕೂಟಗಳನ್ನು ಕಟ್ಟುವುದನ್ನು ಕೂಡ ಬೈಡೆನ್ ಮುಂದುವರಿಸಿದ್ದರು.

ಟ್ರಂಪ್ ಆಡಳಿತದ ಸಂಯೋಜನೆಯನ್ನು ನೋಡಿದರೆ, ಲ್ಯಾಟಿನ್ ಅಮೆರಿಕದಲ್ಲಿ ಕ್ಯೂಬಾ ಮತ್ತು ವೆನಿಜುವೆಲಾ ಬಗ್ಗೆ ಹೆಚ್ಚು ಆಕ್ರಮಣಕಾರಿ ಧೋರಣೆ ಅನುಸರಿಸಲಿದೆ ಎಂದು ನಿರೀಕ್ಷಿಸಬಹುದಾಗಿದೆ. ಅಲ್ಲಿ ಹೆಚ್ಚೆಚ್ಚು ಹಸ್ತಕ್ಷೇಪ ಮಾಡುವ ಸಂಭವವಿದೆ.

ಅಮೆರಿಕಕ್ಕೆ ಭಾರತೀಯ ಸರಕುಗಳ ರಫ್ತಿನ ಮೇಲೆ ಹೇರಬಹುದಾದ ತೆರಿಗೆಗಳು ಮತ್ತು ನಿರ್ಬಂಧಿತ ವೀಸಾ ನೀತಿ ಬಗ್ಗೆ ಟ್ರಂಪ್ ಆಡಳಿತ ಯಾವ ಕ್ರಮಗಳನ್ನು ಕೈಗೊಳ್ಳಲಿದೆ ಎಂದು ಮೋದಿ ಸರಕಾರ ಕಾತರದಿಂದ ಎದುರು ನೋಡುತ್ತಿದೆ. ದಾಖಲೆಗಳಿಲ್ಲದ ವಲಸಿಗರನ್ನು ಗಡಿಪಾರು ಮಾಡುವುದಾಗಿ ಹಾಕಿರುವ ಬೆದರಿಕೆಯನ್ನು ಟ್ರಂಪ್ ಜಾರಿಗೊಳಿಸಿದರೆ; ಅಮೆರಿಕವನ್ನು ಅಕ್ರಮವಾಗಿ ಪ್ರವೇಶಿಸಿದ್ದಾರೆಂದು ಈಗಾಗಲೇ ಗುರುತಿಸಲಾಗಿರುವ ಸುಮಾರು 20,000 ಭಾರತೀಯರನ್ನು ಭಾರತಕ್ಕೆ ವಾಪಸ್ ಕಳಿಸಲಾಗುವುದೆಂದು ನಾವು ನಿರೀಕ್ಷಿಸಬೇಕಾಗುತ್ತದೆ.

ಇನ್ನೂ ಮಹತ್ವದ್ದೆಂದರೆ, ತಾನು ಒಂದು ಉತ್ತಮ ಹಾಗೂ ನಂಬಿಕಸ್ಥ ಮಿತ್ರ ಎನ್ನುವುದನ್ನು ಟ್ರಂಪ್‌ಗೆ ಸಾಬೀತು ಪಡಿಸಲು ಮೋದಿ ಸರ್ಕಾರ ಇನ್ನಿಲ್ಲದ ಪ್ರಯತ್ನಗಳನ್ನು ನಡೆಸುತ್ತಿದೆ. ಕಳೆದ ಕೆಲವು ವಾರಗಳಲ್ಲಿ ವಿದೇಶಾಂಗ ಸಚಿವ ಎಸ್. ಜೈಶಂಕರ್ ಎರಡು ಸಲ ವಾಷಿಂಗ್ಟನ್‌ಗೆ ಭೇಟಿ ನೀಡಿದ್ದಾರೆ. ಟ್ರಂಪ್ ಪ್ರಮಾಣ ವಚನ ಸ್ವೀಕಾರಕ್ಕಾಗಿ ಎರಡನೇ ಬಾರಿಯ ಪ್ರವಾಸಕ್ಕೆ ಹೋಗಿದ್ದಾಗ ಅಮೆರಿಕದ ಹೊಸ ವಿದೇಶಾಂಗ ಕಾರ್ಯದರ್ಶಿ ಸಹಿತ ಕ್ವಾಡ್ ದೇಶಗಳ ಇತರ ಮೂವರು ವಿದೇಶಾಂಗ ಮಂತ್ರಿಗಳೊಂದಿಗೆ ಸಭೆ ನಡೆಸಿದರು. ಆದರೆ, ಪ್ರಮಾಣ ವಚನ ಪೂರ್ವ ಔತಣಕೂಟದಲ್ಲಿ ಭಾಗವಹಿಸಿದ್ದ ಮುಕೇಶ್ ಮತ್ತು ನೀತಾ ಅಂಬಾನಿ ಜತೆಯಾಗಿ ಟ್ರಂಪ್‌ರೊಂದಿಗೆ ತೆಗೆಸಿಕೊಂಡ ಫೋಟೋವೇ ಹೆಚ್ಚು ಪ್ರಚಾರ ಪಡೆಯಿತು. ವಾಷಿಂಗ್ಟನ್‌ನಲ್ಲಿ ಈಗ ಸಚಿವರಿಗಿಂತ ಧನಿಕರ ಪ್ರಭುತ್ವಕ್ಕೇ ಹೆಚ್ಚಿನ ಆದ್ಯತೆ ಸಿಗುತ್ತಿದೆ.

ಟ್ರಂಪ್‌ರ ಒಲವುಗಳನ್ನು ಅವಲಂಬಿಸಿ ತಪ್ಪು ಮಾಡುವುದಕ್ಕಿಂತ ಮೋದಿ ಸರಕಾರ ವ್ಯೂಹಾತ್ಮಕ ಸ್ವಾಯತ್ತೆಯನ್ನು ಮರಳಿಸಲು ಹಾಗೂ ಗಂಭೀರ ನಿಧಾನಗತಿಯನ್ನು ಎದುರಿಸುತ್ತಿರುವ ಭಾರತೀಯ ಆರ್ಥಿಕತೆಯನ್ನು ಬಲಪಡಿಸಲು ತನ್ನ ಕಾರ್ಯತಂತ್ರವನ್ನು ಮರುರೂಪಿಸುವುದು ಒಳ್ಳೆಯದು.

ಅನು: ವಿಶ್ವ

ಮಹಿಳೆಯರ ಬದುಕಿಗೆ ಕೊಳ್ಳಿ ಇಡುತ್ತಿರುವ ಮೈಕ್ರೋ ಫೈನಾನ್ಸ್...... ಪುಟ 5 ರಿಂದ

ಪೇಯಿಂಟಿಂಗ್‌ನಿಂದ ಶೃಂಗಾರ ಮಾಡುವುದು, ಕೋಳಿ, ಕುರಿ, ಮೇಕೆ, ಮೊಲ ಹಾಗೂ ಹಸು ಸಾಕಾಣಿಕೆ ಮಾಡುವುದು. ಔಷಧಿ ಸಸ್ಯಗಳ ನರ್ಸರಿ ನಿರ್ವಹಣೆ, ಟೈಲರಿಂಗ್ ಕಸೂತಿ ಹಾಕುವುದು, ಬಟ್ಟೆ ಮಾರಾಟ ಮಾಡುವುದು, ಪ್ಯಾಷನ್ ಡಿಸೈನಿಂಗ್ ಮಾಡುವುದು, ದಾಲ್ ಮೇಕಿಂಗ್, ಹಪ್ಪಳ, ಉಪ್ಪಿನ ಕಾಯಿ, ಸಂಡಿಗೆ, ಬೇಕರಿ ತಿಂಡಿ ತಿನಿಸುಗಳು, ಅಗರಬತ್ತಿ ತಯಾರಿಕೆ, ಹೀಗೆ ಹತ್ತು ಹಲವು ರೀತಿಯ ಉತ್ಪಾದನೆಯಲ್ಲಿ ತೊಡಗಿಸಿಕೊಂಡಿರುವ ಸ್ವಸಹಾಯ ಗುಂಪಿನ ಮಹಿಳೆಯರು ಸ್ವಂತ ಉದ್ದಿಮೆ ಮೂಲಕ ಸ್ವಾವಲಂಬಿಗಳಾಗುತ್ತಿದ್ದಾರೆ. ಅವುಗಳಿಗೆ ಉತ್ತೇಜನಕಾರಿಯಾಗಿ ಬ್ಯಾಂಕುಗಳ ಸಾಲ ಲಭ್ಯವಾಗಬೇಕು ಹಾಗೂ ಸರ್ಕಾರದಿಂದ ಸಹಾಯಧನ ಹಾಗೂ ಗುಂಪುಗಳು ಉತ್ಪಾದಿಸಿದ ವಸ್ತುಗಳಿಗೆ ಮಾರುಕಟ್ಟೆ ವ್ಯವಸ್ಥೆ ಮಾಡಲು ಸರ್ಕಾರ ಮತ್ತು ಇಲಾಖೆಗಳು ಮುಂದಾಗಬೇಕು.

ಉಳಿತಾಯ ಮಾಡುವಲ್ಲಿ ಹಾಗೂ ಸಾಲ ಪಡೆಯುವಲ್ಲಿ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳು ಈ ದೇಶದ ಆರ್ಥಿಕತೆಯ ಭಾಗವಾಗಿದೆ. ಆನೆ ಹೊಟ್ಟೆಗೆ ಅರು ಕಾಸಿನ ಮಜ್ಜಿಗೆಯೆಂಬಂತೆ ತನ್ನ ಬೆವರು ಸುರಿಸಿ ಗಳಿಸಿದ ಶ್ರಮದ ಹಣವನ್ನೇ ತಮ್ಮ ಆಂತರಿಕ ಸಾಲದ ರೂಪದಲ್ಲಿ ಪಡೆಯುತ್ತಿದ್ದಾರೆಯೇ ವಿನಃ ಬ್ಯಾಂಕ್‌ಗಳಿಂದ ಸಿಗಬೇಕಾದ ಪ್ರೋತ್ಸಾಹ, ಸಹಕಾರ ಅಥವಾ ಆದ್ಯತೆ ಮೇಲಿನ ಸಾಲವಾಗಲಿ ಅಲ್ಲ. ಹಾಗೂ ಬ್ಯಾಂಕುಗಳಿರಬೇಕಾದ ಸಾಮಾಜಿಕ ಬದ್ಧತೆಯ ಬದಲಿಗೆ ಸೇವೆಯ ಹೆಸರಿನಲ್ಲಿ ಹೆಣ್ಣು ಮಕ್ಕಳ ಹಣ ದೋಚುವ ದುಬಾರಿ ಬಡ್ಡಿ ಸಾಲ ವಸೂಲಿಮಾಡುವ ಮೂಲಕ, ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳ ಹಣ ದುರ್ಬಳಕೆ ಮಾಡುವ ಭ್ರಷ್ಟ ಎನ್.ಜಿ.ಓಗಳ ಶಿಫಾರಸ್ಸಿಗೆ ಹೆಚ್ಚು ಮಣೆ ಹಾಕುತ್ತಿದೆ. ಹಾಗೂ ಕೇಂದ್ರ ಸಂಘ ಮತ್ತು ಧರ್ಮಸ್ಥಳ ಸಂಘದ ದುಬಾರಿ ಬಡ್ಡಿ ಸಾಲಕ್ಕೆ ಸಿಲುಕಿ ನಲುಗುವಂತಾಗಿದೆ.

ನಿಯಂತ್ರಣಕ್ಕೆ ಸರ್ಕಾರ ಮುಂದಾಗಬೇಕು

ದೇಶದ ಔಪಚಾರಿಕ ಬ್ಯಾಂಕಿಂಗ್ ಸಂಸ್ಥೆಗಳ ಮೂಲಕ ಬಡವರಿಗೆ ಸುಲಭ ಸಾಲ ಸೌಲಭ್ಯಗಳನ್ನು ಒದಗಿಸಬೇಕು. ಕೇಂದ್ರ ಸರ್ಕಾರ ತಕ್ಷಣವೆ ಕಿರು ಹಣಕಾಸು ಸಂಸ್ಥೆಗಳು ನೀಡುವ ಸಾಲದ ಮೇಲಿನ ಬಡ್ಡಿ ದರವನ್ನು ಮಿತಿಗೊಳಪಡಿಸಲು ಹಾಗೂ ಎಸ್‌ಹೆಚ್‌ಜಿ ಗಳನ್ನು ರಚಿಸುವ, ಹಣ ಸಂಗ್ರಹಿಸುವ, ಸಾಲ ನೀಡುವ ಎಲ್ಲಾ ಮೈಕ್ರೊ ಫೈನಾನ್ಸ್ ಸಂಸ್ಥೆಗಳು ಮತ್ತು ಸರ್ಕಾರೇತರ ಸಂಸ್ಥೆಗಳ ಚಟುವಟಿಕೆಗಳನ್ನು ಉಸ್ತುವಾರಿ ಮಾಡಲು, ಅವುಗಳನ್ನು ನಿಯಂತ್ರಿಸಲು ಅನುಕೂಲವಾಗುವಂತೆ ಸರ್ಕಾರ ಮತ್ತು ಆರ್‌ಬಿಐ ಕಾನೂನು ಅಂಗೀಕರಿಸಬೇಕು. ದಬ್ಬಾಳಿಕೆ, ದೌರ್ಜನ್ಯದಂತಹ ಅನಾಗರೀಕ ಕ್ರಮಗಳನ್ನು ಮಾಡುವ ಮೈಕ್ರೊ ಫೈನಾನ್ಸ್‌ಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಬೇಕು. ನೇರ ಬ್ಯಾಂಕಿಂಗ್ ವಹಿವಾಟು ಮೂಲಕ ಎಲ್ಲಾ ಗ್ರಾಮೀಣ ಮತ್ತು ನಗರ ಮಹಿಳೆಯರು ಮತ್ತು ಅವರ ಸ್ವಸಹಾಯ ಗುಂಪುಗಳಿಗೆ ಸುಲಭ, ಸರಳ ಸಾಲ ಸೌಲಭ್ಯ ವಿಸ್ತರಣೆ ಆಗಬೇಕು. ಸ್ವಸಹಾಯ ಗುಂಪುಗಳು ಮತ್ತು ಕಿರು ಸಾಲ ವ್ಯವಸ್ಥೆ ನೋಡಿಕೊಳ್ಳಲು ಕೇಂದ್ರ ಮತ್ತು ರಾಜ್ಯದಲ್ಲಿ ಪ್ರತ್ಯೇಕ ಸಚಿವಾಲಯ ಆಗಬೇಕು.

ಮಹಿಳೆಯರನ್ನು ಮತ ಬ್ಯಾಂಕುಗಳಾಗಿ ಬಳಸಿಕೊಳ್ಳುತ್ತಿವೆ

ತಮ್ಮ ನಿಜ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಸಲುವಾಗಿ ಭ್ರಷ್ಟ ರಾಜಕೀಯ ಪಕ್ಷಗಳು ಚುನಾವಣೆ ಸಂದರ್ಭ ಸ್ತ್ರೀಶಕ್ತಿ ಸ್ವಸಹಾಯ ಗುಂಪಿನ ಮಹಿಳೆಯರನ್ನು ಮತ ಬ್ಯಾಂಕುಗಳಾಗಿ ಬಳಸಿಕೊಳ್ಳುತ್ತಿವೆ. ಹಣ, ಸೀರೆ, ಇನ್ನಿತರ ವಸ್ತುಗಳ ಜೊತೆ ಹೊತ್ತಿನ ಕೂಳು ನೀಡಿ ವರ್ಷದ ಕೂಳು ಕದಿಯುವ"ಹುನ್ನಾರ ನಡೆಯುತ್ತಿದೆ. ರಾಜಕೀಯ ಕಾರ್ಯಕ್ರಮಗಳಿಗೆ ಪ್ರೇಕ್ಷಕರಾಗಿ ಬಳಸಿಕೊಂಡು ಬದುಕಿಗೆ ಶಾಶ್ವತ ಭದ್ರತೆ ನೀಡದೆ, ಅವರಿಗಿರುವ ಅಭದ್ರತೆಯನ್ನು, ಅವರ ಮೌಢ್ಯತೆ ಹಾಗೂ ದಡ್ಡತನವನ್ನು ಬಂಡವಾಳ ಮಾಡಿಕೊಳ್ಳಲು ಸದಾ ಹೊಂಚುಹಾಕುವ ಭ್ರಷ್ಟ ರಾಜಕೀಯ ಪಕ್ಷಗಳು ನಡೆಸುವ ಜಾತಿ ಹಾಗೂ ಕೋಮುವಾದಿ ರಾಜಕಾರಣಕ್ಕೆ ಬಲಿಯಾಗುವುದನ್ನು ತಡೆಯುವ ಜವಾಬ್ದಾರಿ ಪ್ರಜ್ಞಾವಂತರ ಮೇಲಿದೆ. ಅಲ್ಲಷ್ಟು, ಇಲ್ಲಷ್ಟು ಕೊಟ್ಟಂತೆ ಮಾಡಿ, ಕೇವಲ ಸವಲತ್ತಿಗಾಗಿ ಅಂಗಲಾಚುವಂತೆ ಮಾಡುತ್ತಿರುವ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯರಲ್ಲಿರುವ ಯಾಚಕ ಪ್ರಜ್ಞೆ ಮೊದಲು ತೊಲಗಬೇಕು. ಪುರುಷರ ಕರುಣೆ ಔದಾರ್ಯಗಳಿಂದಾಗಿ ಸ್ಥಾನಗಿಟ್ಟಿಸುವ ಬದಲು, ಮಹಿಳೆಯರ ನ್ಯಾಯಯುತ ಹೋರಾಟಕ್ಕೆ ಸಲ್ಲಬೇಕಾದ ಸಂವಿಧಾನದತ್ತ ಹಕ್ಕುಗಳಿಗಾಗಿ ಪ್ರಜಾಸತ್ತಾತ್ಮಕ ವಿಧಾನದಲ್ಲಿ ಮಹಿಳೆಯರ ಚಿಂತನೆ ಚಳುವಳಿ ನಡೆಸುತ್ತಿರುವ, ಆ ಮೂಲಕ ರಾಜಕೀಯ ಸಮಾನತೆ ಸಾಧಿಸುವ ನಿಟ್ಟಿನಲ್ಲಿ ಸ್ವಸಹಾಯ ಗುಂಪುಗಳನ್ನು ಸಂಘಟಿಸಲು ಹಲವು ಸಂಘಟನೆಗಳು ಹೆಜ್ಜೆ ಇಟ್ಟಿವೆ.

ಸ್ಥಳೀಯ ಚುನಾವಣೆಗಳಲ್ಲಿ ನಿರ್ಣಾಯಕ ಪಾತ್ರವನ್ನು ಎಸ್‌ಎಚ್‌ಜಿಗಳು ನಿರ್ವಹಿಸುತ್ತಿವೆ ಹಾಗೂ ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಮಹಿಳಾ ಮೀಸಲು ಸ್ಥಾನಗಳಲ್ಲಿ ಅನೇಕ ಸ್ವಸಹಾಯ ಗುಂಪುಗಳ ಮಹಿಳೆಯರು ರಾಜಕೀಯ ಅಧಿಕಾರ ಗಳಿಸಲು ಸಾಧ್ಯವಾಗಿದೆ. ಹಲವೆಡೆ ಪರಿಣಾಮಕಾರಿಯಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಇನ್ನಷ್ಟು ಸಮರ್ಥವಾಗಿ ನಿಭಾಯಿಸಲು ಹಾಗೂ ಶಾಸನಸಭೆಗಳಲ್ಲಿ, ಸಂಸತ್ತುಗಳಲ್ಲಿ ಸ್ಥಾನ ಲಭಿಸುವಂತೆ ಮಹಿಳಾ ಮೀಸಲಾತಿ ಮಸೂದೆ ತಕ್ಷಣ ಜಾರಿಗೆ ತರುವಲ್ಲಿ ರಾಜಕೀಯ ಪಕ್ಷಗಳು ಇಚ್ಛಾಸಕ್ತಿಯನ್ನು ತೋರಬೇಕಿದೆ. ಮೈಕ್ರೊ ಫೈನಾನ್ಸ್ ನಂತಹ ಸುಲಿಗೆಕೋರ ಸಂಸ್ಥೆಗಳಿಗೆ ತಿಲಾಂಜಲಿ ಹೇಳಿ ಜನ ವಿರೋಧಿ ಮತ್ತು ದುಬಾರಿ ಬಡ್ಡಿ ನೀತಿಯ ವಿರುದ್ಧ ಹೋರಾಟ ಸಂಘಟಿಸಿ ಇಂತಹ ಜನ ವಿರೋಧಿ ನೀತಿಯನ್ನು ಹಿಮ್ಮೆಟ್ಟಿಸಬೇಕಿದೆ.





ಬಹುತ್ವ ಸಂಸ್ಕೃತಿಯ ಪ್ರಬಲ ಪ್ರತಿಪಾದನೆ

ವಚನ ಚಳುವಳಿಯನ್ನು ನುಂಗಿ ನೊಣೆಯುವ ಕೋಮುವಾದಿ ಕುತಂತ್ರದ ವಿರುದ್ಧ ಪ್ರತಿರೋಧ ಜನವರಿ 17–19, 2025 ಕಲ್ಬುರ್ಗಿಯಲ್ಲಿ ಯಶಸ್ವಿ–'ಬಹುತ್ವ ಸಂಸ್ಕೃತಿ ಭಾರತೋತ್ಸವ'

ಕಲ್ಯಾಣ ಕರ್ನಾಟಕದಲ್ಲಿ ಕೋಮುವಾದಿಗಳ ಅಟ್ಟಹಾಸವು ಹೆಚ್ಚುತ್ತಿದೆ. ಇಲ್ಲಿನ ಸೌಹಾರ್ದ ಸಂಸ್ಕೃತಿ, ಬಹುತ್ವದ ಉಜ್ವಲ ಪರಂಪರೆಯನ್ನು ಬುಡಮೇಲು ಮಾಡಿ ಮತಿಯ ದ್ವೇಷದ ಹಿಂದುತ್ವವನ್ನೇ ಭಾರತೀಯ ಸಂಸ್ಕೃತಿ ಎಂದು ಬಿಂಬಿಸಲು, ವೈಧಿಕತೆಯ ಏಕಸ್ವಾಮ್ಯತ್ವ ಸ್ಥಾಪಿಸಲು ಸಂಘ ಪರಿವಾರವು ಎಲ್ಲ ಮಗ್ಗಲುಗಳಿಂದ ಪ್ರಯತ್ನಿಸುತ್ತಿದೆ. ಇದನ್ನು ಎದುರಿಸಿ ಭಾರತದ ಬಹುತ್ವ ಸಂಸ್ಕೃತಿಯನ್ನು ಪ್ರತಿಪಾದಿಸಿದ ಮಹತ್ವದ ಮುತುವರ್ಜಿ ನಡೆದ ಕಾರ್ಯಕ್ರಮ ದ ವರದಿ ಇಲ್ಲಿ.



ವರದಿ: ಆರ್. ರಾಮಕೃಷ್ಣ

ಬಹುಸಂಸ್ಕೃತಿಯು ಭಾರತದ ಹೆಗ್ಗುರುತು. ವೈವಿಧ್ಯತೆಯಲ್ಲಿ ಏಕತೆ ಭಾರತದ ವಿಶಿಷ್ಟತೆ. ಸೌಹಾರ್ದ ಜನಸಂಸ್ಕೃತಿಯು ಭಾರತ ಹಾಗೂ ಕರ್ನಾಟಕದ ಜನ ಬದುಕಿನ ವಿಶಿಷ್ಟ ಚಹರೆ. ಇಂತಹ ಬಹುತ್ವ ಹಾಗೂ ಸೌಹಾರ್ದ ಭಾರತದ ಮೇಲೆ ಜೀವ ವಿರೋಧಿ ವೈದಿಕ ಧರ್ಮದ ಯಜಮಾನಿಕೆಯ ಏಕ ಸಂಸ್ಕೃತಿಯನ್ನು ಹೇರುವ ಪ್ರಯತ್ನಗಳು ನಡೆಯುತ್ತಿರುವುದು ಇದೀಗ ಎದ್ದು ಕಾಣುತ್ತಿದೆ. ಅದರಲ್ಲೂ ಕಲ್ಯಾಣ ಕರ್ನಾಟಕದಲ್ಲಿ 'ವಚನಗಳ ಸಾರವು ವೇದ ವಿಚಾರಗಳ ಮುಂದುವರಿಕೆಯಷ್ಟೆ. ವಚನ ಚಳುವಳಿಯು ಜಾತಿ ಅಸಮಾನತೆ, ಲಿಂಗ ಅಸಮಾನತೆಯ ವಿರುದ್ಧದ ಚಳುವಳಿಯಲ್ಲ, ಅದು ಪ್ರಧಾನವಾಗಿ ಒಂದು ಅಧ್ಯಾತ್ಮಿಕ ಚಳುವಳಿ, ವೇದ ಉಪನಿಷತ್ತುಗಳಲ್ಲಿ ಸಂಸ್ಕೃತದಲ್ಲಿ ಹೇಳಿರುವುದನ್ನೇ ವಚನಕಾರರು ಕನ್ನಡದಲ್ಲಿ ವಿವರಿಸಿದ್ದಾರೆ.." ಎಂಬಂತಹ ವಿಕೃತ ವಾದಗಳೊಂದಿಗೆ 'ವಚನ ದರ್ಶನ' ಎಂಬ ಪುಸ್ತಕ ರಚಿಸಿ, ಜಾತಿವಾದಿ ಕೋಮುವಾದಿ ಶಕ್ತಿಗಳು ರಾಜ್ಯದಾದ್ಯಂತ ಜನರನ್ನು, ವಿಶೇಷವಾಗಿ ಕಲ್ಯಾಣ ಕರ್ನಾಟಕ ಭಾಗದ ಲಿಂಗಾಯತ ಸಮುದಾಯದ ಜನರು ಮತ್ತು ವಿದ್ಯಾರ್ಥಿ–ಶಿಕ್ಷಕರು, ರಾಜಕಾರಣಿಗಳು–ವ್ಯಾಪಾರಿಗಳು ಉದ್ದಿಮೆದಾರರನ್ನು ಸೆಳೆದು ನಾನಾ ಹುನ್ನಾರಗಳನ್ನು ನಡೆಸುತ್ತಿದ್ದಾರೆ. ಜನರನ್ನು ವಂಚಿಸುವ ಕಾರ್ಯಕ್ರಮಗಳನ್ನು ಸಂಘಟಿಸುತ್ತಿದ್ದಾರೆ.


ಈ ನಿಟ್ಟಿನಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ 100ನೇ ವರ್ಷಾಚರಣೆ ಅಂಗವಾಗಿ, ಸೇಡಂನ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿಯ ಸುವರ್ಣ ಮಹೋತ್ಸವದ ಹೆಸರಿನಲ್ಲಿ, ವಿಕಾಸ ಅಕಾಡೆಮಿ ಮತ್ತು ಭಾರತ ವಿಕಾಸ ಸಂಗಮಗಳ ಸಹಯೋಗದಲ್ಲಿ, ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ಸುಮಾರು 240 ಎಕರೆಯಷ್ಟು ಬೃಹತ್ ಜಾಗದಲ್ಲಿ ಜನವರಿ 29ರಿಂದ ಫೆಬ್ರವರಿ 6, 2025ರವರೆಗೆ 9 ದಿನಗಳ ಕಾಲ 'ಭಾರತೀಯ ಸಂಸ್ಕೃತಿ ಉತ್ಸವ' ಎಂಬ ಹೆಸರಿನ ಬೃಹತ್ ಕಾರ್ಯಕ್ರಮವನ್ನು ಸಂಘಟಿಸಲಾಗುತ್ತಿದೆ. ರಾಷ್ಟ್ರಿಯ ಸ್ವಯಂ ಸೇವಕ ಸಮಿತಿಯ ಸಿದ್ಧಾಂತಿ, ಬಿಜೆಪಿ ಮುಖಂಡ ಗೋವಿಂದಾಚಾರ್ಯ ಅವರ ಮಾರ್ಗದರ್ಶನದಲ್ಲಿ, ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಾದ ಬಸವರಾಜ ಪಾಟೀಲ ಸೇಡಂ ಅವರ ಸಹಯೋಗದೊಂದಿಗೆ ಈ ಬೃಹತ್ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ.

ಈ ಹಿನ್ನೆಲೆಯಲ್ಲಿ ನೆಲಮೂಲ ಸಂಸ್ಕೃತಿಗಳನ್ನು ತುಳಿದಿಕ್ಕಿ, ವೈದಿಕ ಧಾರ್ಮಿಕತೆಯನ್ನೇ ಭಾರತೀಯ ಸಂಸ್ಕೃತಿ ಎಂದು ಬಿಂಬಿಸುವ ಹುನ್ನಾರಗಳನ್ನು ವಿರೋಧಿಸಿ 'ಬಹುತ್ವ ಭಾರತ, ಸಶಕ್ತ ಭಾರತ' ಎನ್ನುವ ಪ್ರತಿಪಾದನೆಯಲ್ಲಿ 'ಬಹುತ್ವ ಸಂಸ್ಕೃತಿ ಭಾರತೋತ್ಸವ'ವನ್ನು ಇದೇ 2025 ಜನವರಿ 17ರಿಂದ 19ರವರೆಗೆ ಕಲ್ಬುರ್ಗಿ ಮಹಾನಗರದಲ್ಲಿ ಆಯೋಜಿಸಲಾಗಿತ್ತು. ಸುಮಾರು ಐವತ್ತಕ್ಕೂ ಅಧಿಕ ವಿವಿಧ ಜನ ಸಂಘಟನೆಗಳು ಒಡಗೂಡಿದ 'ಸೌಹಾರ್ದ ಕರ್ನಾಟಕ'ವು ಈ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸಿತ್ತು.

ಅನ್ಯಾಯ, ಅಸಮಾನತೆಗಳೇ ಅಡಿಪಾಯವಾಗಿರುವ ವೈದಿಕ ತತ್ವಗಳೊಂದಿಗೆ ವಚನ ಚಳುವಳಿಯನ್ನು ಸಮೀಕರಿಸುವ ಧೋರಣೆಯನ್ನು ಧಿಕ್ಕರಿಸಿ ನಡೆದ ಈ ಕಾರ್ಯಕ್ರಮಗಳಿಗೆ ರಾಜ್ಯದ ಹಲವು ಜಿಲ್ಲೆಗಳಿಂದಲೂ ಜನರು ಪಾಲ್ಗೊಂಡು ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿದರು

ಸೌಹಾರ್ದ ಸಂಸ್ಕೃತಿ ವಾಹನ ಜಾಥಾ

ಜನವರಿ 17, 2025ರಂದು ಸೌಹಾರ್ದ ಸಾಂಸ್ಕೃತಿಕ ವಾಹನ ಜಾಥಾ ನಡೆಯಿತು. ಈ ಜಾಥಾವನ್ನು ಮಾತೋಶ್ರೀ ದ್ರಾಕ್ಷಾಯಿಣಿ ಶರಣಬಸಪ್ಪ ಅಪ್ಪ, ಶ್ರೀಶರಣ ಬಸವೇಶ್ವರ ಮಹಾಸಂಸ್ಥಾನ, ಕಲಬುರಗಿ ಇವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿಗಳಾದ ಪ್ರೊ. ಸಬಿಹಾ ಭೂಮಿಗೌಡ ಪಾಲ್ಗೊಂಡಿದ್ದರು. ಜನರು ವಾಹನಗಳಲ್ಲಿ, ಮುಖ್ಯವಾಗಿ ದ್ವಿಚಕ್ರ ವಾಹನಗಳಲ್ಲಿ ಶ್ರೀಶರಣ ಬಸವೇಶ್ವರ ದೇವಸ್ಥಾನದಿಂದ ಹೊರಟು ಸೇಂಟ್ ಮೇರಿ ಚರ್ಚ್ ಮಾರ್ಗವಾಗಿ ಬಾಬಾ ↗



ನಾಡಿನ ಅಧಿಕಾರದ ಚುಕ್ಕಾಣಿ ಹಿಡಿದವನು ಪರಮ ನೀಚನಾದರೆ ಸಮಾಜದ ಗತಿಯೇನು?–ಸಾಣೆಹಳ್ಳಿ ಶ್ರೀ

ಸಾಣೇಹಳ್ಳಿ ಸ್ವಾಮಿಗಳು ಮಾತನಾಡಿ ಇದೊಂದು ವಿಶೇಷ ಚಳುವಳಿ ಎಂದರು. 1947 ಆಗಸ್ಟ್ 15ರಂದು ಭಾರತಕ್ಕೆ ಸ್ವಾತಂತ್ರ್ಯ ಬಂತು. ಮತ್ತೆ ಈಗ ಸ್ವಾತಂತ್ರ್ಯ ಹೋಯ್ತು ಎಂದು ವಿಷಾದ ಪಡುತ್ತ ಸ್ವಾಮಿಗಳು, ಇಂದು ಹೆಂಡ, ಆಮಿಷ, ಯಾವುದೋ ರಾಜಕೀಯ ಪಕ್ಷಕ್ಕೆ ಕಟ್ಟುಬಿದ್ದು ಮಾನವೀಯತೆಯನ್ನು ಕಳೆದುಕೊಂಡಿದ್ದೇವೆ. ನಾವು ಗಾಂಧಿ, ಬುದ್ಧ, ಬಸವ ಮುಂತಾದವರ ತತ್ವಗಳನ್ನು ಆಚರಣೆಗೆ ತರುವ ಪ್ರಯತ್ನ ಮಾಡಬೇಕಿದೆ. ಮಾನವರಾಗಬೇಕಿದೆ. ಸಂವಿಧಾನವನ್ನು ಬದಲಾಯಿಸುತ್ತೇವೆ ಎನ್ನುವವರು ಅಧಿಕಾರಕ್ಕೆ ಬಂದಿದ್ದಾರೆ. ಸರ್ವ ಜನಾಂಗದ ಶಾಂತಿಯ ತೋಟಕ್ಕೆ ಮಂಗಗಳ ಹಿಂಡು ಹಾವಳಿ ಇಟ್ಟಿವೆ. ತೋಟ ಹಾಳಾಗುತ್ತಿದೆ. ಶಿಕ್ಷಣ–ಆರೋಗ್ಯ ಎಲ್ಲವೂ ಹಾಳಾಗಿದೆ. ಎಲ್ಲರೂ ಕೆಲಸ ಮಾಡಿ, ಈ ಪರಿಸ್ಥಿತಿ ಸರಿಯಾಗಬೇಕಾಗಿದೆ ಎಂದರು. ಇದೇ ಸಂದರ್ಭದಲ್ಲಿ ನಾಡಿನ ಅಧಿಕಾರದ ಚುಕ್ಕಾಣಿ ಹಿಡಿದವನು ಪರಮ ನೀಚನಾದರೆ ಸಮಾಜದ ಗತಿಯೇನು ಎಂದು ಸಾಣೆಹಳ್ಳಿ ಶ್ರೀಗಳು ಆತಂಕ ವ್ಯಕ್ತಪಡಿಸಿದರು.

***

ನಮ್ಮದು ಬಹುತ್ವ ಭಾರತ–ಜೆ.ಬಿ.ಪಾಟೀಲರು

ಲಿಂಗಾಯತ ಚಳುವಳಿಯ ಜೆ.ಬಿ.ಪಾಟೀಲರು ಮಾತನಾಡಿ, ದೇಶದಲ್ಲಿ ಅಲ್ಪಸಂಖ್ಯಾತರ ಮೇಲೆ ದಾಳಿ ನಡೆಯುತ್ತಿದೆ. ನಮ್ಮ ಸಂಸ್ಕೃತಿಯ ಮೇಲೆ, ಟಿಪ್ಪು–ಬಸವಣ್ಣ ಎಲ್ಲರ ಮೇಲೆ ದಾಳಿ ನಡೆಯುತ್ತಿದೆ. ಕುಂಭಮೇಳದ ಹೆಸರಿನಲ್ಲಿ ಮೌಢ್ಯವನ್ನು ಬಿತ್ತಲಾಗುತ್ತಿದೆ. 'ಏಕ ಭಾರತ, ಬಲಿಷ್ಟ ಭಾರತ' ಎಂಬ ಘೋಷಣೆ ತಪ್ಪು, ನಮ್ಮದು 'ಬಹುತ್ವ ಭಾರತ' ಎಂದರು.

***

ಸಂಸ್ಕೃತಿ ಹೆಸರಿನಲ್ಲಿ ಹಚ್ಚುವ ಬೆಂಕಿ ಆರಿಸುವುದು ಕಷ್ಟ–ಪ್ರೊ.ರಹಮತ್ ತರಿಕೆರೆ

ಹಿರಿಯ ಸಾಹಿತಿ ರಹಮತ್ ತರಿಕೆರೆಯವರು ಮಾತನಾಡಿ ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು ಎಂಬಂತೆ ಎಲ್ಲ ನದಿಗಳು ಇಲ್ಲಿ ಒಟ್ಟಿಗೆ ಸೇರಿವೆ. ಅಮೆರಿಕದ ಕ್ಯಾಲಿಫೋರ್ನಿಯಾ ಕಾಡ್ಗಿಚ್ಚಿನಲ್ಲಿ ಉರಿಯುತ್ತಿದೆ. ಅದನ್ನು ಆರಿಸುವ ಪ್ರಯತ್ನ ನಡೆದಿದೆ. ಆದರೆ ಸಂಸ್ಕೃತಿ, ದೇಶಭಕ್ತಿಯ ಹೆಸರಿನಲ್ಲಿ ಹಚ್ಚುವ ಬೆಂಕಿಯನ್ನು ಆರಿಸುವುದು ಕಷ್ಟ. ಬಹುತ್ವ ಎಂದರೆ ಹಲವು ಧರ್ಮ, ಬಹುಸಂಸ್ಕೃತಿಗಳು ಕೂಡಿ ಬಾಳಬೇಕು ಎಂದಷ್ಟೆ ಅರ್ಥ. ಈಗ ನಾವು ಶಿವಾಜಿ, ಭಗತ್‌ಸಿಂಗ್, ಹಾಗೂ ಸಂವಿಧಾನವನ್ನು ಉಳಿಸಿಕೊಳ್ಳಬೇಕಿದೆ. ಅಂಬೇಡ್ಕರ್ ಅವರನ್ನು ವಶಪಡಿಸಿಕೊಳ್ಳಲು ಬಿಡಬಾರದು ಎಂದರು. ರಾಷ್ಟ್ರಧ್ವಜ, ರಾಷ್ಟ್ರಪಿತ, ಸಂವಿಧಾನಗಳ ಬಗೆಗೆ ಗೌರವವಿಲ್ಲದವರು ಬಹುತ್ವ ಹಾಗೂ ಲಿಂಗ ಸಮಾನತೆಯನ್ನೂ ಒಪ್ಪುವುದಿಲ್ಲ. ದೇಶದಲ್ಲಿ ಕೆಲವೇ ಜನ ಕೋಟ್ಯಾಧಿಪತಿಗಳಾಗಿದ್ದಾರೆ. ನೆಮ್ಮದಿಯ ಘನತೆಯ ಜೀವನಕ್ಕೆ ಅಗತ್ಯವಾದ ಎಲ್ಲ ಬಗೆಯ ಸಮಾನತೆ, ಬುದ್ಧನ ಕರುಣೆ ಇಂದಿನ ಅಗತ್ಯ ಎಂದರು.



ಸಾಹೇಬ ಅಂಬೇಡ್ಕರ್ ಮತ್ತು ಮಹಾತ್ಮ ಬಸವೇಶ್ವರ ವೃತ್ತದಿಂದ ಹಾಯ್ದು ಕೊನೆಗೆ ಖ್ವಾಜಾ ಬಂದಾ ನವಾಜ್ ದರ್ಗಾ ತಲುಪಿ ಅಲ್ಲಿ ಸಮಾವೇಶಗೊಂಡರು. ದರ್ಗಾದ ಸಜ್ಜಾದೆಯವರ ಶುಭ ಸಂದೇಶದಿಂದ ಜಾಥಾ ಸಂಪನ್ನಗೊಂಡಿತು.

ತತ್ವಪದ ವಚನ ಗಾಯನ, ಖವ್ವಾಲಿ

ಜನವರಿ 18, 2025ರಂದು ಕಲಬುರಗಿ ನಗರದ ಪಂಡಿತ ರಂಗಮಂದಿರದಲ್ಲಿ ಸಂತಕವಿ ಕನಕದಾಸ ಮತ್ತು ತತ್ವಪದ ಅಧ್ಯಯನ ಕೇಂದ್ರದ ಸಹಯೋಗದಲ್ಲಿ ದಿನವಿಡೀ ತತ್ವಪದ, ವಚನ, ಖವ್ವಾಲಿ, ಕ್ರಾಂತಿಗೀತೆಗಳ ಗಾಯನ ಗೋಷ್ಠಿ ನಡೆದವು.

ಬಹುತ್ವ ಸಂಸ್ಕೃತಿ ಭಾರತೋತ್ಸವ–ಬಹಿರಂಗ ಸಭೆ

ಜನವರಿ 19, 2025ರಂದು ಬೆಳಿಗ್ಗೆ ಕನ್ನಡ ಭವನದಲ್ಲಿ ನೆರೆದ ಜನರು ಬೃಹತ್ ಮೆರವಣಿಗೆಯಾಗಿ ಹೊರಗೆ ಹರಿದರು. ಶಾಂತಿ ಸೌಹಾರ್ದತೆಯ ಸಂಕೇತವಾದ ಬಿಳಿ ಧ್ವಜಗಳು ಮೆರವಣಿಗೆಯ ಉದ್ದಕ್ಕೂ ಹಾರಾಡಿದವು. ವಚನ ಚಳುವಳಿಯ ಆಶಯಗಳನ್ನು ಉಳಿಸುತ್ತೇವೆ, ಶರಣರ ಆಶಯಗಳನ್ನು ಉಳಿಸುತ್ತೇವೆ, ಅವಾಜ್ ದೋ ಹಮ್ ಏಕ್ ಹೈ, ದೇಶದ ಐಕ್ಯತೆ–ಸೌಹಾರ್ದತೆ ಚಿರಾಯುವಾಗಲಿ, ಬೋಲೋ ಭಾರತ್ ಜನತಾ ಕೀ ಜೈ ಮುಂತಾದ ಘೋಷಣೆಗಳು ಮೆರವಣಿಗೆಯ ಉದ್ದಕ್ಕೂ ಮೊಳಗಿದವು. ಹೆಚ್ಚಿನ ಸಂಖ್ಯೆಯಲ್ಲಿದ್ದ ಮಹಿಳೆಯರು, ಪುರುಷರು, ಯುವಕ–ಯುವತಿಯರು ಉತ್ಸಾಹದಿಂದ ಹೆಜ್ಜೆ ಹಾಕಿದರು. ಮೆರವಣಿಗೆಯು ಜಗತ್ ವೃತ್ತಕ್ಕೆ ತಲುಪಿದ ನಂತರ ಅದೇ ಜಗತ್ ವೃತ್ತದಲ್ಲಿ ಬಹಿರಂಗ ಸಭೆ ನಡೆಯಿತು.

ಮೇಘಾ ತಡ್ಕಲ್ ಅವರ ವಚನ ಗಾಯನ, ದಲಿತ ಕಲಾ ಬಳಗದ ಕ್ರಾಂತಿ ಗೀತೆಗಳೊಂದಿಗೆ ಬಹಿರಂಗ ಸಭೆಯು ಆರಂಭವಾಯಿತು. 'ಮಾನವರಾಗೋಣ ಬನ್ನಿ, ಮಾನವರಾಗೋಣ' ಮುಂತಾದ ಹಾಡುಗಳನ್ನು ಹಾಡಲಾಯಿತು. ಪ್ರೊ.ಆರ್.ಕೆ.ಹುಡಗಿಯವರು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕಳೆದ ಹತ್ತು ಹನ್ನೆರಡು ವರ್ಷಗಳಿಂದ ದೇಶದಲ್ಲಿ ಭೀಬತ್ಸ ವಾತಾವರಣ ಸೃಷ್ಟಿಯಾಗಿದೆ. ಕೋಮುವಾದಿ ಫ್ಯಾಸಿಸ್ಟರು ತಮ್ಮ ವಿಷದ ಹಲ್ಲುಗಳನ್ನು ತೋರಿಸುತ್ತಿದ್ದಾರೆ. 12ನೇ ಶತಮಾನದಲ್ಲಿ ಶರಣರ ಮಾರಣಹೋಮ ನಡೆಸಿದವರೇ ಮತ್ತೆ ಈಗ ನಮ್ಮ ಮಕ್ಕಳ ಕೈಗೆ ಲಾಠಿ, ತ್ರಿಶೂಲ ಕೊಡುತ್ತಿದ್ದಾರೆ. ಬಸವಮಾರ್ಗದ ಸ್ವಾಮೀಜಿಗಳ ಮೇಲೆ ಅಶ್ಲೀಲ ದಾಳಿ ನಡೆಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ನಾವು ಎಡದ ಹೆಗಲ ಮೇಲೆ ಬುದ್ಧ, ಬಲದ ಹೆಗಲ ಮೇಲೆ ಬಸವ, ಎದೆಯಲ್ಲಿ ಬಾಬಾ ಸಾಹೇಬರು, ಕಣ್ಣಿನಲ್ಲಿ ಮಾರ್ಕ್ಸ್ ವಿಚಾರಧಾರೆ, ತಲೆಯ ಮೇಲೆ ವಚನ ಸಂಹಿತೆಯನ್ನು ಹೊತ್ತುಕೊಂಡು ಮುನ್ನಡೆಯಬೇಕಿದೆ ಎಂದರು. ಶ್ರೀ ಪಂಡಿತಾರಾಧ್ಯ ಸ್ವಾಮೀಜಿಗಳು, ಸಾಣೇಹಳ್ಳಿ ಇವರು ಮತ್ತು ವೇದಿಕೆಯಲ್ಲಿದ್ದ ಎಲ್ಲ ಸ್ವಾಮೀಜಿಗಳು, ಸಾಹಿತಿ ಚಿಂತಕರು, ಹೋರಾಟಗಾರರು ಡೋಲು ಬಾರಿಸುವ ಮೂಲಕ ಬಹಿರಂಗ ಸಭೆಯು ಉದ್ಘಾಟನೆಗೊಂಡಿತು. ಮುಂದೆ ಮಾತನಾಡಿದವರ ಬಹುಮುಖ್ಯ ಮಾತುಗಳು ಹೀಗಿವೆ.

ಬೂದಿಯಿಂದ ಮತ್ತೆ ಮೇಲೇಳಲು 'ಮನುಸ್ಮೃತಿ'ಯ ಪ್ರಯತ್ನ–ದಿನೇಶ್‌ಅಮೀನ್ ಮಟ್ಟು

ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು ಅವರು ಮಾತನಾಡಿ 800 ವರ್ಷಗಳ ಹಿಂದೆ ಯಾರೂ ಮುಟ್ಟಲಾರದವರನ್ನು ಮುಟ್ಟುವ, ಯಾರೂ ಜೊತೆಯಲ್ಲಿ ಕೂರಲಾರದವರ ಜೊತೆ ಕೂರುವ, ಪ್ರೀತಿಸಿದರೂ ಮದುವೆಯಾಗಲಾಗದವರ ಮದುವೆ ಮಾಡುವಂತಹ ವಚನ ಚಳುವಳಿ ನಡೆಯಿತು. ಆದರೆ ಆ ಚಳುವಳಿಯನ್ನು ಕ್ರೂರವಾಗಿ ದಮನ ಮಾಡಲಾಯಿತು. ಈಗ ಕಳೆದ 100 ವರ್ಷಗಳ ಹಿಂದೆ ಮತ್ತೆ ಅದೇ ಶಕ್ತಿ ತಲೆಎತ್ತಿದೆ. 1925ರಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘವು ಸ್ಥಾಪನೆಯಾಯಿತು. ಬಾಬಾ ಸಾಹೇಬರಿಗೆ ಈ ಅಪಾಯದ ಕುರಿತು ದೂರದೃಷ್ಟಿ ಇತ್ತು. ಹೀಗಾಗಿಯೇ 1927ರಲ್ಲಿ ಬಾಬಾ ಸಾಹೇಬರು ಮನುಸ್ಮೃತಿಯನ್ನು ಸುಟ್ಟರು. ಕಲ್ಬುರ್ಗಿಯಲ್ಲಿ ಮತ್ತೆ ಮನುಸ್ಮೃತಿಯನ್ನೇ ಮರುಸ್ಥಾಪನೆ ಮಾಡುವ ಪ್ರಯತ್ನ ನಡೆದಿದೆ. ಮನುಸ್ಮೃತಿಯು ಮತ್ತೆ ಬೂದಿಯಿಂದ ಏಳುವ ಪ್ರಯತ್ನ ಮಾಡುತ್ತಿದೆ. ನಮ್ಮನ್ನು ಗೌರವಿಸುವ ಸಂವಿಧಾನ ಬೇಕು ಎಂದು ಪೇಜಾವರ ಶ್ರೀಗಳು ಹೇಳಿದ್ದಾರೆ. ಅವರನ್ನು ಗೌರವಿಸುವ ಸಂವಿಧಾನ ಎಂದರೆ ಅದು ಮನುಸ್ಮೃತಿ. ಅಂಬೇಡ್ಕರ್ ಅವರನ್ನು ವಿಷದ ಹಾವು ಎಂದು ಹೇಳಿದವರು ಇಂದು ಅವರನ್ನೇ ಆಪೋಷನ ತೆಗೆದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ನಾವು ಮುಖವಾಡಗಳ ಜೊತೆ ಗುದ್ದಾಡುವಂತಾಗಿದೆ. ನಿಜವಾದ ಮುಖಗಳು ನಾಗಪುರದ ನಾಜಿಗಳು. ಇವರ ವಿರುದ್ಧ ನಾವು ಹೋರಾಡಬೇಕಿದೆ. ಜ್ಯೋತಿಬಾಫುಲೆ, ನಾರಾಯಣ ಗುರುಗಳು, ವಿವೇಕಾನಂದ ಮುಂತಾದವರ ನಮ್ಮ ಸೈನ್ಯ ದೊಡ್ಡದಿದೆ. ಹೋರಾಡೋಣ ಎಂದರು.

***

ಅದು ಬ್ರಾಹ್ಮಣ ಸಂಸ್ಕೃತಿ ಉತ್ಸವ–ಜೆ.ಎಸ್. ಪಾಟೀಲ

ಜಾಗತಿಕ ಲಿಂಗಾಯತ ಮಹಾಸಭಾದ ಮುಖಂಡರಾದ ಜೆ.ಎಸ್. ಪಾಟೀಲರು ಮಾತನಾಡಿ ನಮ್ಮ ನಾಡನ್ನು ಕೋಮುವಾದಿಗಳ ನಾಡನ್ನಾಗಿ ಮಾಡುವ ಪ್ರಯತ್ನ ನಡೆದಿದೆ. ಜನವರಿ 29ರಿಂದ ನಡೆಯುತ್ತಿರುವುದು ಬ್ರಾಹ್ಮಣ ಸಂಸ್ಕೃತಿ ಉತ್ಸವ. ಯಾರು ಶರಣರನ್ನು ಎಳೆಹೂಟೆ ಶಿಕ್ಷೆಗೆ ಗುರಿ ಮಾಡಿದರೋ, ಯಾರು ವಚನಗಳ ಕಟ್ಟುಗಳಿಗೆ ಬೆಂಕಿ ಇಟ್ಟರೋ ಅದೇ ಪರಂಪರೆಯವರು 'ವಚನ ದರ್ಶನ' ಪುಸ್ತಕ ಬರೆದು ಅಪವ್ಯಾಖ್ಯಾನ ಮಾಡುತ್ತಿದ್ದಾರೆ. ಭಾರತೀಯ ಸಂಸ್ಕೃತಿ ಉತ್ಸವಕ್ಕೂ ಲಿಂಗಾಯತರಿಗೂ ಸಂಬಂಧವಿಲ್ಲ. ಬಸವನಿಗೂ ಬ್ರಾಹ್ಮಣವಾದಿಗಳಿಗೂ ಯಾವುದೇ ಸಂಬಂಧವಿಲ್ಲ. ಹಾಗೂ ಅಲ್ಲಿಗೆ ಹೋಗಲು ಬಯಸುವವರು ಬಸವಣ್ಣನವರು ಕೊಟ್ಟ ಇಷ್ಟಲಿಂಗವನ್ನು ಬಿಚ್ಚಿಟ್ಟು ಹೋಗಲಿ ಎಂದರು.

ಸಂಘ ಪರಿವಾರದವರು ಬಸವದ್ರೋಹಿಗಳು – ಎಸ್.ಜಿ.ಸಿದ್ಧರಾಮಯ್ಯ

ಸಾಹಿತಿ ಎಸ್.ಜಿ.ಸಿದ್ಧರಾಮಯ್ಯ ಅವರು ಮಾತನಾಡಿ ನಾವು 3,500 ವರ್ಷಗಳಿಂದಲೂ ದಾಸ್ಯವನ್ನು ಅನುಭವಿಸುತ್ತಿದ್ದೇವೆ. ಸಂಘಪರಿವಾರ ದವರು ಬಸವದ್ರೋಹಿಗಳು, ಅಂಬೇಡ್ಕರ್ ದ್ರೋಹಿಗಳು. ಮನುವಾದಿ ಮಲವನ್ನು ತಲೆಯಲ್ಲಿ ತುಂಬಿಕೊಂಡಿರುವವರು. ನಮಗೆ ಅರಿವು ಗುರುವಾಗಲಿ, ನಮ್ಮ ಹೋರಾಟ ಕ್ರಿಯೆಯಾಗಲಿ ಎಂದರು.

***

ಗೋಬೆಲ್ ಸಂತತಿಯವರು ಅಪಾಯಕಾರಿಗಳು – ಎಸ್. ವರಲಕ್ಷ್ಮಿ

ಸಿಐಟಿಯು ರಾಜ್ಯ ಅಧ್ಯಕ್ಷೆ ಎಸ್. ವರಲಕ್ಷ್ಮಿಯವರು ಮಾತನಾಡಿ, ಆರ್.ಎಸ್.ಎಸ್.ನ ನೀತಿ 'ಒಂದೇ ಧರ್ಮ, ಒಂದೇ ಸಂಸ್ಕೃತಿ.' ಎಂಬುದು. ಅವರು ಹಿಂದೂರಾಷ್ಟ್ರ ಎನ್ನುತ್ತಾರೆ. ಇದರಿಂದ ದೇಶದ ಪ್ರಜಾಪ್ರಭುತ್ವಕ್ಕೆ ಹಾಗೂ ಗಣತಂತ್ರಕ್ಕೆ ಅಪಾಯ ಬಂದಿದೆ. ಅವರು ವಿವೇಕಾನಂದರನ್ನು ಚಿನ್ಹೆಯನ್ನಾಗಿ ಬಳಸುತ್ತಿದ್ದಾರೆ. ಅಂಬೇಡ್ಕರರನ್ನು ಬಳಸುತ್ತಿದ್ದಾರೆ. ಅವರು ಸುಳ್ಳು ಹರಡುವ ಗೋಬೆಲ್ಸ್ ಸಂತತಿಯವರು, ಅಪಾಯಕಾರಿಗಳು. ಈ ಬಗೆಗೆ ಎಚ್ಚೆತ್ತುಕೊಂಡು ಹೋರಾಡೋಣ ಎಂದರು.

***

ಅವರು ಬೆಂಕಿ ಹಚ್ಚಿದರೆ ನಾವು ನೀರು ಹಾಕುತ್ತೇವೆ – ಕೆ. ನೀಲಾ

ಕೆ. ನೀಲಾರವರು ಮಾತನಾಡಿ, ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳನಿಕ್ಕುವೆ, ತರ್ಕದ ಬೆನ್ನಬಾರನೆತ್ತುವೆ ಎಂದವರು ಶರಣರು. ರಾಜ್ಯದಲ್ಲಿ ಹಸಿವಿನ ಸಾವುಗಳು, ಬಾಣಂತಿಯರ ಸಾವುಗಳು ಸಂಭವಿಸುತ್ತಿವೆ. ಮಾರುದ್ದದ ಹೊಟ್ಟೆ ಹೊರೆಯಲು ಮಹಿಳೆಯರು ಮೈಮಾರಿಕೊಳ್ಳಬೇಕಾದ ದುರಂತ ಸ್ಥಿತಿ ಇದೆ. ಇವುಗಳ ಬಗೆಗೆ ಏನನ್ನೂ ಮಾಡದ ಮನುವಾದಿಗಳು ಧರ್ಮದ ಹೆಸರಿನಲ್ಲಿ ನಾಡಿಗೆ ಬೆಂಕಿ ಹಚ್ಚುತ್ತಿದ್ದಾರೆ. ಈ ಸೌಹಾರ್ದ ಸಂಸ್ಕೃತಿ ಭಾರತೋತ್ಸವದ ಯಶಸ್ಸಿಗೆ ಸಹಕಾರ ಕೋರಿ ಮುಸ್ಲಿಮರ ಬಳಿ ಹೋದಾಗ ಅವರು ತೋರಿದ ಪ್ರೀತಿ, ಆತ್ಮೀಯತೆ ಮರೆಯಲಾರದ್ದು. ಅವರು ಬೆಂಕಿ ಹಚ್ಚಿದರೆ ನಾವು ನೀರು ಹಾಕುತ್ತೇವೆ. ಅವರು ಕಲ್ಲು ಹೊಡೆದರೆ, ಅದೇ ಕಲ್ಲನ್ನು ಬಳಸಿ ನಾವು ಪ್ರೇಮ ಸೌಧವನ್ನು ಕಟ್ಟುತ್ತೇವೆ ಎಂದರು.

ಹೆಣ್ಣಿಗೆ ಗುರುದೀಕ್ಷೆ ಕೊಟ್ಟ ನಾಡು–ಮಾತೋಶ್ರೀ ದ್ರಾಕ್ಷಾಯಿಣಿ

ಮಾತೋಶ್ರೀ ದ್ರಾಕ್ಷಾಯಿಣಿ ಶರಣಬಸಪ್ಪ ಅಪ್ಪ ಅವರು ಮಾತನಾಡಿ ಬಹುತ್ವದಲ್ಲಿ ಏಕತೆ ನಮ್ಮ ವಿಶೇಷತೆ. ಹೆಣ್ಣು ಮಕ್ಕಳಿಗೆ ಗುರುದೀಕ್ಷೆ ಕೊಟ್ಟ ನಾಡು ಕಲ್ಯಾಣ. ಖ್ವಾಜಾ ಬಂದೇ ನವಾಜ್ ದರ್ಗಾದೊಂದಿಗೆ ಶರಣಬಸಪ್ಪ ಅಪ್ಪ ಸಂಸ್ಥಾನಕ್ಕೆ ವಿಶೇಷ ಬಾಂಧವ್ಯವಿದೆ. ಲಿಂಗಾಯತರಿಗೆ ಜಾತಿ–ಮತ, ಲಿಂಗ, ಪಂಥಗಳ ತಾರತಮ್ಯ ಇಲ್ಲ. ಕಾಯಕ, ದಾಸೋಹಗಳೇ ಮಾನವೀಯತೆಯ ಮುನ್ನುಡಿ. ದಯವೇ ಧರ್ಮದ ಮೂಲವಯ್ಯ ಎಂದ ಬಸವಣ್ಣ, ಅಂಬೇಡ್ಕರ ಮುಂತಾದ ಮಹನೀಯರ ತತ್ವಗಳಡಿ ಒಗ್ಗಟ್ಟಾಗಿ ಬಾಳೋಣ ಎಂದರು.

***

ಪ್ರೀತಿಯಿಂದ ಕಾಣುವುದೇ ಮಾನವೀಯ ಧರ್ಮ–ಖಾದ್ರಿ ಮುಸ್ತಾಫ್

ಖಾದ್ರಿ ಮುಸ್ತಾಫ್, ಮಳಖೇಡ ದರ್ಗಾ ಇವರು ಮಾತನಾಡಿ, ವ್ಯಕ್ತಿ ಯಾವುದೇ ಧರ್ಮದಲ್ಲಿ ಹುಟ್ಟಿರಲಿ ಆ ಧರ್ಮದ ತತ್ವವನ್ನು ಅಳವಡಿಸಿಕೊಂಡು ಮತ್ತೊಂದು ಧರ್ಮದವರನ್ನು ಪ್ರೀತಿಯಿಂದ ಕಾಣುವುದೇ ಮಾನವೀಯ ಧರ್ಮ. ಪಟ್ಟಭದ್ರ ಹಿತಾಸಕ್ತಿಗಳು ಧರ್ಮಗಳ ಹೆಸರಿನಲ್ಲಿ ಒಡಕು ಉಂಟು ಮಾಡಲು ಯುವಕರ ತಲೆ ಕೆಡಿಸುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

***

ಎಲ್ಲ ಸಂಸ್ಕೃತಿಗಳನ್ನು ಗೌರವಿಸೋಣ–ಫಾದರ್ ಲೋಬೋ

ಫಾದರ್ ಲೋಬೋ, ಸೇಂಟ್ ಮೇರಿ ಚರ್ಚ್ ಇವರು ಮಾತನಾಡಿ, ನಾವು ಎಲ್ಲ ಸಂಸ್ಕೃತಿಗಳನ್ನು ಗೌರವಿಸೋಣ, ನಾವೆಲ್ಲರೂ

ಪುಟ 10 ಕ್ಕೆ



ಮೈಕ್ರೋ ಫೈನಾನ್ಸ್ ಕಿರುಕುಳ ತಡೆಗಟ್ಟಲು ಹಾಗೂ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ವ್ಯವಹಾರದ ಮೇಲೆ ನಿಯಂತ್ರಣ ಸಾಧಿಸಲು ಕಾನೂನು ಜಾರಿಗೆ ಆಗ್ರಹ ಸಿಪಿಐ(ಎಂ) ರಾಜ್ಯ ಸಮ್ಮೇಳನದ ಆಗ್ರಹ



ಕರ್ನಾಟಕ ರಾಜ್ಯದಲ್ಲಿ ದೇವರ ಹೆಸರಿನಲ್ಲಿ ಧರ್ಮಸ್ಥಳ ಸಂಘಗಳು ಹಾಗೂ ಮೈಕ್ರೊ ಫೈನಾನ್ಸ್ ಸಂಸ್ಥೆಗಳು ನಾಯಿಕೊಡೆಗಳಂತೆ ಎಲ್ಲಾ ಕಡೆ ವ್ಯಾಪಿಸಿಕೊಂಡಿವೆ. ತಮ್ಮ ವ್ಯವಹಾರ ವೃದ್ದಿಸಿಕೊಳ್ಳುವ ಪೈಪೋಟಿಯಲ್ಲಿ ದುಬಾರಿ ಬಡ್ಡಿಯ ಸಾಲದ ಮೂಲಕ ಗ್ರಾಮೀಣ ಹಾಗೂ ನಗರ ಪ್ರದೇಶದ ಬಡ ಕುಟುಂಬಗಳನ್ನು ಬಲಿಪಶುಗಳನ್ನಾಗಿಸುತ್ತಿವೆ. ಈ ಸಂಸ್ಥೆಗಳ ಅನೈತಿಕ, ಬಲವಂತದ ಸಾಲ ವಸೂಲಾತಿ ಕಿರುಕುಳದಿಂದಾಗಿ ದೊಡ್ಡ ಸಂಖ್ಯೆಯ ಮಹಿಳೆಯರು ಹಾಗೂ ಪುರುಷರೂ ಸಹ ಆತ್ಮಹತ್ಯೆಗೆ ತುತ್ತಾಗುತ್ತಿದ್ದಾರೆ.

ವಾರದ ಕಂತಿನಲ್ಲಿ ಸಾಲ ವಸೂಲಾತಿ ಕ್ರಮ ಅನುಸರಿಸುವ ಈ ಸಂಸ್ಥೆಗಳ ಕಾರ್ಯವಿಧಾನದಿಂದ ರೈತಾಪಿ, ಕೃಷಿ ಕೂಲಿಕಾರ ಹಾಗೂ ಅಸಂಘಟಿತ ದೈಹಿಕ ದುಡಿಮೆಯ ಕುಟುಂಬಗಳು ಪ್ರತಿ ನಿತ್ಯ ಸಾಲದ ಕಿರುಕುಳ ಅನುಭವಿಸುತ್ತ ಬದುಕುವಂತಾಗಿದೆ. ಯಾವುದೇ ದುಡಿಮೆ ಹಾಗೂ ನಿರಂತರ ಆದಾಯ ಇಲ್ಲದ ಕುಟುಂಬಗಳ ಸದಸ್ಯರನ್ನು ವಿಶೇಷವಾಗಿ ಮಹಿಳೆಯರನ್ನು ಲಕ್ಷಾಂತರ ರೂ. ಸಾಲದ ಸುಳಿಗೆ ಸಿಲುಕಿಸಲಾಗಿದೆ. ಇಂತಹ ದುಸ್ಥಿತಿಯಿಂದ ಬಡ ಜನತೆಯನ್ನು ರಕ್ಷಿಸಲು ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಸಾಲ ನೀಡಿಕೆ, ಬಡ್ಡಿ ದರ ನಿಗದಿ, ಕಂತು ಪಾವತಿ ಸೇರಿದಂತೆ ಒಟ್ಟು ವ್ಯವಹಾರವನ್ನು ನಿಯಂತ್ರಿಸಲು ಕಾನೂನು ಜಾರಿ ಮಾಡುವುದು ಅಗತ್ಯ ಇದೆ. ರಿಸರ್ವ್ ಬ್ಯಾಂಕ್ ಇಂಡಿಯಾ, ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳಿಗೆ 0% ಅಂದರೆ ಬಡ್ಡಿ ರಹಿತ ಅಥವಾ ಶೈನ್ಯ ಬಡ್ಡಿದರದಲ್ಲಿ ಸಾಲ ಸೌಲಭ್ಯ ಕೊಡಲು ಸಾಧ್ಯವಾಗಬೇಕು ಹಾಗೂ ಮೈಕ್ರೊ ಫೈನಾನ್ಸ್ ಸಂಸ್ಥೆಗಳು ಬಲವಂತದ ಸಾಲ ವಸೂಲಾತಿಯನ್ನು ಕಟ್ಟುನಿಟ್ಟಾಗಿ ನಿಷೇಧಿಸಿ ಸಾಲ ವಸೂಲಾತಿ ಕಿರುಕುಳ ಇಲ್ಲದಂತೆ ನೋಡಿಕೊಳ್ಳಲು ಸಿಪಿಐ(ಎಂ) 24 ಕರ್ನಾಟಕ ರಾಜ್ಯ ಸಮ್ಮೇಳನ ಆಗ್ರಹಿಸುತ್ತದೆ. ❍

ಕಾಂತರಾಜ್ ಸಮಿತಿ ವರದಿ ಬಿಡುಗಡೆಗೆ ಸಿಪಿಐ(ಎಂ) ಒತ್ತಾಯ

ಕಾಂತರಾಜ್ ಆಯೋಗದ ಜಾತಿ ಸಮೀಕ್ಷೆ (ಸಾಮಾಜಿಕ–ಆರ್ಥಿಕ ಸಮೀಕ್ಷೆ) ವರದಿಯನ್ನು ರಾಜ್ಯ ಸರಕಾರಕ್ಕೆ ಸಲ್ಲಿಸಿ ವರ್ಷಗಳೇ ಕಳೆದಿವೆ. ಆದರೆ ರಾಜ್ಯ ಸರ್ಕಾರ ಇದನ್ನು ಅಂಗೀಕರಿಸಲೂ ಇಲ್ಲ, ಸಾರ್ವಜನಿಕ ಚರ್ಚೆಗೆ ಬಿಡಗಡೆ ಮಾಡಲೂ ಇಲ್ಲ. ಇದು ಜನವಿರೋಧಿ ನಿಲುಮೆಯಾಗಿದೆ. ಸಮೀಕ್ಷೆಯ ವಿವರಗಳು ಅಧಿಕೃತವಾಗಿ ಬಿಡುಗಡೆ ಆಗದಿದ್ದರೂ ಕೆಲವು ಗುಂಪುಗಳು ವರದಿ ದೋಷಪೂರಿತವಾಗಿದೆ ಮತ್ತು ವೈಜ್ಞಾನಿಕವಾಗಿ ಸಮೀಕ್ಷೆ ಮಾಡಿಲ್ಲ ಮುಂತಾದ ಕಾರಣಗಳನ್ನು ನೀಡಿ ವರದಿ ಬಹಿರಂಗ ಪಡಿಸಬಾರದೆಂದು ವಿರೋಧಿಸುತ್ತಿರುವುದು ಸರಿಯಾದ ಕ್ರಮವಲ್ಲ. ವರದಿ ಬಿಡುಗಡೆ ಮಾಡಬೇಕು ಅಥವಾ ಮಾಡಬಾರದು ಎಂಬ ಬೇಡಿಕೆಗಳು ಒಂದೊಂದು ಜಾತಿಗಳ ಹಿತಾಸಕ್ತಿಗಳ ಹಿನ್ನೆಲೆಯಲ್ಲಿ ರೂಪುಗೊಳ್ಳುತ್ತಿರುವುದು ಆರೋಗ್ಯಕರ ಬೆಳವಣಿಗೆಯಲ್ಲ ಎಂದಿದೆ.

ಸರ್ಕಾರವೇ ಸುಮಾರು 164 ಕೋಟಿ ರೂಗಳನ್ನು ಖರ್ಚು ಮಾಡಿ ಕಾಂತರಾಜ್ ಆಯೋಗದ ಮೂಲಕ ಸಿದ್ಧಪಡಿಸಿರುವ ವರದಿಯನ್ನು ಅಂಗೀಕರಿಸಿ ಅದನ್ನು ಸಾರ್ವಜನಿಕ ಚರ್ಚೆಗೆ ಬಿಡಬಹುದು. ಅಂತಿಮವಾಗಿ ಸರ್ಕಾರ ಒಂದು ತೀರ್ಮಾನಕ್ಕೆ ಬರಬಹುದು. ಹುಲಿ ಬಂತು ಹುಲಿ ಎಂಬಂತೆ ವರದಿಯನ್ನು ಮುಂದಿಟ್ಟುಕೊಂಡು ಸಮಾಜದಲ್ಲಿ ಒಡಕನ್ನು ಉಂಟು ಮಾಡುವ ಪ್ರಯತ್ನಗಳಿಗೆ ಸರ್ಕಾರವೇ ಕುಮ್ಮಕ್ಕು ಕೊಡಬಾರದು. ಆದ್ದರಿಂದ ಕೂಡಲೇ ಕಾಂತರಾಜ್ ಆಯೋಗದ ವರದಿಯನ್ನು ಅಂಗೀಕಾರ ಮಾಡಿ ಬಹಿರಂಗ ಪಡಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ. ❍

ಹೆಣ್ಣಿಗೆ ಗುರುದೀಕ್ಷೆ ಕೊಟ್ಟ ನಾಡು...... ಪುಟ 9 ರಿಂದ

ಸಹೋದರರು. ಪ್ರತಿಯೊಬ್ಬರನ್ನು ಪ್ರೀತಿಸುವುದು, ಸಹಾಯ ಮಾಡುವುದು. ಕ್ಷಮಿಸುವುದು ಅಗತ್ಯ ಎಂದರು.

***

ಸಮಾವೇಶ ಕ್ರಾಂತಿಕಾರಕ ಘಟನೆ – ಮಾತೆ ಗಂಗಾಂಬಿಕೆ ಪಾಟೀಲ

ಮಾತೆ ಗಂಗಾಂಬಿಕೆ ಪಾಟೀಲ ಅವರು ಮಾತನಾಡಿ ಈ ಸಮಾವೇಶ ಒಂದು ಕ್ರಾಂತಿಕಾರಕ ಘಟನೆ. ಮಾನವನ ಭೌತವಾದಿ ಶೋಷಣೆ, ಭೇಧ, ಅನ್ಯಾಯಗಳನ್ನು ಸಹಿಸಿಕೊಳ್ಳುವುದು ಮೂರ್ಖತನ. ಈ ಶೋಷಣೆಯಿಂದಾಗಿ ಭಾರತವನ್ನು ಆಳಿದ ವಿದೇಶೀಯರ ಆಳ್ವಿಕೆಯೇ ಒಳ್ಳೆಯದು ಎಂದು ಜನ ಅಂದುಕೊಳ್ಳುವಂತಾಗಿತ್ತು. ವಿವಿಧತೆಯಲ್ಲಿ ಏಕತೆ ಭಾರತದ ವಿಶಿಷ್ಟತೆ. ಅದನ್ನು ಉಳಿಸಿಕೊಳ್ಳೋಣ ಎಂದರು.

***

ಕರ್ಮ ಸಿದ್ಧಾಂತಕ್ಕೆ ಸಮೀಕರಣ ಒಪ್ಪಲಾಗದು – ಕೆ.ಎಸ್. ವಿಮಲ

ಹೋರಾಟಗಾರ್ತಿ ಕೆ.ಎಸ್. ವಿಮಲ ಅವರು ಮಾತನಾಡಿ, ಕಾಯಕವೇ ಕೈಲಾಸ ಎಂದು ನಾಡಿಗೆ ಸಂದೇಶ ಕೊಟ್ಟವರು ಶರಣರು. ಆದರೆ 'ಕರ್ಮಣ್ಯೇವಾದಿಕಾರಸ್ತೆ ಮಾಫಲೇಶು ಕದಾಚನ' ಎಂಬ ಜಾತಿ ತಾರತಮ್ಯವನ್ನು ಹಾಗೂ ಕರ್ಮ ಸಿದ್ಧಾಂತವನ್ನು ಸಮರ್ಥಿಸುವ ಮನುವಾದವನ್ನು ಸಮೀಕರಿಸುತ್ತಿದ್ದಾರೆ. ಆರ್.ಎಸ್.ಎಸ್. ಎಂಬ ರಾಷ್ಟ್ರೀಯ ಸರ್ವನಾಶಕ ಸಂಘ ಭಾರತವನ್ನು ಹಿಂದುತ್ವದ ದೇಶವನ್ನಾಗಿ ಮಾಡಲು ಹೊರಟಿದೆ. ನಿಮಗಿಲ್ಲಿ ಜಾಗವಿಲ್ಲ ಎಂದು ಹೇಳಬೇಕಿದೆ. ನಾವು ಅನ್ನದ ತಟ್ಟೆಯನ್ನು ಕಿತ್ತುಕೊಳ್ಳುವವರ ವಿರುದ್ಧ ಮಾತನಾಡೋಣ, ತೊಗರಿಗೆ ಬೆಂಬಲ ಬೆಲೆಗಾಗಿ ಜನವರಿ 22 ರಂದು ನಡೆಯುವ ಬಂದ್ ಅನ್ನು ಬೆಂಬಲಿಸೋಣ ಎಂದರು.

***

ಕ್ಷಮಾಪಣೆ ಪತ್ರ ಬರೆದು ಕೊಟ್ಟವರು –ಬಸವರಾಜ ಸೂಳಿಬಾವಿ

ಲಡಾಯಿ ಪ್ರಕಾಶನದ ಬಸವರಾಜ ಸೂಳಿಬಾವಿಯವರು ಮಾತನಾಡಿ ನಮ್ಮ ಬೆನ್ನ ಹಿಂದಿನ ಬೆಳಕು ಬಸವಣ್ಣ. ಟಾಟಾಗೂ ಒಂದೇ ಓಟು, ಸಾಮಾನ್ಯನಿಗೂ ಒಂದೇ ಓಟು ಎಂಬ ಸಂವಿಧಾನವನ್ನು ಅಂಬೇಡ್ಕರರು ಕೊಟ್ಟರು. ಹಿಂದುತ್ವವಾದಿಗಳದ್ದು ಬ್ರಿಟೀಷರಿಗೆ ಕ್ಷಮಾಪಣೆ ಪತ್ರಗಳನ್ನು ಬರೆದುಕೊಟ್ಟ ಪರಂಪರೆ ಅಷ್ಟೆ ಎಂದರು.

***

ದೇಗುಲ ಸಂಸ್ಕೃತಿ ಬಿಡಬೇಕು –ಹುಲಸೂರು ಸ್ವಾಮಿ

ಹುಲಸೂರು ಸ್ವಾಮಿಗಳು ಮಾತನಾಡಿ ನಾವು ದೇಗುಲ ಸಂಸ್ಕೃತಿಯನ್ನು ಬಿಟ್ಟು ದೇಹವನ್ನೇ ದೇವಾಲಯ ಮಾಡಿಕೊಳ್ಳಬೇಕು. ವೇದಗಳು ಅಗ್ರಹಾರದ ಉತ್ಪನ್ನಗಳು. ವೇದದ ನೇಣನ್ನು ಹರಿಯಬೇಕು ಎಂದು ಶರಣರು ಹೇಳಿದ್ದಾರೆ. ವೈದಿಕರು ಮಧ್ಯ ಏಷ್ಯಾದಿಂದ ಭಾರತಕ್ಕೆ ದನಕಾಯುತ್ತಾ ಬಂದವರು. ಈ ಮನುವಾದಿಗಳು ಕಲ್ಬುರ್ಗಿಯವರನ್ನು, ಗೌರಿ ಲಂಕೇಶರನ್ನು ಕೊಂದರು. ಈಗ ಸಾಣೆಹಳ್ಳಿ ಶ್ರೀಗಳ ಮೇಲೆ ದಾಳಿ ಮಾಡುತ್ತಿದ್ದಾರೆ. ಇದನ್ನು ಪ್ರತಿಭಟಿಸಬೇಕು ಎಂದರು.

***

ಲಿಂಗಾಯತರನ್ನು ಹಿಂದುತ್ವಗೊಳಿಸುವ ಯತ್ನ – ಅಫಜಲ್ ಭಾಯಿ

ಅಫಜಲ್ ಭಾಯಿಯವರು ಮಾತನಾಡಿ ಕರ್ನಾಟಕದ ಲಿಂಗಾಯತ ಯುವಕರು ಎಚ್ಚರಿಕೆ ವಹಿಸಬೇಕು. ಇತ್ತೀಚೆಗೆ ಲಿಂಗಾಯತ ಧರ್ಮ ಸ್ವತಂತ್ರ ಅವೈದಿಕ ಧರ್ಮ ಎಂಬ ಮಾನ್ಯತೆ ಪಡೆಯಬೇಕು ಎಂಬ ಹೋರಾಟ ನಡೆಯುತ್ತಿರುವಾಗ ಸಂಘ ಪರಿವಾರದವರು ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಲಿಂಗಾಯತರನ್ನು ಹಿಂದುತ್ವಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಇತಿಹಾಸವನ್ನು ತಿರುಚುವುದು, ಮಹಾನ್ ವ್ಯಕ್ತಿಗಳ ವಿಚಾರಧಾರೆಗಳಿಗೆ ಕಲಬೆರಕೆ ಮಾಡುವುದು ಇವರ ತಂತ್ರ. ಇವರು ಸಾಂಸ್ಕೃತಿಕ ಭಯೋತ್ಪಾದಕರು. ಲಿಂಗಾಯತರು ಮನುವಾದಿ ವಿಚಾರಗಳನ್ನು ಒದ್ದು ಹೊರಬಂದವರು ಎಂದರು.

***

ಎಲ್ಲರಿಗೂ ಜನಿವಾರ ಕೊಟ್ಟು ಸೇರಿಸಿಕೊಳ್ಳುವಿರಾ? –ಶ್ರೀ ಗುರುಮಹಾಂತ ಸ್ವಾಮಿ

ಶ್ರೀ ಗುರುಮಹಾಂತ ಸ್ವಾಮಿಗಳು, ಇಲಕಲ್ ಇವರು ಮಾತನಾಡಿ, ಮನುವಾದಿಗಳು ದೇಶದ ನೂತನ ಪಾರ್ಲಿಮೆಂಟ್ ಉದ್ಘಾಟನೆಗೆ ರಾಷ್ಟ್ರಾಧ್ಯಕ್ಷೆ ದ್ರೌಪದಿ ಮುರ್ಮು ಅವರನ್ನು ಕರೆಯಲಿಲ್ಲ. ಅವರು ಆದಿವಾಸಿ, ವಿಧವೆ, ಮಹಿಳೆ ಎಂಬುದೇ ಅದಕ್ಕೆ ಕಾರಣ. ಇಂದಿರಾ ಗಾಂಧಿಯನ್ನು ದೇವಾಲಯದೊಳಕ್ಕೆ ಬಿಟ್ಟಿರಲಿಲ್ಲ ಎಂದರು. ನಮ್ಮದು ಬ್ರಾಹ್ಮಣ ಧರ್ಮ ಎನ್ನುವವರು ಎಲ್ಲರಿಗೂ ಜನಿವಾರ ಕೊಟ್ಟು ಎಲ್ಲರನ್ನು ಬ್ರಾಹ್ಮಣ ಧರ್ಮಕ್ಕೆ ಸೇರಿಸಿಕೊಳ್ಳಲಿ ಎಂದು ಸವಾಲು ಹಾಕಿದರು. ಇಂತಹ ಮನುವಾದಿಗಳ ಜೊತೆ ಕೈಜೋಡಿಸುವ ಲಿಂಗಾಯತರು ಲಿಂಗಾಯತ ಕೋಟಾದಲ್ಲಿ ಮಂತ್ರಿ ಪದವಿ ಕೇಳಬಾರದು ಎಂದರು ಹಾಗೆಯೇ ಲಿಂಗಾಯತ ಮಠ, ಶಾಲೆಗಳ ಆವರಣದಲ್ಲಿ ಆರ್.ಎಸ್.ಎಸ್. ಶಾಖೆಗಳನ್ನು ನಡೆಸುತ್ತಿರುವಲ್ಲಿ ಅವನ್ನು ಬಂದ್ ಮಾಡಬೇಕು ಎಂದು ಕರೆ ನೀಡಿದರು. ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಧರ್ಮ ಲಿಂಗಾಯತ ಧರ್ಮ. ಮಾದಾರ ಚೆನ್ನಯ್ಯನ ಮನೆಯಲ್ಲಿ ಉಂಡ ಕಾರಣ 'ವೇದ ನಡನಡುಗಿತ್ತು' ಎಂಬ ಬಸವಣ್ಣನವರ ವಚನವೇ ಇದೆ. ಆದರೆ ಮಂತ್ರಾಲಯ, ಶೃಂಗೇರಿಗಳಲ್ಲಿ ಮಹಿಳೆಯರನ್ನು ಒಳಗೆ ಬಿಡುತ್ತಾರೆಯೇ ಎಂದ ಪ್ರಶ್ನಿಸಿದರು.

***

ಪ್ರಜಾಶಾಹಿ ತೋರಿಸಿಕೊಟ್ಟವರು ಶರಣರು–ಶ್ರೀ ಬಸವಲಿಂಗ ಪಟ್ಟದ್ದೇವರು

ಶ್ರೀ ಮ.ಘ.ಚ. ಬಸವಲಿಂಗ ಪಟ್ಟದ್ದೇವರು, ಭಾಲ್ಕಿ ಸ್ವಾಮಿಗಳು ಮಾತನಾಡಿ ರಾಜಶಾಹಿ ಇದ್ದಾಗ ಪ್ರಜಾಶಾಹಿ ತೋರಿಸಿಕೊಟ್ಟವರು ಶರಣರು. ಹರಳಯ್ಯನ ಮಗ ಶೀಲವಂತ ಮಧುವರಸನ ಮಗಳು ಮದುವೆಯಾಗಲು ಬಯಸಿದಾಗ ಸತ್ಯ, ಸಮಾನತೆಯ ತತ್ವದ ಸಲುವಾಗಿ ಪ್ರಾಣ ಹೋದರೂ ಚಿಂತೆ ಇಲ್ಲ ಎಂದು ಹೋರಾಡಿದವರು ಶರಣರು ಎಂದರು. ಬಾಬಾಸಾಹೇಬರು ಸಂವಿಧಾನದ ಮೂಲಕ ಇಂತಹ ಸಮಾನತೆ ತಂದುಕೊಟ್ಟರು ಎಂದರು.

***

ಮನುವಾದಿಗಳದ್ದು ವೈದಿಕೋತ್ಸವ – ಶ್ರೀ ಬಸವ ಪ್ರಭು ಸ್ವಾಮೀಜಿ

ಶ್ರೀ ಬಸವ ಪ್ರಭು ಸ್ವಾಮೀಜಿಯವರು ಮಾತನಾಡಿ ಮನುವಾದಿಗಳದ್ದು ವೈದಿಕೋತ್ಸವ, ನಮ್ಮದು ವಚನೋತ್ಸವ, ನಿಜವಾದ ಭಾರತೋತ್ಸವ ಎಂದರು. ವೀರತೇಶಾನಂದ ಶಿವಯೋಗಿಗಳು, ಮಾತನಾಡಿ ಸುಮಾರು 10–12 ವರ್ಷಗಳ ಹಿಂದೆ ಇದೇ ಕೋಮುವಾದಿ ಶಕ್ತಿಗಳು ಧರ್ಮದ ಹೆಸರಿನಲ್ಲಿ ಬೆಂಕಿ ಹಚ್ಚಲು ಬಂದಾಗ ಸಂತ–ಶರಣ ಸಮಾವೇಶವನ್ನು ಸಂಘಟಿಸಿದ್ದೆವು ಎಂದು ನೆನಪಿಸಿಕೊಂಡರು.

ಶ್ರೀ ಚೆನ್ನಬಸವಾನಂದ ಸ್ವಾಮಿಗಳು, ಹಜರತ್ ಖ್ವಾಜಾ ಬಂದಾನವಾಜ್ ಗೇಸುದರಾಜ್, ಶ್ರೀ ವರಜ್ಯೋತಿ ಭಂತೇಜಿ, ಶ್ರೀ ಗುರುಮೀತ್ ಸಿಂಗ್, ಶ್ರೀ ಜ್ಞಾನಜ್ಯೋತಿ ಭಂತೇಜಿ, ಶ್ರೀ ಚೆನ್ನಬಸವ ಸ್ವಾಮೀಜಿ, ಕಾಶಿನಾಥ ಅಂಬಲಗೆ, ಪ್ರಭುಲಿಂಗ ಮಹಾಗಾಂವಕರ್, ಆರ್.ಜಿ. ಶೆಟಗಾರ್, ಲಿಂಗಾಯತ ಧರ್ಮ ಅಧ್ಯಯನ ಕೇಂದ್ರದ ಶ್ರೀಶೈಲ ಮಸೂತಿ, ಓಂಕಾರ ಚೋಂಡಿ ಮುಂತಾದವರು ಭಾಗವಹಿಸಿದ್ದರು. ವಚನ ಚಳುವಳಿಯ ನಿಜವಾದ ಆಶಯಗಳನ್ನು ಒಪ್ಪುವವರು, ಲಿಂಗಾಯತರು ಯಾರೂ ಸಹ ಮನುವಾದಿಗಳು ಸಂಘಟಿಸುತ್ತಿರುವ ಭಾರತೀಯ ಸಂಸ್ಕೃತಿ ಉತ್ಸವದಲ್ಲಿ ಪಾಲ್ಗೊಳ್ಳಬಾರದು ಎಂದು ಕರೆ ನೀಡುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು. ಕೊನೆಯಲ್ಲಿ ಮಹೇಶ್ ರಾಥೋಡ್ ಅವರು ವಂದಿಸಿದರು.

ಸೌಹಾರ್ದ ಪರಂಪರೆಯ ರಕ್ಷಣೆಗೆ ಬದ್ಧ 'ಸೌಹಾರ್ದ ಕರ್ನಾಟಕ'–ಎಸ್.ವೈ.ಗುರುಶಾಂತ್

ನಮ್ಮ ನಾಡಿನ ಸೌಹಾರ್ದತೆ–ಶಾಂತಿ–ಸಾಮರಸ್ಯಕ್ಕೆ ಕೊಳ್ಳಿ ಇಡುವುದರ ವಿರುದ್ಧ ಬಹುತ್ವದ ಸಾಮರಸ್ಯ ಸಂಸ್ಕೃತಿಯನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಸೌಹಾರ್ದ ಕರ್ನಾಟಕ ಹಲವಾರು ವರ್ಷಗಳಿಂದ ಶ್ರಮಿಸುತ್ತಿದೆ. ಎಲ್ಲಾ ಸಮಾನ ಮನಸ್ಕರನ್ನು ಒಳಗೊಳಿಸಿ ಪ್ರತಿ ಹಂತದಲ್ಲಿಯೂ ಪ್ರತಿರೋಧ ಒಡ್ಡಿ ಸೌಹಾರ್ದತೆ ಕಾಯಲು ಮುತುವರ್ಜಿ ವಹಿಸುತ್ತಿದೆ.

ಈ ಸೌಹಾರ್ದ ಭಾರತ ಉತ್ಸವವು ಆ ಹಿನ್ನೆಲೆಯಲ್ಲಿ ಮಹತ್ವವಿದೆ. ಹಾಗೆಯೇ ಗಾಂಧಿಜೀ ಹುತಾತ್ಮರಾದ ದಿನವಾದ ಜನವರಿ 30 ರಂದು ಸಹ ರಾಜ್ಯಾದ್ಯಂತ ಸೌಹಾದ ಸಂಕಲ್ಪ ದಿನ ಆಚರಿಸಲಾಗುತ್ತಿದ್ದು ಯಶಸ್ವಿಗೊಳಿಸಬೇಕೆಂದು, ಸೌಹಾರ್ದ ಕರ್ನಾಟಕ ಸಂಯೋಜಕರಾದ ಎಸ್. ವೈ. ಗುರುಶಾಂತ್ ಮನವಿ ಮಾಡಿದ್ದಾರೆ. ❍

ಕಟ್ಟಡ ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಧನಸಹಾಯ ಪಾವತಿಗೆ ಹೈಕೋರ್ಟ್ ತೀರ್ಪು

ನಿರಂತರ ಹೋರಾಟದಿಂದ ಐತಿಹಾಸಿಕ ಗೆಲುವು ಸಾಧಿಸಿದ ಕಟ್ಟಡ ಕಾರ್ಮಿಕ ಚಳವಳಿ

ಸಿ.ಸಿದ್ದಯ್ಯ

ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ (1948) ಹಾಗೂ ಸಂವಿಧಾನದ (21ಎ) ಅನ್ವಯ ಶಿಕ್ಷಣ ಒಂದು ಮೂಲಭೂತ ಹಕ್ಕು. ಆದರೆ, ಶಿಕ್ಷಣ ಕ್ಷೇತ್ರವನ್ನು ಖಾಸಗೀಕರಿಸುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನೀತಿಗಳಿಂದಾಗಿ ಇಂದು ಶಿಕ್ಷಣ ದುಬಾರಿಯಾಗಿದೆ. ಮುಕ್ತ ಆರ್ಥಿಕ ನೀತಿಯು ಶಿಕ್ಷಣವನ್ನು ಒಂದು ಮಾರಾಟದ ಸರಕನ್ನಾಗಿಸಿದೆ. ಸರ್ಕಾರಗಳು ತಮ್ಮ ಬಜೆಟ್‌ಗಳಲ್ಲಿ ಸಾರ್ವಜನಿಕ ಶಿಕ್ಷಣಕ್ಕೆ ಸಾಕಷ್ಟು ಅನುದಾನ ನೀಡುತ್ತಿಲ್ಲ. ಬಡವರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಲಾಗದ ಪರಿಸ್ಥಿತಿಯನ್ನು ಇದು ತಂದಿಟ್ಟಿದೆ.

ಕಟ್ಟಡ ಕಾರ್ಮಿಕರ ಕುಟುಂಬದ ಮೇಲಿನ ಇಂತಹ ಹೊರೆ ಕಡಿಮೆ ಮಾಡುವ ಉದ್ದೇಶದಿಂದ 'ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ'ಯಿಂದ ನೊಂದಾಯಿತ ಕಟ್ಟಡ ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಧನಸಹಾಯ ನೀಡುವ ಸೌಲಭ್ಯ ಒದಗಿಸಲಾಗಿದೆ. ಶೈಕ್ಷಣಿಕ ಧನಸಹಾಯದ ಸೌಲಭ್ಯದ ಜೊತೆಗೆ, ಕಾರ್ಮಿಕರಿಗೆ ವೈದ್ಯಕೀಯ ವೆಚ್ಚ, ಮಹಿಳಾ ಕಾರ್ಮಿಕರಿಗೆ ಹೆರಿಗೆ ಸೌಲಭ್ಯ, ಮನೆ ಕಟ್ಟಿಕೊಳ್ಳಲು ಧನಸಹಾಯ, ಪಿಂಚಣಿ ಸೇರಿದಂತೆ ಮಂಡಳಿಯಿಂದ ನೊಂದಾಯಿತ ಕಟ್ಟಡ ಕಾರ್ಮಿಕರಿಗೆ ಮತ್ತು ಅವರ ಕುಟುಂಬದವರಿಗೆ 19 ಬಗೆಯ ಸೌಲಭ್ಯಗಳು ಸಿಗುತ್ತವೆ.

ಶೈಕ್ಷಣಿಕ ಧನಸಹಾಯದಿಂದ ಮಂಡಳಿಯಲ್ಲಿ ನೊಂದಾಯಿತರಾದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಒಂದಷ್ಟು ಸಹಕಾರಿಯಾಗುತ್ತಿದೆ. 2021 ರಿಂದ, ಆರ್ಥಿಕ ಹೊರೆಯ ನೆಪಗಳನ್ನು ಹೇಳುತ್ತ ಶೈಕ್ಷಣಿಕ ಧನಸಹಾಯ ನೀಡುವುದನ್ನು ಶೇ. 65ರಿಂದ 80ರಷ್ಟು ಕಡಿತಗೊಳಿಸಿತ್ತು. 2021ರ ಅಧಿಸೂಚನೆ ಅನ್ವಯ ಶೈಕ್ಷಣಿಕ ಧನಸಹಾಯ ಬಿಡುಗಡೆ ಮಾಡುವಂತೆ ಕಾರ್ಮಿಕರು ತಮ್ಮ ಸಂಘಟನೆಗಳ ನೇತೃತ್ವದಲ್ಲಿ ಬೆಂಗಳೂರಿನಲ್ಲಿರುವ ಕಲ್ಯಾಣ ಮಂಡಳಿಯ ಕೇಂದ್ರ ಕಚೇರಿ ಎದುರು ಮತ್ತು ರಾಜ್ಯದ ಹಲವು ಜಿಲ್ಲೆ, ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಿದರು. ಇದಕ್ಕೆ ಮಂಡಳಿಯ ಅಧಿಕಾರಿಗಳಾಗಲೀ, ಸಚಿವರು ಅಥವಾ ರಾಜ್ಯ ಸರ್ಕಾರದ ಮುಖ್ಯಸ್ಥರಾಗಲೀ ಕಿವಿಗೊಡಲಿಲ್ಲ.

ಕೋಟ್ಯಾಂತರ ರೂಪಾಯಿ ಅವ್ಯವಹಾರ

"2021ರ ಅಧಿಸೂಚನೆ ಅನ್ವಯ ಶೈಕ್ಷಣಿಕ ಧನಸಹಾಯ ನೀಡಲು ಕಷ್ಟವಾಗಲಿದೆ" ಎಂದು ಮಂಡಳಿಯು ಸಬೂಬು ಹೇಳುತ್ತಿದೆ. ಆದರೆ ಅಧಿಕಾರಿಗಳು ಮತ್ತು ಸಂಬಂಧಪಟ್ಟ ಸಚಿವರು, ವೈದ್ಯಕೀಯ ತಪಾಸಣೆ ಹೆಸರಿನಲ್ಲಿ, ಮಕ್ಕಳಿಗೆ ಲ್ಯಾಪ್ ಟಾಪ್ ಮತ್ತು ಕಾರ್ಮಿಕರಿಗೆ ಕಟ್ಟಡ ನಿರ್ಮಾಣದ ಕೆಲಸದಲ್ಲಿ ಬಳಕೆಮಾಡುವ ಸಲಕರಣೆಗಳ ಖರೀದಿಯಲ್ಲಿ ನೆಪದಲ್ಲಿ ಕೋಟ್ಯಾಂತರ ರೂಪಾಯಿ ಅವ್ಯವಹಾರಗಳನ್ನು ಹಲವು ವರ್ಷಗಳಿಂದ ನಡೆಸುತ್ತಾ ತಮ್ಮ ಐಶಾರಾಮಿ ಜೀವನಕ್ಕೆ ಮಂಡಳಿಯ ನಿಧಿಯನ್ನು ಬಳಕೆ ಮಾಡಿಕೊಂಡಿದ್ದಾರೆ. ಇದೂ ಸಾಲದೆಂಬಂತೆ, ಪೌಷ್ಠಿಕಾಂಶ ಪದಾರ್ಥಗಳು ಎಂಬ ಹೆಸರಿನಲ್ಲಿ ಮತ್ತು ಗಿಡಮೂಲಿಕೆ ಔಷಧಿಗಳು ಎಂಬ ಹೆಸರಿನಲ್ಲಿ ಅನಗತ್ಯವಾದ ವಸ್ತುಗಳನ್ನು ಖರೀದಿಸಿ ಕಾರ್ಮಿಕರಿಗೆ ವಿತರಣೆ ಮಾಡಲು ಮುಂದಾದರು. ಕಾರ್ಮಿಕರು ಇದನ್ನು ಪಡೆಯಲು ನಿರಾಕರಿಸಿದ ಅಥವಾ ಪಡೆದುಕೊಂಡರೂ ಅವುಗಳನ್ನು ಬಳಕೆ ಮಾಡದ ಸಾಕಷ್ಟು ಉದಾಹರಣೆಗಳಿವೆ.

ಕೊರೋನಾ ಸಾಂಕ್ರಾಮಿಕದ ಸಮಯದಲ್ಲಿ ಮಂಡಳಿಯ ಹಣದಿಂದ ಆಹಾರ ಪದಾರ್ಥಗಳನ್ನು ಖರೀದಿಸಿ ಕಟ್ಟಡ ಕಾರ್ಮಿಕರಲ್ಲದವರಿಗೂ ಹಂಚಿಕೆ ಮಾಡಲಾಗಿದೆ. ಕೆಲವು ರಾಜಕಾರಣಿಗಳ ಜೊತೆ ಕೈಜೋಡಿಸಿದ ಮಂಡಳಿಯ ಅಧಿಕಾರಿಗಳು, ಆಹಾರ ಪದಾರ್ಥಗಳ ಕಿಟ್‌ಗಳನ್ನು ಖರೀದಿಸಿ, ನೇರವಾಗಿ ರಾಜಕಾರಣಿಗಳಿಗೆ ಸರಭರಾಜು ಮಾಡಿದರು. ಇಂತಹ ಕಿಟ್‌ಗಳ ಮೇಲಿದ್ದ ಮಂಡಳಿಯ ಹೆಸರನ್ನು ಮರೆಮಾಚಿ, ಶಾಸಕರು ಮತ್ತು ಅಂದಿನ ಆಡಳಿತ ಪಕ್ಷದ ಕೆಲ ರಾಜಕಾರಣಿಗಳು ತಮ್ಮದೇ ಹೆಸರುಗಳನ್ನು ಹಾಕಿಕೊಂಡು, ತಮ್ಮ ಹಿಂಬಾಲಕರಿಗೆ ಮತ್ತು ತಮ್ಮ ಬೆಂಬಲಿತ ಮತದಾರರಿಗೆ ಹಂಚಿಕೆ ಮಾಡಿರುವ ಸುದ್ದಿಗಳು ಮಾಧ್ಯಮಗಳಲ್ಲಿ ಹರಿದಾಡಿದ್ದನ್ನು ನೋಡಿದ್ದೇವೆ. ನೈಜ ಫಲಾನುಭವಿಗಳಾದ ಕಟ್ಟಡ ಕಾರ್ಮಿಕರಿಗೆ ಸಿಗಬೇಕಾದ ಸೌಲಭ್ಯಗಳನ್ನು ಇತರರೂ ಕಸಿದುಕೊಂಡಿದ್ದಾರೆ. ಕಟ್ಟಡ ಕಾರ್ಮಿಕರಲ್ಲದ ಲಕ್ಷಾಂತರ ಜನರು ಮಂಡಳಿಯಲ್ಲಿ ನೊಂದಾಯಿತರಾಗಿ ಲೇಬರ್ ಕಾರ್ಡ್ ಪಡೆದಿದ್ದಾರೆ. ಚುನಾವಣಾ ಲಾಭಕ್ಕಾಗಿ ಅನರ್ಹರಿಗೆ ಕಾರ್ಡ್‌ಗಳನ್ನು ಕೊಡಿಸುವಲ್ಲಿ ರಾಜಕಾರಣಿಗಳ ಪಾತ್ರವೂ ಇದೆ.

ಶೈಕ್ಷಣಿಕ ಧನಸಹಾಯಕ್ಕಾಗಿ ಕರ್ನಾಟಕ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ (KBOCWWB)ಗೆ ಅರ್ಜಿ ಸಲ್ಲಿಸಿರುವ ಎಲ್ಲ ವಿದ್ಯಾರ್ಥಿಗಳಿಗೆ, 2021ರ ಅಧಿಸೂಚನೆಯಂತೆ ಬಾಕಿ ಇರುವ ಮೂರು ವರ್ಷಗಳ ಶೈಕ್ಷಣಿಕ ಧನಸಹಾಯ ವಿತರಿಸಲು ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ಜನವರಿ 10, 2025ರಂದು ಹೈಕೋರ್ಟ್ ಐತಿಹಾಸಿಕ ತೀರ್ಪು ನೀಡಿದೆ. ಕಾರ್ಮಿಕರು ಹೋರಾಟದ ಮೂಲಕ ಪಡೆದುಕೊಂಡಿರುವ ಸೌಲಭ್ಯಗಳನ್ನು ಪಡೆಯಲು ಮತ್ತು ಅವುಗಳನ್ನು ಉಳಿಸಿಕೊಳ್ಳಲು ನಿರಂತರವಾಗಿ ಹೋರಾಡುತ್ತಲೇ ಇರಬೇಕಾಗುತ್ತದೆ. ಈ ವಿಷಯದಲ್ಲಿ ಕಾರ್ಮಿಕರು 'ನಿದ್ದೆಗೆ ಜಾರಿದರೆ' ಅವರು ಗಳಿಸಿಕೊಂಡ ಸೌಲಭ್ಯಗಳು ಸಿಗಲಾರವು ಎಂಬುದಕ್ಕೆ KBOCWWB ಒಂದು ಉದಾಹರಣೆಯಾಗಿದೆ.



ಕಲ್ಯಾಣ ಮಂಡಳಿ ಹಾಗೂ ಕಾರ್ಮಿಕ ಇಲಾಖೆಯಲ್ಲಿ ಕಟ್ಟಡ ಕಾರ್ಮಿಕರಿಗೆ ಸೌಲಭ್ಯಗಳನ್ನು ನೀಡುವಲ್ಲಿ, ವಿದ್ಯಾರ್ಥಿ ವೇತನ ವಿತರಣೆಯಲ್ಲಿ, ವಿವಿಧ ರೀತಿಯ ವಸ್ತುಗಳ ಖರೀದಿಗೆ ಟೆಂಡರ್‌ಗಳನ್ನು ನೀಡುವಲ್ಲಿ, ನೇಮಕಾತಿಗಳಲ್ಲಿ ವ್ಯಾಪಕ ಭ್ರಷ್ಟಾಚಾರಗಳು ನಡೆದಿವೆ. ಈ ಭಷ್ಟಾಚಾರದಲ್ಲಿ ಅಧಿಕಾರಿಗಳು ನೇರವಾಗಿ ಶಾಮೀಲಾಗಿದ್ದಾರೆ ಎಂದು ಆರೋಪಿಸಿ, ಇದರ ಬಗ್ಗೆ ತನಿಖೆ ನಡೆಸಿ ಕಠಿಣ ಕ್ರಮ ಕೈಗೊಳ್ಳಬೇಕು ಮತ್ತು ಎಲ್ಲಾ ಖರೀದಿ ಟೆಂಡರ್‌ಗಳನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿ, ಕರ್ನಾಟಕ ರಾಜ್ಯ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಫೆಡರೇಶನ್ (ಸಿಐಟಿಯು) ಮತ್ತು ಇನ್ನಿತರೆ ಕಟ್ಟಡ ಕಾರ್ಮಿಕ ಸಂಘಗಳು ಜೊತೆಗೂಡಿ ರಾಜ್ಯಾದ್ಯಂತ ಪ್ರತಿಭಟನೆಗಳನ್ನು ನಡೆಸಿದವು.

ಹೈಕೋರ್ಟ್‌ಗೆ ಅರ್ಜಿ

ಶೈಕ್ಷಣಿಕ ಧನಸಹಾಯ ಕಡಿತ ಮಾಡಿದ ಮಂಡಳಿಯು ಧನಸಹಾಯದ ಮೊತ್ತವನ್ನು 2023ರ ಶೈಕ್ಷಣಿಕ ವರ್ಷದಿಂದ ಶೇ. 60ರಿಂದ ಶೇ. 70ರಷ್ಟು ಕಡಿತಗೊಳಿಸಿತು. ಇದು ಕಾರ್ಮಿಕರನ್ನು ಮತ್ತಷ್ಟು ಸಿಟ್ಟಿಗೇಳಿಸಿತು. ಅವರು ಮತ್ತಷ್ಟು ಹೋರಾಟಗಳನ್ನು ನಡೆಸಿದರು. ಸರ್ಕಾರವು ಇದ್ಯಾವುದಕ್ಕೂ ಬಗ್ಗದಿದ್ದಾಗ, ಕಲ್ಯಾಣ ಮಂಡಳಿಯ ಈ ನಿರ್ಧಾರವನ್ನು ಪ್ರಶ್ನಿಸಿ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ (ಸಿಡಬ್ಲ್ಯುಎಫ್‌ಐ–ಸಿಐಟಿಯು) ಹೈಕೋರ್ಟ್ ಮೆಟ್ಟಿಲೇರಿತು. ಕಟ್ಟಡ ಕಾರ್ಮಿಕರ ಮಕ್ಕಳಿಗೆ ಮೀಸಲಾದ ವರ್ಗದಲ್ಲಿ ಶೈಕ್ಷಣಿಕ ಸಹಾಯಧನ ಒದಗಿಸಲು ಕೋರಿ ಕಾರ್ಮಿಕರ ಮಕ್ಕಳಾದ ಎಂ.ಅಮೃತಾ ಹಾಗೂ ಹೆಚ್. ಅಕ್ಷತಾ ಮತ್ತು ಸಿಡಬ್ಲ್ಯುಎಫ್‌ಐ ಪ್ರಧಾನ ಕಾರ್ಯದರ್ಶಿ ಕೆ.ಮಹಂತೇಶ್ ಹಾಗೂ ಇತರ ಇಬ್ಬರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ದಂಡಸಹಿತ ಶೈಕ್ಷಣಿಕ ಧನಸಹಾಯ ಪಾವತಿಗೆ ಆದೇಶ

ಹೈಕೋರ್ಟ್‌ನಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆಯನ್ನು 2024ರ ಏಪ್ರಿಲ್ 23ರಂದು ನಡೆಸಿದ್ದ ನ್ಯಾಯಮೂರ್ತಿ ನಾಗಪ್ರಸನ್ನ ಅವರ ಏಕಸದಸ್ಯ ಪೀಠವು, ನಾಲ್ಕು ವಾರದೊಳಗೆ ಎಲ್‌ಎಲ್‌ಬಿ ಹಾಗೂ ಎಂಬಿಎ ವಿದ್ಯಾಭ್ಯಾಸ ಮಾಡುತ್ತಿರುವ ಇಬ್ಬರು ವಿದ್ಯಾರ್ಥಿನಿಯರಿಗೆ 2021ರ ಅಧಿಸೂಚನೆ ಅನ್ವಯ ದಂಡಸಹಿತ ಶೈಕ್ಷಣಿಕ ಧನಸಹಾಯ ಪಾವತಿಸಬೇಕು ಎಂದು ಕರ್ನಾಟಕ ರಾಜ್ಯ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಆದೇಶಿಸಿತು. ಮಕ್ಕಳನ್ನು ನ್ಯಾಯಾಲಯ ಮೆಟ್ಟಿಲು ಹತ್ತುವಂತೆ ಮಾಡಿದ ಕಲ್ಯಾಣ ಮಂಡಳಿಗೆ ತಲಾ ರೂ.25,000 ದಂಡ ವಿಧಿಸಿತು. ಅರ್ಜಿದಾರರ ಪರ ವಕೀಲ ಆದಿತ್ಯ ಚಟರ್ಜಿ ವಾದ ಮಂಡಿಸಿದ್ದರು.

ಆದರೆ ನ್ಯಾಯಾಲಯದ ಆದೇಶವನ್ನು ಪಾಲಿಸದೇ ಕಲ್ಯಾಣ ಮಂಡಳಿ ವಿಳಂಬ ಧೋರಣೆ ಅನುಸರಿಸಿತು. ಈ ಆದೇಶದ ನಂತರ ಜೂನ್ 7ರಂದು ನಡೆದ ಅರ್ಜಿಯ ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಆದಿತ್ಯ ಚಟರ್ಜಿ ಅವರು ಹೈಕೋರ್ಟ್ ನೀಡಿದ್ದ ಮಧ್ಯಂತರ ಆದೇಶ ಪಾಲನೆಯಾಗಿಲ್ಲ ಎಂಬ ಅಂಶವನ್ನು ಪೀಠದ ಗಮನಕ್ಕೆ ತಂದರು.


ಇದರಿಂದ ಆಕ್ರೋಶಗೊಂಡ ನ್ಯಾಯಮೂರ್ತಿಗಳು, ಮಧ್ಯಂತರ ಆದೇಶ ಜಾರಿ ಮಾಡಲು ವಿಫಲವಾದ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿ ವಿರುದ್ಧ ಕಿಡಿಕಾರಿದರು. ಮುಂದಿನ ವಿಚಾರಣೆಯ ಸಂದರ್ಭದಲ್ಲಿ ಕಲ್ಯಾಣ ಮಂಡಳಿಯಲ್ಲಿ ಸಂಗ್ರಹವಾಗಿರುವ ರೂ. 6,700 ಕೋಟಿ ಸೆಸ್, ಅದು ಹೊಂದಿರುವ ಬ್ಯಾಂಕ್ ಖಾತೆಯ ವಿವರಗಳು ಹಾಗೂ ಯಾವ ಸೌಲಭ್ಯಗಳಿಗೆ ಎಷ್ಟು ಖರ್ಚು ಮಾಡಲಾಗುತ್ತಿದೆ ಎನ್ನುವ ವಿವರಗಳನ್ನು ಒಳಗೊಂಡ ಪ್ರಮಾಣಪತ್ರ ಸಲ್ಲಿಸಿ ಎಂದು ಆದೇಶಿಸಿ ವಿಚಾರಣೆಯನ್ನು ಮುಂದೂಡಿದರು.

ಹೈಕೋರ್ಟ್‌ನ ಮಧ್ಯಂತರ ಆದೇಶದನ್ವಯ ಕಲ್ಯಾಣ ಮಂಡಳಿಯು, ಕಾರ್ಮಿಕರ ಇಬ್ಬರು ಮಕ್ಕಳಿಗೆ ದಂಡಸಹಿತ ಶೈಕ್ಷಣಿಕ ಧನಸಹಾಯ (ರೂ. 60,000 ಹಾಗೂ ರೂ. 55,000) ಪಾವತಿಸಿತು. ಇಬ್ಬರು ವಿದ್ಯಾರ್ಥಿನಿಯರಿಗೆ ಧನಸಹಾಯ ಪಾವತಿಸಿದ ಮಾತ್ರಕ್ಕೆ ಈ ವಿಚಾರಣೆ ಇಲ್ಲಿಗೆ ನಿಲ್ಲುವುದಿಲ್ಲ ಎಂದು ಹೇಳಿದ ನ್ಯಾಯಪೀಠವು, ಮಂಡಳಿಯಲ್ಲಿ ಸಾವಿರಾರು ಕೋಟಿ ಸೆಸ್ ಇದ್ದರೂ ಮಕ್ಕಳ ಶೈಕ್ಷಣಿಕ ಧನಸಹಾಯವನ್ನು ಶೇ. 60–70ರಷ್ಟು ಕಡಿತ ಮಾಡಿರುವ ಕ್ರಮವನ್ನು ಯಾವುದೇ ಕಾರಣದಿಂದಲೂ ಒಪ್ಪಲು ಸಾಧ್ಯವಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿತು. ಮಂಡಳಿಯಲ್ಲಿ ಈವರೆವಿಗೂ ಮಾಡಲಾಗಿರುವ ಪ್ರತಿಯೊಂದು ಖರ್ಚಿನ ಲೆಕ್ಕವನ್ನು ಮುಂದಿನ ವಿಚಾರಣೆ ವೇಳೆಗೆ ನ್ಯಾಯಾಲಯಕ್ಕೆ ಹಾಜರುಪಡಿಸಬೇಕು ಎಂದು ಆದೇಶಿಸಿ ವಿಚಾರಣೆಯನ್ನು 2024ರ ಜುಲೈ 26ಕ್ಕೆ ಮುಂದೂಡಿತು.

ಸೆಸ್ ಹಣ ಕಾರ್ಮಿಕರ ಕಲ್ಯಾಣ ಮತ್ತು ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ

ಜೂನ್ 26ರಂದು ಈ ರಿಟ್ ಅರ್ಜಿಯ ವಿಚಾರಣೆಯನ್ನು ಕೈಗೆತ್ತಿಕೊಂಡ ನ್ಯಾಯಮೂರ್ತಿಗಳು, ಬಡ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕೆ ಧನಸಹಾಯ ನೀಡಲು ಮಾಡಿದ ಆದೇಶವನ್ನು ಜಾರಿಗೊಳಿಸದ ಕಲ್ಯಾಣ ಮಂಡಳಿಯ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಲ್ಲದೆ ಕಠಿಣ ಕ್ರಮದ ಎಚ್ಚರಿಕೆ ನೀಡಿದರು. "ಬಿಸಿಲು ಮಳೆಯಲ್ಲಿ ಶ್ರಮಪಡುವ ಕಟ್ಟಡ ಕಾರ್ಮಿಕರ ದುಡಿಮೆಯಿಂದಾಗಿ ಸಾವಿರಾರು ಕೋಟಿ ಸೆಸ್ ಸಂಗ್ರಹವಾಗುತ್ತಿದೆ. ಈ ಸೆಸ್ ಹಣವನ್ನು ಕಾರ್ಮಿಕರ ಕಲ್ಯಾಣ ಮತ್ತು ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡಬೇಕೇ ವಿನಾ

ಪುಟ 14 ಕ್ಕೆ



ಮೂರು ಕರಾಳ ಕೃಷಿ ಕಾನೂನುಗಳ ಅಂಶಗಳನ್ನು ಮರಳಿ ತರುವ ಪ್ರಯತ್ನ–ಕೇಂದ್ರ ಸಮಿತಿ ಖಂಡನೆ



ಕೃಷಿ ಮಾರುಕಟ್ಟೆ ಕುರಿತ ಕರಡು ರಾಷ್ಟ್ರೀಯ ನೀತಿ ಚೌಕಟ್ಟು ರೈತರ ಆಂದೋಲನದಿಂದಾಗಿ ಹಿಂತೆಗೆದುಕೊಳ್ಳಲಾದ ಮೂರು ಕೃಷಿ ಕಾನೂನುಗಳ ಅಂಶಗಳನ್ನು ಮರಳಿ ತರುವ ಪ್ರಯತ್ನವಾಗಿದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ. ಈ ಕರಡು ನೀತಿಯ ವಿರುದ್ಧ ಕಿಸಾನ್ ಸಭಾ ಮತ್ತು ಸಂಯುಕ್ತ ಕಿಸಾನ್ ಮೋರ್ಚಾ ಪ್ರಾರಂಭಿಸಿರುವ ಆಂದೋಲನಕ್ಕೆ ಕೇಂದ್ರ ಸಮಿತಿಯು ತನ್ನ ಸಂಪೂರ್ಣ ಬೆಂಬಲವನ್ನು ನೀಡಿದೆ. ಈ ನೀತಿಯ ವಿರುದ್ಧ ಪ್ರತಿಭಟನೆಗೆ ಜನರನ್ನು ಸಜ್ಜುಗೊಳಿಸಲು ಅದು ಪಕ್ಷದ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ಜನವರಿ 17–19, 2025ರಂದು ಕೋಲ್ಕತ್ತಾದಲ್ಲಿ ನಡೆದ ಕೇಂದ್ರ ಸಮಿತಿ ಸಭೆ ಈ ಕರೆಯನ್ನು ನೀಡಿದೆ.

ಕೇಂದ್ರ ಸಮಿತಿಯ ಈ ಸಭೆ 2025ರ ಏಪ್ರಿಲ್ 2 ರಿಂದ 6 ರವರೆಗೆ ಮಧುರೈನಲ್ಲಿ ನಡೆಯಲಿರುವ ಪಕ್ಷದ 24ನೇ ಮಹಾಧಿವೇಶನದಲ್ಲಿ ಮಂಡಿಸಬೇಕಾದ "ಕರಡು ರಾಜಕೀಯ ನಿರ್ಣಯ"ದ ಕುರಿತು ಚರ್ಚಿಸಿ ಕರಡು ರಾಜಕೀಯ ನಿರ್ಣಯವನ್ನು ಅಂತಿಮಗೊಳಿಸಿತು. ಇದನ್ನು ಫೆಬ್ರವರಿ 1, 2025ರಂದು ಎಲ್ಲಾ ಹಂತಗಳಲ್ಲಿ ಪಕ್ಷದ ಚರ್ಚೆಗಾಗಿ ಬಿಡುಗಡೆ ಮಾಡಲಾಗುತ್ತದೆ.

ಪಕ್ಷದ ಮಹಾಧಿವೇಶನದ "ಕರಡು ಸಂಘಟನಾ ವರದಿ"ಯನ್ನು ಅಂತಿಮಗೊಳಿಸಲು ಕೇಂದ್ರ ಸಮಿತಿಯು ಮಾರ್ಚ್ 22–23ರಂದು ಸಭೆ ಸೇರಲು ನಿರ್ಧರಿಸಿತು.

ಈ ಸಭೆಯ ನಂತರ ನೀಡಿರುವ ಹೇಳಿಕೆಯ ಪೂರ್ಣ ಪಾಠವನ್ನು ಈ ಮುಂದೆ ಕೊಡಲಾಗಿದೆ:

ಗಾಜಾದಲ್ಲಿ ಕದನ ವಿರಾಮ

ಜನವರಿ 19ರಿಂದ ಜಾರಿಗೆ ಬರುತ್ತಿರುವ ಇಸ್ರೇಲ್ ಮತ್ತು ಹಮಾಸ್ ನಡುವಿನ ಕದನ ವಿರಾಮ ಒಪ್ಪಂದವನ್ನು ಕೇಂದ್ರ ಸಮಿತಿಯು ಸ್ವಾಗತಿಸಿತು. ಹದಿನೈದು ತಿಂಗಳಿಗೂ ಹೆಚ್ಚು ಕಾಲ, ಗಾಜಾದ ಪ್ಯಾಲೆಸ್ಟೀನಿಯನ್ ಜನರ ವಿರುದ್ಧ ಇಸ್ರೇಲ್ ನಡೆಸಿದ ನರಮೇಧದ ಯುದ್ಧವು 46,000ಕ್ಕೂ ಹೆಚ್ಚು ಜನರ ಸಾವಿಗೆ ಕಾರಣವಾಗಿದೆ ಮತ್ತು 1,20,000ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ಆರು ವಾರಗಳ ಕಾಲ ನಡೆದ ಮೊದಲ ಹಂತದ ಕದನ ವಿರಾಮದ ನಂತರ, ಶಾಂತಿ ಮತ್ತು ರಾಜಕೀಯ ಇತ್ಯರ್ಥವನ್ನು ಪುನಃಸ್ಥಾಪಿಸುವವರೆಗೆ ಕದನ ವಿರಾಮವನ್ನು ವಿಸ್ತರಿಸುವುದನ್ನು ಖಚಿತಗೊಳಿಸುವುದು ಈಗ ಮುಖ್ಯವಾಗಿದೆ ಎಂದಿರುವ ಕೇಂದ್ರ ಸಮಿತಿ, ಶಾಂತಿ ಸ್ಥಾಪನೆಯಾಗುವುದನ್ನು ಖಚಿತಗೊಳಿಸಲು ಮತ್ತು ಒಂದು ಸ್ವತಂತ್ರ ಪ್ಯಾಲೆಸ್ಟೀನಿಯನ್ ಪ್ರಭುತ್ವದ ರಚನೆಗೆ ಕ್ರಮಗಳನ್ನು ತೆಗೆದುಕೊಳ್ಳುವುದನ್ನು ಖಚಿತಗೊಳಿಸಲು ಭಾರತ ಸರ್ಕಾರ ರಾಜತಾಂತ್ರಿಕವಾಗಿ ಕೆಲಸ ಮಾಡಬೇಕು ಎಂದು ಹೇಳಿದೆ.

ಏಕಕಾಲಿಕ ಚುನಾವಣೆಗಳಿಗೆ ಮಸೂದೆಗಳು

ಲೋಕಸಭೆ ಮತ್ತು ರಾಜ್ಯ ಶಾಸಕಾಂಗಗಳಿಗೆ ಏಕಕಾಲದಲ್ಲಿ ಚುನಾವಣೆಗಳನ್ನು ನಡೆಸಲು ಮೋದಿ ಸರ್ಕಾರ ಸಂಸತ್ತಿನಲ್ಲಿ ಪರಿಚಯಿಸಿದ ಎರಡು ಶಾಸನಗಳನ್ನು ಕೇಂದ್ರ ಸಮಿತಿಯು ಗಮನಿಸಿತು. ಮೊದಲನೆಯದು 'ಸಂವಿಧಾನ (129ನೇ ತಿದ್ದುಪಡಿ) ಮಸೂದೆ', ಇದು ಅಸ್ತಿತ್ವದಲ್ಲಿರುವ ಮೂರು ಅನುಚ್ಛೇದಗಳಿಗೆ ತಿದ್ದುಪಡಿಗಳನ್ನು ಮಾಡುವ ಮತ್ತು ಸಂವಿಧಾನದಲ್ಲಿ ಹೊಸ ಅನುಚ್ಛೇದವನ್ನು ಸೇರಿಸುವ ಪ್ರಸ್ತಾಪವನ್ನು ಮಾಡುತ್ತದೆ. ಒಂದು ತಿದ್ದುಪಡಿಯಲ್ಲಿ ಲೋಕಸಭೆಯು ಅದರ ಪೂರ್ಣ ಅವಧಿ ಮುಗಿಯುವ ಮೊದಲು ವಿಸರ್ಜಿಸಲ್ಪಟ್ಟರೆ, ಮುಂದಿನ ಲೋಕಸಭೆಗೆ ಮುಗಿಯದ ಅವಧಿಗೆ ಮಾತ್ರ ಚುನಾವಣೆಗಳನ್ನು ನಡೆಸಲಾಗುತ್ತದೆ ಎಂದು ಹೇಳುತ್ತದೆ. ಇದರರ್ಥ ಲೋಕಸಭೆಯು ಅದರ ಅವಧಿಯಲ್ಲಿ ಮೂರು ವರ್ಷಗಳ ನಂತರ ವಿಸರ್ಜಿಸಲ್ಪಟ್ಟರೆ, ಮುಂದಿನ ಚುನಾವಣೆಯು ಉಳಿದ ಎರಡು ವರ್ಷಗಳ ಅವಧಿಗೆ ಮಾತ್ರ ಇರುತ್ತದೆ. ರಾಜ್ಯ ಶಾಸಕಾಂಗಗಳ ಅವಧಿಗೆ ಸಂಬಂಧಿಸಿದಂತೆ ಇದೇ ರೀತಿಯ ತಿದ್ದುಪಡಿಯನ್ನು ಪ್ರಸ್ತಾಪಿಸಲಾಗಿದೆ. ರಾಜ್ಯ ವಿಧಾನಸಭೆಯನ್ನು ಮಧ್ಯಂತರದಲ್ಲಿ ವಿಸರ್ಜಿಸಿದರೆ, ನಂತರ ಉಳಿದ ಅವಧಿಗೆ ಮಾತ್ರ ಚುನಾವಣೆಗಳನ್ನು ನಡೆಸಲಾಗುತ್ತದೆ. ಇದು ಸಂವಿಧಾನದಲ್ಲಿ ನಿಗದಿಪಡಿಸಿದ ಸಂಸದೀಯ ಪ್ರಜಾಪ್ರಭುತ್ವದ ಮೂಲ ಯೋಜನೆಗೆ ವಿರುದ್ಧವಾಗಿದೆ. ರಾಜ್ಯ ವಿಧಾನಸಭೆಯ ಅಧಿಕಾರಾವಧಿಯನ್ನು ಹೀಗೆ ಮೊಟಕುಗೊಳಿಸುವುದು ಒಕ್ಕೂಟ ವ್ಯವಸ್ಥೆ ಮತ್ತು ಚುನಾಯಿತ ರಾಜ್ಯ ಶಾಸಕರ ಹಕ್ಕುಗಳ ಮೇಲೆ ಗಂಭೀರ ಪರಿಣಾಮಗಳನ್ನು ಬೀರುತ್ತದೆ ಎಂದು ಕೇಂದ್ರ ಸಮಿತಿ ಅಭಿಪ್ರಾಯ ಪಟ್ಟಿದೆ.



ಈ ಎರಡು ಮಸೂದೆಗಳನ್ನು ಹೆಚ್ಚಿನ ಪರಿಶೀಲನೆ ಮತ್ತು ಪರಿಗಣನೆಗಾಗಿ ಜಂಟಿ ಸಂಸದೀಯ ಸಮಿತಿಗೆ ವಹಿಸಲಾಗಿದೆ.

ಸಿಪಿಐ(ಎಂ) ಈಗಾಗಲೇ 'ಒಂದು ರಾಷ್ಟ್ರ, ಒಂದು ಚುನಾವಣೆ' ವ್ಯವಸ್ಥೆಯ ವಿರುದ್ಧ ಪ್ರಚಾರಾಂದೋಲನ ನಡೆಸಿದೆ ಎಂದು ನೆನಪಿಸಿರುವ ಕೇಂದ್ರ ಸಮಿತಿ, ಈ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಪ್ರಜಾಪ್ರಭುತ್ವ ಮತ್ತು ಒಕ್ಕೂಟ ವ್ಯವಸ್ಥೆಯನ್ನು ಗೌರವಿಸುವ ಎಲ್ಲರೂ ವಿರೋಧಿಸಬೇಕು ಎಂದು ಕರೆ ನೀಡಿದೆ.

ಮಸೀದಿ–ದೇವಾಲಯ ವಿವಾದಗಳು

1991ರ ಪೂಜಾ ಸ್ಥಳಗಳ ಕಾಯ್ದೆಯನ್ನು ಉಲ್ಲಂಘಿಸಿ, ವಿವಿಧ ಮಸೀದಿಗಳ ಸ್ವರೂಪವನ್ನು ಪ್ರಶ್ನಿಸಿ ಮತ್ತು ಅವುಗಳ ಅಡಿಯಲ್ಲಿ ದೇವಾಲಯಗಳು ಅಸ್ತಿತ್ವದಲ್ಲಿವೆ ಎಂಬ ಆರೋಪದೊಂದಿಗೆ ಸ್ಥಳೀಯ ನ್ಯಾಯಾಲಯಗಳಲ್ಲಿ ಅರ್ಜಿಗಳನ್ನು ಸಲ್ಲಿಸಲಾಗಿದೆ ಮತ್ತು ಸಮೀಕ್ಷೆಗಳನ್ನು ನಡೆಸಬೇಕೆಂದು ಕೋರಲಾಗಿದೆ. ಪಶ್ಚಿಮ ಉತ್ತರ ಪ್ರದೇಶದ ಸಂಭಾಲ್‌ನಲ್ಲಿ ಇದು ಸಂಭವಿಸಿದೆ, ಅಲ್ಲಿ ನ್ಯಾಯಾಲಯವು ಅರ್ಜಿಯನ್ನು ಸಲ್ಲಿಸಿದ ದಿನವೇ ಸಮೀಕ್ಷೆಗೆ ಆದೇಶಿಸಿತು. ಇದು ಪ್ರತಿಭಟನೆಗಳಿಗೆ ಕಾರಣವಾದ ನಂತರದ ಘಟನೆಗಳು ಮತ್ತು ಐದು ಯುವ ಮುಸ್ಲಿಂ ಪುರುಷರ ಸಾವು ರಾಜ್ಯ ಸರ್ಕಾರ ಮತ್ತು ಜಿಲ್ಲಾ ಅಧಿಕಾರಿಗಳು ಹಿಂದುತ್ವ ಶಕ್ತಿಗಳ ಕಾರ್ಯಸೂಚಿಯನ್ನು ಹೇಗೆ ಮುಂದೊಯ್ಯುತ್ತಿದ್ದಾರೆ ಎಂಬುದನ್ನು ತೋರಿಸಿದೆ ಎಂದು ಆತಂಕ ವ್ಯಕ್ತಪಡಿಸಿರುವ ಕೇಂದ್ರ ಸಮಿತಿ ತರುವಾಯ, ಅಜ್ಮೀರ್‌ನಲ್ಲಿ ಅಜ್ಮೀರ್ ಷರೀಫ್ ದರ್ಗಾದ ಸಮೀಕ್ಷೆಗಾಗಿ ಸ್ಥಳೀಯ ನ್ಯಾಯಾಲಯವು ಅರ್ಜಿಯನ್ನು ಸ್ವೀಕರಿಸಿತು ಎಂಬ ಸಂಗತಿಯತ್ತ ಗಮನ ಸೆಳೆದಿದೆ.

1991ರ ಪೂಜಾ ಸ್ಥಳಗಳ (ವಿಶೇಷ ನಿಬಂಧನೆಗಳು) ಕಾಯ್ದೆಗೆ ಹಿಂದೂ ಸಂಘಟನೆಗಳ ಕೆಲವು ಅರ್ಜಿದಾರರ ಸವಾಲನ್ನು ಆಲಿಸಿದ ಸುಪ್ರೀಂ ಕೋರ್ಟ್, ಕೆಳ ನ್ಯಾಯಾಲಯಗಳಲ್ಲಿ ನಡೆಯುತ್ತಿರುವ ಎಲ್ಲಾ ಮೊಕದ್ದಮೆಗಳು ಮತ್ತು ಸಮೀಕ್ಷೆಗಳಿಗೆ ತಡೆ ಹಾಕಿದೆ.

ಪೂಜಾ ಸ್ಥಳಗಳ ಕಾಯ್ದೆಯ ಸಿಂಧುತ್ವವನ್ನು ಎತ್ತಿಹಿಡಿಯಬೇಕು ಮತ್ತು ಧಾರ್ಮಿಕ ಪೂಜಾ ಸ್ಥಳಗಳ ಮೇಲೆ ವಿವಾದಗಳನ್ನು ಎತ್ತುವ ಯಾವುದೇ ಪ್ರಯತ್ನಗಳ ಮೇಲೆ ಯಾವುದೇ ಸಡಿಲತೆಯಿಲ್ಲದೆ ಅದನ್ನು ಜಾರಿಗೊಳಿಸುವಂತೆ ನಿರ್ದೇಶಿಸಬೇಕು ಎಂದು ಕೇಂದ್ರ ಸಮಿತಿಯು ಸುಪ್ರೀಂ ಕೋರ್ಟ್ ಅನ್ನು ಒತ್ತಾಯಿಸಿದೆ.

ಯುಜಿಸಿ ಕರಡು ನಿಬಂಧನೆಗಳು

ಕೇಂದ್ರ ಸಮಿತಿಯು ಕರಡು ವಿಶ್ವವಿದ್ಯಾಲಯ ಅನುದಾನ ಆಯೋಗದ ನಿಭಂದನೆಗಳು 2025 ಅನ್ನು ಬಲವಾಗಿ ವಿರೋಧಿಸಿದೆ, ಇದು ರಾಜ್ಯ ನಡೆಸುವ ವಿಶ್ವವಿದ್ಯಾಲಯಗಳಲ್ಲಿ ಉಪಕುಲಪತಿಗಳನ್ನು ಆಯ್ಕೆ ಮಾಡುವ ಪ್ರಶ್ನೆಯಲ್ಲಿ ರಾಜ್ಯಗಳ ಹಕ್ಕುಗಳ ಮೇಲಿನ ನೇರ ದಾಳಿಯಾಗಿದೆ ಎಂದು ಅದು ಹೇಳಿದೆ. ಮಾರ್ಗಸೂಚಿಗಳು ರಾಜ್ಯಪಾಲರು ಮತ್ತು ಕುಲಪತಿಗಳಿಗೆ ಮೂರು ಸದಸ್ಯರ ಆಯ್ಕೆ ಸಮಿತಿಯನ್ನು ನೇಮಿಸುವ ಅಧಿಕಾರವನ್ನು ನೀಡುತ್ತದೆ, ಇದರಲ್ಲಿ ಕುಲಪತಿಗಳ ನಾಮನಿರ್ದೇಶಿತರು ಅಧ್ಯಕ್ಷರು ಸಹ ಆಗಿರುತ್ತಾರೆ. ಆಯ್ಕೆ ಸಮಿತಿಯಲ್ಲಿ ಯಾರನ್ನು ನೇಮಿಸಲಾಗುತ್ತಿದೆ ಎಂಬುದರಲ್ಲಿ ರಾಜ್ಯ ಸರ್ಕಾರಕ್ಕೆ ಯಾವುದೇ ಪಾತ್ರವಿರುವುದಿಲ್ಲ. ಒಂದೇ ಏಟಿಗೆ, ಈ ಮಾರ್ಗಸೂಚಿಗಳ ಮೂಲಕ, ಕೇಂದ್ರವು ರಾಜ್ಯಗಳ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ತನ್ನ ಆಯ್ಕೆಯ ಉಪಕುಲಪತಿಗಳನ್ನು ಕುಲಪತಿಗಳೂ ಆಗಿರುವ ರಾಜ್ಯಪಾಲರ ಮೂಲಕ ನೇಮಿಸಬಹುದು. ಈಗಾಗಲೇ ಎಲ್ಲಾ ವಿಧಿ–ವಿಧಾನಗಳನ್ನು ಮೀರಿ ಬಿಜೆಪಿ–ಆರ್‌ಎಸ್‌ಎಸ್ ಶಿಬಿರದೊಂದಿಗೆ ನಂಟು ಹೊಂದಿರುವ ಉಪಕುಲಪತಿಗಳನ್ನು ಹೇರಲು ರಾಜ್ಯಪಾಲರು ಹೇಗೆ ನಿರಂಕುಶವಾಗಿ ಕುಲಪತಿ ಸ್ಥಾನವನ್ನು ಬಳಸುತ್ತಿದ್ದಾರೆ ಎಂಬುದನ್ನು ನಾವು ನೋಡಿದ್ದೇವೆ. ಇದು ಒಂದು ಅಪಾಯಕಾರಿ ನಿಬಂಧನೆಯಾಗಿದ್ದು, ಇದನ್ನು ವಿರೋಧಿಸಲೇಬೇಕಾಗಿದೆ ಎಂದಿರುವ ಕೇಂದ್ರ ಸಮಿತಿ, ಈ ಕರಡಿಗೆ ಅಂತಿಮ ರೂಪ ನೀಡಿದರೆ, ಸಂಬಂಧಪಟ್ಟ ಬಿಜೆಪಿಯೇತರ ರಾಜ್ಯ ಸರ್ಕಾರಗಳು ಈ ನಿಬಂಧನೆಗಳನ್ನು ಸುಪ್ರೀಂ ಕೋರ್ಟ್‌ನಲ್ಲಿ

ಪುಟ 14 ಕ್ಕೆ

ಯುಜಿಸಿ ನಿಬಂಧನೆಗಳನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು–ಕೇರಳ ವಿಧಾನಸಭೆ ನಿರ್ಣಯ

2025ರ ಕರಡು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ನಿಬಂಧನೆಗಳನ್ನು ತಕ್ಷಣವೇ ಹಿಂತೆಗೆದುಕೊಳ್ಳುವಂತೆ ಒತ್ತಾಯಿಸುವ ನಿರ್ಣಯವನ್ನು ಕೇರಳ ವಿಧಾನಸಭೆ ಜನವರಿ 21ರಂದು ಸರ್ವಾನುಮತದಿಂದ ಅಂಗೀಕರಿಸಿತು. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಮಂಡಿಸಿದ ಈ ನಿರ್ಣಯವು, ಮಾರ್ಗಸೂಚಿಗಳು ಭಾರತದ ಒಕ್ಕೂಟ ರಚನೆಗೆ ಅನುಗುಣವಾಗಿಲ್ಲ ಮತ್ತು ಸಂವಿಧಾನದಲ್ಲಿ ನಿಗದಿಪಡಿಸಿದ ತತ್ವಗಳನ್ನು ಸಮರ್ಪಕವಾಗಿ ಪ್ರತಿಬಿಂಬಿಸಲು ವಿಫಲವಾಗಿವೆ ಎಂದು ಹೇಳಿದೆ.

ಪ್ರಸ್ತಾವಿತ ವಿಧಿ–ವಿಧಾನಗಳನ್ನು ಪರಾಮರ್ಶಿಸಬೇಕು ಮತ್ತು ಸಂಬಂಧಪಟ್ಟ ಎಲ್ಲರ ಹಿತಾಸಕ್ತಿಗಳನ್ನು ಸಮರ್ಪಕವಾಗಿ ಪರಿಗಣಿಸಲಾಗಿದೆ ಎಂಬುದನ್ನು ಖಚಿತ ಪಡಿಸಿಕೊಳ್ಳಲು ರಾಜ್ಯ ಸರ್ಕಾರಗಳು, ಶಿಕ್ಷಣ ತಜ್ಞರು ಮತ್ತು ಇತರ ಪಾಲುದಾರರೊಂದಿಗೆ ಸಂಪೂರ್ಣ ಸಮಾಲೋಚನೆಗಳ ನಂತರವೇ ಹೊಸ ಮಾರ್ಗಸೂಚಿಗಳ ಸಂಚಯವನ್ನು ಮುಂದಿಡಬೇಕು ಎಂದು ಕೇಂದ್ರ ಸರ್ಕಾರವನ್ನು ನಿರ್ಣಯವು ಒತ್ತಾಯಿಸಿದೆ.

ಸಂವಿಧಾನದ ಏಳನೇ ಷೆಡ್ಯೂಲಿನ ಪ್ರಕಾರ, ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ಮತ್ತು ಮೇಲ್ವಿಚಾರಣೆ ಮಾಡುವ ಅಧಿಕಾರವು ರಾಜ್ಯ ಸರ್ಕಾರಗಳ ಬಳಿ ಇದೆ ಎಂದು ಒತ್ತಿ ಹೇಳಿರುವ ಈ ನಿರ್ಣಯ ಉನ್ನತ ಶಿಕ್ಷಣ ಸೇರಿದಂತೆ ಶಿಕ್ಷಣವನ್ನು ಸಮವರ್ತಿ ಪಟ್ಟಿಗೆ ಸ್ಥಳಾಂತರಿಸಿದ 1977 ರ 42ನೇ ಸಾಂವಿಧಾನಿಕ ತಿದ್ದುಪಡಿಯನ್ನು ಉಲ್ಲೇಖಿಸಿ, ಕೇಂದ್ರ ಸರ್ಕಾರದ ಪಾತ್ರವು ಉನ್ನತ ಶಿಕ್ಷಣಕ್ಕಾಗಿ ಸಂಯೋಜನೆ ಮತ್ತು ಮಾನದಂಡಗಳನ್ನು ನಿಗದಿಪಡಿಸುವುದಕ್ಕೆ ಸೀಮಿತವಾಗಿರಬೇಕು ಎಂದು ನಿರ್ಣಯ ಹೇಳಿದೆ.



ಅಮೇರಿಕಾದ ಆರ್ಥಿಕ ಪ್ರಾಬಲ್ಯ ಅಲುಗಾಡುತ್ತಿದೆ

ಯು.ಎಸ್. ಸಾಮ್ರಾಜ್ಯಶಾಹಿಯು ತಾನು ಏನು ಬೇಕಾದರೂ ಮಾಡಬಹುದು, ತಾನು ಮಾಡಿದ್ದೇ ಕಾನೂನು ಎಂಬಂತೆ ವರ್ತಿಸಿಕೊಂಡು ಬಂದಿದೆ. ತಾನು ಕೈಗೊಳ್ಳುವ ಕ್ರಮಗಳು ಬಂಡವಾಳಶಾಹಿ ನಿಯಮಗಳನ್ನೂ ಉಲ್ಲಂಘಿಸುತ್ತವೆಯೇ, ವಿಶ್ವಾದ್ಯಂತ ತಾನು ಪ್ರತಿಪಾದಿಸುವ ತತ್ವಗಳನ್ನು ತಾನೇ ಉಲ್ಲಂಘಿಸುತ್ತಿದ್ದೇನೆಯೇ ಎಂಬುದರ ಪರಿವೆಯೇ ಅದಕ್ಕಿರಲಿಲ್ಲ. ಆದರೆ, ಇತರ ದೇಶಗಳ ಮೇಲೆ ಅದು ಹೇರುತ್ತಿದ್ದ ಏಕಪಕ್ಷೀಯ ನಿರ್ಧಾರಗಳನ್ನು ಈಗ ಗಂಭೀರವಾಗಿ ಪ್ರಶ್ನಿಸಲಾಗುತ್ತಿದೆ. ವಾಸ್ತವವಾಗಿ ಅಮೇರಿಕಾದ ಏಟಿಗೆ ಎದಿರೇಟು ಕೊಡಲಾಗುತ್ತಿದೆ. ಈವರೆಗೂ ಅಸಹಾಯಕ ದೇಶಗಳನ್ನು ಅಮೆರಿಕ ನೇತೃತ್ವದ ಸಾಮ್ರಾಜ್ಯಶಾಹಿಯು ಹೇಳಿದ್ದನ್ನು ಕೇಳುವಂತೆ ಮಾಡುವ ಬೆದರಿಕೆಯ ಸಾಧನವಾಗಿದ್ದ ಅಮೆರಿಕದ ಏಕಪಕ್ಷೀಯ ಕ್ರಮಗಳು, ಈಗ ಅಮೆರಿಕ ನೇತೃತ್ವದ ಸಾಮ್ರಾಜ್ಯಶಾಹಿಯ ಆರ್ಥಿಕ ಪ್ರಾಬಲ್ಯವನ್ನು ಸಡಿಲಗೊಳಿಸುವ ಅಂತಾರಾಷ್ಟ್ರೀಯ ಹೊಸ ಹೊಸ ಏರ್ಪಾಟುಗಳಿಗೆ ಕಾರಣವಾಗುತ್ತಿವೆ. ಇದರಿಂದಾಗಿ ಸಾಮ್ರಾಜ್ಯವಾದೀ ಯಜಮಾನಿಕೆಯೇ ಅಲುಗಾಡುವಂತಾಗಿದೆ. ಈ ಸನ್ನಿವೇಶದಲ್ಲಿ ಡೊನಾಲ್ಡ್ ಟ್ರಂಪ್ ಕೋಪ ವ್ಯಕ್ತಪಡಿಸುತ್ತಿದ್ದರೆ ಅದರಲ್ಲಿ ಆಶ್ಚರ್ಯವೇನಿಲ್ಲ.

ಪ್ರೊ.ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಅಮೇರಿಕಾ ನೇತೃತ್ವದ ಸಾಮ್ರಾಜ್ಯಶಾಹಿ ದೇಶಗಳು ತಮ್ಮ ಹುಕುಂ ಅನ್ನು ಧಿಕ್ಕರಿಸುವ ಧೈರ್ಯ ತೋರಿದ ದೇಶಗಳ ವಿರುದ್ಧ ವಿಶ್ವಸಂಸ್ಥೆಯ ಬೆಂಬಲವಿಲ್ಲದ ಏಕಪಕ್ಷೀಯ ನಿರ್ಬಂಧಗಳನ್ನು ಹೇರುತ್ತ ಬಂದಿವೆ. ಒಂದು ಅಂದಾಜಿನ ಪ್ರಕಾರ, ಪ್ರಪಂಚದ ಬಹುತೇಕ ಮೂರನೇ ಒಂದು ಭಾಗದಷ್ಟು ದೇಶಗಳು ಒಂದಲ್ಲ ಒಂದು ಸಮಯದಲ್ಲಿ ಇಂತಹ ನಿರ್ಬಂಧಗಳಿಗೆ ಒಳಗಾಗಿವೆ. ಪಾಶ್ಚ್ಯಾತ್ಯ ದೇಶಗಳ ಹಣಕಾಸು ಸಂಸ್ಥೆಗಳಲ್ಲಿ ಈ ನಿರ್ಬಂಧಿತ ದೇಶಗಳು ಇರಿಸಿದ್ದ ಠೇವಣಿಗಳನ್ನೂ ಸ್ಥಗಿತಗೊಳಿಸಲಾಗಿದೆ. ಇರಾನ್, ಕ್ಯೂಬಾ, ಉತ್ತರ ಕೊರಿಯಾ ಮತ್ತು ಇತರ ದೇಶಗಳ ಠೇವಣಿಗಳನ್ನು ಮತ್ತು ಇತ್ತೀಚೆಗೆ ರಷ್ಯಾದ ಠೇವಣಿಗಳನ್ನು ಸ್ಥಗಿತಗೊಳಿಸಲಾಗಿದೆ. ಈ ಕ್ರಮವು ಬಂಡವಾಳಶಾಹಿಯ ನಿಯಮಗಳಿಗೆ ವಿರುದ್ಧವಾಗಿರುವುದು ಸ್ಪಷ್ಟವಾಗಿದ್ದರೂ ಮತ್ತು ಅದು ಅಂತಾರಾಷ್ಟ್ರೀಯ ದರೋಡೆಯ ಕೃತ್ಯಕ್ಕೆ ಸಮನಾಗಿದ್ದರೂ, ಸಾಮ್ರಾಜ್ಯಶಾಹಿ ರಾಷ್ಟ್ರಗಳು ಅದನ್ನು ಕೈಗೊಳ್ಳಲು ಸ್ವಲ್ಪವೂ ಹಿಂಜರಿಯಲಿಲ್ಲ. ಗಾಯದ ಮೇಲೆ ಬರೆ ಎಳೆಯುವಂತೆ, ನ್ಯಾಟೋ ಉತ್ತೇಜಿಸಿದ ಉಕ್ರೇನ್ ಯುದ್ಧದ ಕಾರಣದ ಮೇಲೆ ಸ್ಥಗಿತಗೊಳಿಸಲಾದ ರಷ್ಯಾದ ಠೇವಣಿಗಳ ಮೇಲಿನ ಬಡ್ಡಿಯ ಹಣವನ್ನು ಯುದ್ಧದಲ್ಲಿ ನಿರತವಾಗಿರುವ ಉಕ್ರೇನ್‌ಗೆ ಇತ್ತೀಚೆಗೆ ಅಮೆರಿಕಾ ನೀಡಿದೆ.

ಜೊತೆಗೆ, ನವ ಉದಾರವಾದಿ ನೀತಿಗಳು ಪ್ರಯೋಜನಕಾರಿ ಎಂದು ಮತ್ತೆ–ಮತ್ತೆ ಹೇಳುತ್ತ ಜಾಗತಿಕ ದಕ್ಷಿಣದ ದೇಶಗಳ ಮೇಲೆ ಅವುಗಳನ್ನು ಹೇರುತ್ತಿರುವಾಗಲೇ, ಸ್ವತಃ ಅಮೆರಿಕವೇ ಮೂಲತಃ ದೇಶದಲ್ಲಿ ಉದ್ಯೋಗಾವಕಾಶಗಳನ್ನು ಹೆಚ್ಚಿಸಿಕೊಳ್ಳಲು ಮತ್ತು ತನ್ನ ವ್ಯಾಪಾರ ಕೊರತೆಯನ್ನು ಕಡಿಮೆ ಮಾಡಿಕೊಳ್ಳಲು ರಕ್ಷಣಾತ್ಮಕ ವ್ಯಾಪಾರ ನೀತಿಗಳನ್ನು ಅಳವಡಿಸಿಕೊಳ್ಳುತ್ತಿದೆ. ಈ ರಕ್ಷಣಾತ್ಮಕ ವ್ಯಾಪಾರ ನೀತಿಯು ನಿರ್ದಿಷ್ಟವಾಗಿ ಚೀನಾದ ವಿರುದ್ಧವೇ ನಿರ್ದೇಶಿಸಲ್ಪಟ್ಟಿದೆ ಎಂಬುದು ಸ್ಪಷ್ಟವಾಗಿದೆ. ಈಗ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿರುವ ಡೊನಾಲ್ಡ್ ಟ್ರಂಪ್ ಇನ್ನಷ್ಟು ಕಠಿಣ ಕ್ರಮಗಳನ್ನು ಕೈಗೊಳ್ಳುವುದಾಗಿ ಘೋಷಿಸಿದ್ದಾರೆ. ಉದಾಹರಣೆಗೆ, ಚೀನಾದ ನಾಯಕತ್ವವು ತಮ್ಮ ರಫ್ತುಗಳನ್ನು ಕಡಿತಗೊಳಿಸುವುದಾಗಿ ಭರವಸೆ ನೀಡಿದ್ದರೂ ಸಹ, ಚೀನಾದಿಂದ ಅಮೆರಿಕಕ್ಕೆ ಅನಗತ್ಯ ಔಷಧಿಗಳ ಅಕ್ರಮ ಆಮದುಗಳು ಮುಂದುವರಿದಿವೆ ಎಂಬ ಕಾರಣದ ಮೇಲೆ ಚೀನಾದಿಂದ ಬರುವ ಎಲ್ಲಾ ಆಮದುಗಳ ಮೇಲೆ ಶೇ. 10 ಸುಂಕವನ್ನು ಅಧಿಕವಾಗಿ ಹೇರುವ ಪ್ರಸ್ತಾಪವನ್ನು ಟ್ರಂಪ್ ಮಾಡಿದ್ದಾರೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಯುಎಸ್ ಸಾಮ್ರಾಜ್ಯಶಾಹಿಯು ತಾನು ಏನು ಬೇಕಾದರೂ ಮಾಡಬಹುದು, ತಾನು ಮಾಡಿದ್ದೇ ಕಾನೂನು ಎಂದು ಭಾವಿಸುತ್ತದೆ. ತಾನು ಕೈಗೊಳ್ಳುವ ಕ್ರಮಗಳು ಬಂಡವಾಳಶಾಹಿ ನಿಯಮಗಳನ್ನು ಉಲ್ಲಂಘಿಸುತ್ತವೆಯೇ, ವಿಶ್ವಾದ್ಯಂತ ತಾನು ಪ್ರತಿಪಾದಿಸುವ ತತ್ವಗಳನ್ನು ತಾನೇ ಉಲ್ಲಂಘಿಸುತ್ತಿದ್ದೇನೆಯೇ ಎಂಬುದರ ಪರಿವೆಯೇ ಅದಕ್ಕಿಲ್ಲ. ಆದರೆ, ಇತರ ದೇಶಗಳ ಮೇಲೆ ಅದು ಹೇರುತ್ತಿದ್ದ ಏಕಪಕ್ಷೀಯ ನಿರ್ಧಾರಗಳನ್ನು ಈಗ ಗಂಭೀರವಾಗಿ ಪ್ರಶ್ನಿಸಲಾಗುತ್ತಿದೆ. ವಾಸ್ತವವಾಗಿ ಅಮೇರಿಕಾದ ಏಟಿಗೆ ಎದಿರೇಟು ಕೊಡಲಾಗುತ್ತಿದೆ.

ಚೀನಾದ ಎದಿರೇಟು

ಚೀನಾಕ್ಕೆ ರಫ್ತು ಮಾಡುತ್ತಿದ್ದ ಸೆಮಿ–ಕಂಡಕ್ಟರ್ ತಂತ್ರಜ್ಞಾನದ ಮೇಲೆ ಹೇರಿದ ನಿಷೇಧಕ್ಕೆ ಪ್ರತಿಯಾಗಿ ಅದು ಅಮೆರಿಕಕ್ಕೆ ಮಾಡುತ್ತಿದ್ದ, "ಭದ್ರತೆ"ಗೆ ಸಂಬಂಧಿಸಿದ ಹಲವಾರು ಚಟುವಟಿಕೆಗಳಲ್ಲಿ ಬಳಸಲಾಗುವ ಆಂಟಿಮನಿ ಎಂಬ ಲೋಹದ ರಫ್ತಿನ ಮೇಲೆ ಚೀನಾ ನಿಷೇಧ ಹೇರಿದ ಪರಿಣಾಮವಾಗಿ ಅಮೆರಿಕದಲ್ಲಿ ಆಂಟಿಮನಿಯ ಬೆಲೆ ತೀವ್ರವಾಗಿ ಏರಿದೆ. ತೀರಾ ಇತ್ತೀಚೆಗೆ, ಅಮೆರಿಕದಿಂದ ಖರೀದಿಸುತ್ತಿದ್ದ ತೈಲವನ್ನು ಸಂಪೂರ್ಣವಾಗಿ ನಿಲ್ಲಿಸುವುದಾಗಿ ಘೋಷಿಸುವ ಮೂಲಕ ಚೀನಾ ಅಮೆರಿಕಕ್ಕೆ ಒಂದು ದೊಡ್ಡ ಹೊಡೆತವನ್ನೇ ಕೊಟ್ಟಿದೆ. ಅಮೆರಿಕದಿಂದ ಚೀನಾ ಮಾಡಿಕೊಳ್ಳುತ್ತಿದ್ದ ತೈಲದ ಆಮದು ಇತ್ತೀಚಿನ ದಿನಗಳಲ್ಲಿ ಹಾಗೂ ಹೀಗೂ ಕಡಿಮೆಯಾಗುತ್ತಲೇ ಬಂದಿದೆ. 2023ರಲ್ಲಿ ಅಮೆರಿಕದಿಂದ 150.6 ಮಿಲಿಯನ್ ಬ್ಯಾರೆಲ್ ತೈಲವನ್ನು ಚೀನಾ ಆಮದು ಮಾಡಿಕೊಂಡಿತ್ತು. ಆದರೆ, 2024ರಲ್ಲಿ ಈ ಆಮದುಗಳು 81.9 ಮಿಲಿಯನ್ ಬ್ಯಾರೆಲ್‌ಗಳಿಗೆ, ಅಂದರೆ ಶೇ. 46ರಷ್ಟು ಇಳಿದಿವೆ. ಅಮೆರಿಕದಿಂದ ಎರಡನೇ ಅತಿದೊಡ್ಡ ತೈಲ ಆಮದುದಾರ ಸ್ಥಾನದಿಂದ ಆರನೇ ದೇಶವಾಗಿ ಚೀನಾದ ಸ್ಥಾನ ಬದಲಾಗಿದೆ ಮತ್ತು ಈಗ ಅಮೇರಿಕಾದಿಂದ ತೈಲ ಆಮದುಗಳನ್ನು ಇಡಿಯಾಗಿ ನಿಲ್ಲಿಸಲಿದೆ.

ಚೀನಾದ ಈ ಘೋಷಣೆಯು ಡೊನಾಲ್ಡ್ ಟ್ರಂಪ್ ಅವರನ್ನು ಕೆರಳಿಸಿದೆ. ಅವರು ಹಿಂದೆ ಅಧಿಕಾರ ಹೊಂದಿದ್ದ ಅವಧಿಯಲ್ಲಿ ಅಮೆರಿಕವು ವಿಶ್ವದ ಅತಿದೊಡ್ಡ ತೈಲ ಮತ್ತು ಅನಿಲ ಉತ್ಪಾದಕ ಮತ್ತು ರಫ್ತುದಾರ ದೇಶವಾಗಿ ಹೊರಹೊಮ್ಮಿತ್ತು. ರಷ್ಯಾದ ಅನಿಲದ ಮೇಲೆ ಯುರೋಪಿನ ಅವಲಂಬನೆಯನ್ನು ತಪ್ಪಿಸಿ ಮತ್ತು ಅದರ ಬದಲಾಗಿ ಅಮೆರಿಕದ ಅನಿಲದ ಮೇಲೆ ಯುರೋಪ್ ಹೆಚ್ಚು ಅವಲಂಬಿತವಾಗುವಂತೆ ಮಾಡುವ ಉದ್ದೇಶವು 2022ರಲ್ಲಿ ನಾರ್ಡ್ ಸ್ಟ್ರೀಮ್ ಅನಿಲ ಪೈಪ್‌ಲೈನ್ (ಸಮುದ್ರ ತಳದಲ್ಲಿ ಹಾದು ಹೋಗುವ ಕೊಳವೆಗಳ ಮೂಲಕ ಅನಿಲವನ್ನು ರಷ್ಯಾದಿಂದ ಜರ್ಮನಿಗೆ ಸರಬರಾಜು ಮಾಡಲಾಗುತ್ತಿತ್ತು) ಸ್ಫೋಟದ ಹಿಂದಿರುವ ಕಾರಣಗಳಲ್ಲಿ ಒಂದು ಇದ್ದಿರಬಹುದು ಎಂದು ಹೇಳಲಾಗಿದೆ. ಈ ಸ್ಫೋಟವು ಸಿಐಎ ಕೈವಾಡವೆಂದು ಅಮೆರಿಕದ ಪತ್ರಕರ್ತ ಸೆಮೌರ್ ಹರ್ಷ್ ನಂಬುತ್ತಾರೆ. ಹಾಗಾಗಿ, ಅಮೆರಿಕದ ತೈಲ ಆಮದನ್ನು ನಿಷೇಧಿಸುವ ಚೀನಾದ ಕ್ರಮವು, ತನ್ನ ಇಂಧನ ಮೂಲಗಳಿಗೆ ರಫ್ತು ಮಾರುಕಟ್ಟೆಗಳನ್ನು ಕಂಡುಕೊಳ್ಳುವ ಮತ್ತು ಇಂಧನಕ್ಕಾಗಿ ದೇಶಗಳನ್ನು ತನ್ನ ಮೇಲೆ ಅವಲಂಬಿತವಾಗಿ ಮಾಡುವ ಅಮೆರಿಕದ ನೀತಿಗೆ ವಿರುದ್ಧವಾಗಿದೆ.

ಅಮೆರಿಕದ ತೈಲ ಆಮದಿನ ಮೇಲೆ ಚೀನಾ ಹೇರಿದ ನಿಷೇಧವು, ಚೀನಾದ ರಫ್ತಿನ ಮೇಲೆ ಅಮೆರಿಕ ಹೇರಿದ ವ್ಯಾಪಾರ ನಿರ್ಬಂಧಗಳ ವಿರುದ್ಧವಾಗಿ ಕೈಗೊಂಡ ಪ್ರತೀಕಾರದ ಕ್ರಮವೂ ಹೌದು ಮತ್ತು ತನ್ನ ಇಂಧನ ಅಗತ್ಯಗಳಿಗಾಗಿ ಅಮೆರಿಕದ ಮೇಲಿನ ಅವಲಂಬನೆಯನ್ನು ತಪ್ಪಿಸುವ ಸಾಧನವೂ ಹೌದು. ಮಾತ್ರವಲ್ಲ, ಕೈ–ತಿರುಚುವ ಪ್ರವೃತ್ತಿಯನ್ನು ರೂಢಿಸಿಕೊಂಡಿರುವ ಅಮೆರಿಕವು ಭವಿಷ್ಯದಲ್ಲಿ ತನಗೆ ಕೊಡಬಹುದಾದ ಕಿರುಕುಳದಿಂದ ತಪ್ಪಿಸಿಕೊಳ್ಳುವ ಮುಂಜಾಗ್ರತೆಯ ಕ್ರಮವೂ ಹೌದು.

ಅಮೆರಿಕದ ತೈಲ ಆಮದನ್ನು ನಿಲ್ಲಿಸಿದ್ದರಿಂದ ಉದ್ಭವವಾಗುವ ಕೊರತೆಯನ್ನು ಸರಿದೂಗಿಸಲು ಚೀನಾ ಹೊಂದಿರುವ ಪ್ರಸ್ತಾಪದ ವಿಧಾನವೂ ಗಮನಾರ್ಹವಾಗಿದೆ. ಈಗ ಅಮೆರಿಕದ ನಿರ್ಬಂಧಗಳಿಗೆ ಪ್ರಧಾನವಾಗಿ ಗುರಿಯಾಗಿರುವ ರಷ್ಯಾದಿಂದ, ಇರಾನ್‌ನಿಂದ ಮತ್ತು ವೆನೆಜುವೆಲಾದಿಂದ ಮಾಡಿಕೊಳ್ಳುವ ತೈಲದ ಬೃಹತ್ ಆಮದುಗಳ ಮೂಲಕ ಇದನ್ನು ಸರಿದೂಗಿಸಲಾಗುತ್ತದೆ. ನಿರ್ಬಂಧಗಳ ಕಾರಣದಿಂದಾಗಿ ಈ ದೇಶಗಳ ತೈಲವು ಈಗ



ಅಗ್ಗವಾಗಿ ಸಿಗುತ್ತದೆ. ಉದಾಹರಣೆಗೆ, ಅಮೆರಿಕದ ತೈಲಕ್ಕಿಂತ ಅಗ್ಗದ ದರದಲ್ಲಿ ರಷ್ಯಾದ ತೈಲವನ್ನು ಚೀನಾ ಆಮದು ಮಾಡಿಕೊಳ್ಳುತ್ತದೆ. ಹಾಗಾಗಿ, ಅಮೆರಿಕದ ಮೇಲಿನ ಅವಲಂಬನೆಯಿಂದ ಮುಕ್ತಿ ಪಡೆಯುವುದರ ಜೊತೆಗೆ ತೈಲವನ್ನು ಅಗ್ಗದ ಬೆಲೆಯಲ್ಲಿಯೂ ಪಡೆಯುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಯುರೋಪಿನ ಇಂಧನ ಮಾರುಕಟ್ಟೆಯನ್ನು ಹಿಡಿದುಕೊಳ್ಳುವ ಮೂಲಕ ಪ್ರಮುಖ "ವಿಜಯ" ಗಳಿಸಿದ ಅಮೆರಿಕವು ಚೀನಾದ ಮಾರುಕಟ್ಟೆಯನ್ನು ಕಳೆದುಕೊಳ್ಳುತ್ತದೆ ಮತ್ತು ಆ ಮೂಲಕ ಅದರ ಮೇಲೆ ಬೀರಬಹುದಿದ್ದ ಪ್ರಭಾವವನ್ನು ಕಳೆದುಕೊಳ್ಳುತ್ತದೆ.

ಟ್ರಂಪ್ ಕೋಪ

ಈ ಸನ್ನಿವೇಶದಲ್ಲಿ ಡೊನಾಲ್ಡ್ ಟ್ರಂಪ್ ಕೋಪ ವ್ಯಕ್ತಪಡಿಸುತ್ತಿದ್ದರೆ ಅದರಲ್ಲಿ ಆಶ್ಚರ್ಯವೇನಿಲ್ಲ. ಚೀನಾವು ಅಮೆರಿಕದ ವಿರುದ್ಧ ವ್ಯಾಪಾರ ಯುದ್ಧವನ್ನು ನಡೆಸುತ್ತಿದೆ ಎಂದು ಟ್ರಂಪ್ ಆರೋಪಿಸುತ್ತಾರೆ. ವಾಸ್ತವವೆಂದರೆ, ಬಹಳ ಸಮಯದಿಂದಲೂ ತನ್ನ ವಿರುದ್ಧ ಅಮೆರಿಕ ಪ್ರಾರಂಭಿಸಿದ ವ್ಯಾಪಾರ ಯುದ್ಧದ ವಿರುದ್ಧ ತನ್ನನ್ನು ತಾನು ರಕ್ಷಿಸಿಕೊಳ್ಳುವ ಕ್ರಮಗಳನ್ನು ಚೀನಾ ತೆಗೆದುಕೊಳ್ಳುತ್ತಿದೆ. ಈವರೆಗೂ ಅಸಹಾಯಕ ದೇಶಗಳನ್ನು ಅಮೆರಿಕ ನೇತೃತ್ವದ ಸಾಮ್ರಾಜ್ಯಶಾಹಿಯು ಹೇಳಿದ್ದನ್ನು ಕೇಳುವಂತೆ ಮಾಡುವ ಬೆದರಿಕೆಯ ಸಾಧನವಾಗಿದ್ದ ಅಮೆರಿಕದ ಏಕಪಕ್ಷೀಯ ಕ್ರಮಗಳು ಈಗ ಅಮೆರಿಕ ನೇತೃತ್ವದ ಸಾಮ್ರಾಜ್ಯಶಾಹಿಯ ಆರ್ಥಿಕ ಪ್ರಾಬಲ್ಯವನ್ನು ಸಡಿಲಗೊಳಿಸುವ ಅಂತಾರಾಷ್ಟ್ರೀಯ ಹೊಸ ಹೊಸ ಏರ್ಪಾಟುಗಳಿಗೆ ಕಾರಣವಾಗುತ್ತಿವೆ. ಅಮೆರಿಕದ ಕ್ರಮಗಳಿಗೆ ಕೆಲವೇ ಬೆರಳೆಣಿಕೆಯಷ್ಟು ದುರದೃಷ್ಟವಂತ ಸಣ್ಣ ದೇಶಗಳು ಗುರಿಯಾಗಿದ್ದಾಗ ಅವು ಪರಿಣಾಮಕಾರಿಯಾಗಿದ್ದವು ಮತ್ತು ಗುರಿಯಾಗಿಸಿಕೊಂಡ ದೇಶಗಳು ಬಲವಂತದಿಂದ ಸಾಮ್ರಾಜ್ಯಶಾಹಿ ಪ್ರಾಬಲ್ಯಕ್ಕೆ ಅಧೀನವಾಗುತ್ತಿದ್ದವು. ಆದರೆ ಅಂತಹ ಕ್ರಮಗಳು ದೊಡ್ಡ ದೊಡ್ಡ ದೇಶಗಳನ್ನು ಗುರಿಯಾಗಿಸಿಕೊಂಡಾಗ, ಅವಕ್ಕೆ ಪರ್ಯಾಯ ವ್ಯವಸ್ಥೆಯೇ ಹೊರಹೊಮ್ಮಲು ಪ್ರಾರಂಭವಾಗುತ್ತದೆ. ವಿಶ್ವದ ಮೂರನೇ ಒಂದು ಭಾಗದಷ್ಟು ದೇಶಗಳ ವಿರುದ್ಧ ಬಹಿರಂಗವಾಗಿ ಪ್ರಯೋಗಿಸಿದರೆ ಸಾಮ್ರಾಜ್ಯವಾದೀ ಯಜಮಾನಿಕೆಯೇ ಅಲುಗಾಡುತ್ತದೆ.

ಇವೆಲ್ಲವೂ ಡಾಲರ್ ವಹಿಸುತ್ತಿದ್ದ ಪಾತ್ರದ ಮೇಲೆ ಪರಿಣಾಮ ಬೀರುತ್ತವೆ. ರಷ್ಯಾದಿಂದ, ಇರಾನ್‌ನಿಂದ ಮತ್ತು ವೆನೆಜುವೆಲಾದಿಂದ ಇಂಧನವನ್ನು ಚೀನಾ ಆಮದು ಮಾಡಿಕೊಳ್ಳುವುದರಿಂದ, ಬ್ರಿಕ್ಸ್ ಸದಸ್ಯ ದೇಶಗಳ ನಡುವೆ ವ್ಯಾಪಾರ ವೃದ್ಧಿಸುತ್ತದೆ. ರಷ್ಯಾ ಮತ್ತು ಇರಾನ್ ಈಗಾಲೇ ಬ್ರಿಕ್ಸ್ ಸಂಘಟನೆಯ ಸದಸ್ಯ ದೇಶಗಳು. ಮುಂದಿನ ದಿನಗಳಲ್ಲಿ ಬ್ರಿಕ್ಸ್ ಸದಸ್ಯತ್ವ ಪಡೆಯುವ ಆಶಯವನ್ನು ವೆನೆಜುವೆಲಾ ಹೊಂದಿದೆ. ಆದ್ದರಿಂದ ಈ ದೇಶಗಳ ನಡುವಿನ ವ್ಯಾಪಾರದಲ್ಲಿ ಯುಎಸ್ ಡಾಲರ್‌ಗಳು ಬಳಕೆಯಾಗುವುದಿಲ್ಲ. ಬ್ರಿಕ್ಸ್ ದೇಶಗಳ ನಡುವಿನ ಕರೆನ್ಸಿ ವ್ಯವಸ್ಥೆಯ ಅಂತಿಮ ರೂಪವು ಇನ್ನೂ ಒಂದು ಮುಕ್ತ ಪ್ರಶ್ನೆಯಾಗಿ ಉಳಿದಿದ್ದರೂ ಸಹ, ಬ್ರಿಕ್ಸ್ ದೇಶಗಳ ನಡುವಿನ ವ್ಯಾಪಾರವು

ಪುಟ 14 ಕ್ಕೆ

ಕಟ್ಟಡ ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಧನಸಹಾಯ ಪಾವತಿಗೆ ಹೈಕೋರ್ಟ್ ತೀರ್ಪು........ ಪುಟ 11 ರಿಂದ

ಮಂಡಳಿಯ ಅಧಿಕಾರಿಗಳ ಐಷಾರಾಮಿ ಓಡಾಟಕ್ಕಲ್ಲ" ಎಂದು ಅತೃಪ್ತಿ ವ್ಯಕ್ತಪಡಿಸಿದರು. ಅಲ್ಲದೆ ಮಂಡಳಿಯಲ್ಲಿ ಸಂಗ್ರಹವಿರುವ ರೂ. 6,700 ಕೋಟಿ ಹಣದ ವಿವರಗಳನ್ನು ಪೀಠದ ಮುಂದೆ ಮಂಡಿಸಲು ತಾಕೀತು ಮಾಡಿ ವಿಚಾರಣೆಯನ್ನು ಮುಂದೂಡಿದ್ದರು.

ವಿಚಾರಣೆ ವೇಳೆ ರಾಜ್ಯ ಸರ್ಕಾರ ಹಾಗೂ ಕಲ್ಯಾಣ ಮಂಡಳಿಯನ್ನು ಪ್ರತಿನಿಧಿಸಿ ಹಾಜರಾಗಿದ್ದ ಸರ್ಕಾರದ ಅಡ್ವೋಕೇಟ್ ಜನರಲ್ ಶಶಿಕಿರಣ ಶೆಟ್ಟಿ ಅವರು, "ಕಲ್ಯಾಣ ಮಂಡಳಿಯು ಈಗಾಗಲೇ 6 ಲಕ್ಷ ವಿದ್ಯಾರ್ಥಿಗಳಿಗೆ ರೂ. 500 ಕೋಟಿ ಶೈಕ್ಷಣಿಕ ಧನಸಹಾಯ ವಿತರಿಸಿದೆ. ಅಲ್ಲದೆ ಮಂಡಳಿಯಲ್ಲಿ 19 ಇತರೆ ಕಲ್ಯಾಣ ಕಾರ್ಯಕ್ರಮಗಳನ್ನು ಕಟ್ಟಡ ಕಾರ್ಮಿಕರಿಗಾಗಿ ಜಾರಿಗೊಳಿಸುತ್ತಿದೆ. ಆದ್ದರಿಂದ 2021ರ ಅಧಿಸೂಚನೆ ಅನ್ವಯ ಶೈಕ್ಷಣಿಕ ಧನಸಹಾಯ ನೀಡಲು ಕಷ್ಟವಾಗಲಿದೆ" ಎಂದು ವಾದಿಸಿದರು. ಆದರೆ ಅವರ ವಾದವನ್ನು ಒಪ್ಪದ ನ್ಯಾಯಮೂರ್ತಿಗಳು "ರಾಜ್ಯದಲ್ಲಿ ನಿರ್ಮಾಣ ಕಾಮಗಾರಿಗಳಿಂದ ಸಂಗ್ರಹವಾಗುವ ಸೆಸ್ ಹಣ ಕಾರ್ಮಿಕರ ಕಲ್ಯಾಣ ಮತ್ತು ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಖರ್ಚುಮಾಡಬೇಕಲ್ಲವೇ" ಎಂದು ಪ್ರಶ್ನಿಸಿದ್ದರು.

ನಿಗದಿಗಿಂತ ಹೆಚ್ಚು ಖರ್ಚು: ಸಿಎಜಿ ವರದಿ ಉಲ್ಲೇಖಿಸಿ ವಾದ

ಸರ್ಕಾರದ ಅಡ್ವೋಕೇಟ್ ಜನರಲ್ ವಾದಕ್ಕೆ ಪ್ರತಿಯಾಗಿ ಅರ್ಜಿದಾರರ ಪರ ವಕೀಲ ಆದಿತ್ಯ ಚಟರ್ಜಿ ಅವರು, 2019ರ ಕಂಟ್ರೋಲರ್ ಅಂಡ್ ಆಡಿಟರ್ ಜನರಲ್ (ಸಿಎಜಿ) ವರದಿಯ ಅನುಸಾರ ಕರ್ನಾಟಕ ಕಟ್ಟಡ ನಿರ್ಮಾಣ ಕಲ್ಯಾಣ ಮಂಡಳಿಯು ತನ್ನ ಆಡಳಿತಾತ್ಮಕ ವೆಚ್ಚವನ್ನು ಕಾನೂನಾತ್ಮಕವಾಗಿ ನಿಗದಿಪಡಿಸಿದ ಶೇ. 5ರಷ್ಟನ್ನು ಮೀರಿ ಶೇ. 9ರಿಂದ ಶೇ. 72ರಷ್ಟು ಹೆಚ್ಚಾಗಿ ಖರ್ಚು ಮಾಡಿದೆ. ಘಟನೋತ್ತರ ಅನುಮೋದನೆ ಮೂಲಕ ಮಂಡಳಿಯು ಇನ್ನೋವಾ ಕಾರುಗಳನ್ನು ಖರೀದಿಸಿದ್ದು, ಮಂಡಳಿಯ ನಿಧಿಯನ್ನು ಅನಗತ್ಯವಾಗಿ ಖರ್ಚು ಮಾಡಿದೆ ಎಂಬ ಅಂಶವನ್ನು ಪೀಠದ ಗಮನಕ್ಕೆ ತಂದರು.

ಶೀಘ್ರ ಕ್ರಮ ಕೈಗೊಳ್ಳಿ: ಜನವರಿ 10ರಂದು ಹೈಕೋರ್ಟ್ ತೀರ್ಪು:

ಶೈಕ್ಷಣಿಕ ಧನಸಹಾಯ ಕೋರಿ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಕಲ್ಯಾಣ ಮಂಡಳಿಗೆ ಅರ್ಜಿ ಸಲ್ಲಿಸಿರುವ ಎಲ್ಲ ಮಕ್ಕಳಿಗೆ 2021ರ ಅಧಿಸೂಚನೆ ಅನ್ವಯ ಬಾಕಿ ಇರುವ ಮೂರು ವರ್ಷಗಳ ಶೈಕ್ಷಣಿಕ ಧನಸಹಾಯ ವಿತರಿಸಲು ತ್ವರಿತಗತಿಯಲ್ಲಿ ಕ್ರಮ ಕೈಗೊಳ್ಳಬೇಕು ಎಂದು ರಾಜ್ಯ ಸರ್ಕಾರಕ್ಕೆ ಕರ್ನಾಟಕ ಹೈಕೋರ್ಟ್ ಜನವರಿ 10, 2025ರಂದು ತೀರ್ಪು ನೀಡಿದೆ

ವಿದ್ಯಾರ್ಥಿಗಳು 2020–21, 2021–22 ಹಾಗೂ 2022–23ನೇ ಸಾಲಿನಲ್ಲಿ ಕೋರಿರುವ ಶೈಕ್ಷಣಿಕ ಸಹಾಯಧನವನ್ನು 2021ರ ಅಧಿಸೂಚನೆ ಅನ್ವಯವೇ ಬಿಡುಗಡೆ ಮಾಡಬೇಕು. ಅಂತೆಯೇ, ಈ ಆದೇಶವನ್ನು ಜಾರಿಗೊಳಿಸಲು ಅಗತ್ಯ ಕ್ರಮವಹಿಸಬೇಕು ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಕೋರ್ಟ್ ನಿರ್ದೇಶಿಸಿದೆ. ಅಲ್ಲದೇ, 2023ರ ಸರ್ಕಾರದ ಅಧಿಸೂಚನೆಯನ್ನು ರದ್ದುಗೊಳಿಸಿರುವ ಪೀಠವು ಈ ಹಿಂದಿನ 2021ರ ಅಧಿಸೂಚನೆ ಪ್ರಕಾರವೇ ವಿದ್ಯಾರ್ಥಿ ವೇತನ ಪಾವತಿಸುವಂತೆ ಆದೇಶಿಸಿದೆ.

ಶೈಕ್ಷಣಿಕ ಸಹಾಯಧನದ ಮೊತ್ತವನ್ನು ಪರಿಷ್ಕರಿಸುವಾಗ ಕಲ್ಯಾಣ ಮಂಡಳಿಯಾಗಲಿ ಅಥವಾ ಸರ್ಕಾರವಾಗಲೀ ಹೈಕೋರ್ಟ್‌ನ ಈ ಆದೇಶಕ್ಕೆ ಅನುಗುಣವಾಗಿ ಸೂಕ್ತ ಬದಲಾವಣೆ ಮಾಡಿಕೊಳ್ಳಬಹುದು ಎಂದು ನಿರ್ದೇಶಿಸಿದ ಪೀಠವು, "ಶೈಕ್ಷಣಿಕ ನೆರವಿನ ಯಾವುದೇ ಪರಿಷ್ಕರಣೆಯ ವೇಳೆ ಕಟ್ಟಡ ಕಾರ್ಮಿಕರು ಮತ್ತು ಅವರ ಕುಟುಂಬಗಳ ಕಲ್ಯಾಣವೇ ಆತ್ಯಂತಿಕ ಆದ್ಯತೆ ಆಗಿರುತ್ತದೆ ಎಂಬುದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು ಮತ್ತು ಪ್ರತಿಯೊಬ್ಬ ವಿದ್ಯಾರ್ಥಿಯನ್ನು ನ್ಯಾಯಾಲಯಕ್ಕೆ ಅಲೆದಾಡದಂತೆ ಭವಿಷ್ಯದಲ್ಲಿ ನೋಡಿಕೊಳ್ಳಬೇಕು" ಎಂದು ಎಚ್ಚರಿಸಿದೆ.

ಮೂರು ತಿಂಗಳೊಳಗೆ ವರದಿ ಮಂಡಿಸಲು ಸಿಎಜಿ ಗೆ ಸೂಚನೆ

ಮಹಾಲೆಕ್ಕ ಪರಿಶೋಧಕ ಮತ್ತು ಮಹಾಲೇಖಪಾಲರು (ಸಿಎಜಿ) ಮೂರು ತಿಂಗಳ ಒಳಗಾಗಿ ಕಲ್ಯಾಣ ಮಂಡಳಿಯ ಲೆಕ್ಕಪರಿಶೋಧನೆ ಮಾಡಿಸಿ ಅದರ ವರದಿಯನ್ನು ಹೈಕೋರ್ಟ್‌ಗೆ ಸಲ್ಲಿಸಬೇಕು ಎಂದು ಸಿಎಜಿಗೆ ನ್ಯಾಯಾಲಯ ಸೂಚಿಸಿದೆ. ಅಂತೆಯೇ, ಈ ಕುರಿತಂತೆ ಭಾರತದ ಹೆಚ್ಚುವರಿ ಸಾಲಿಸಿಟರ್ ಜನರಲ್ ಅವರು ಸಿಎಜಿಯಿಂದ ವರದಿ ಸಂಗ್ರಹಿಸಬೇಕು, ಈ ವರದಿ ಬಂದ ಕೂಡಲೇ ವಿಳಂಬ ಮಾಡದೆ ಪ್ರಕರಣವನ್ನು ವಿಚಾರಣೆಗೆ ಮರು ನಿಗದಿಗೊಳಿಸಬೇಕು ಎಂದು ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರಿಗೆ ತಾಕೀತು ಮಾಡಿದೆ.

ಹಕ್ಕುಗಳಿಗಾಗಿ ಹೋರಾಟ ಮುಂದುವರಿಸೋಣ

ಹೈಕೋರ್ಟ್‌ನ ಈ ತೀರ್ಪು ಕಟ್ಟಡ ಕಾರ್ಮಿಕರ ಹೋರಾಟಕ್ಕೆ ದೊರೆತ ಐತಿಹಾಸಿಕ ಜಯವಾಗಿದೆ. ಹೋರಾಡಿ ಗಳಿಸಿಕೊಂಡಿರುವ ಈ ಕಲ್ಯಾಣ ಮಂಡಳಿಯನ್ನು ರಕ್ಷಿಸಿಕೊಳ್ಳಲು ಮತ್ತು ಕಲ್ಯಾಣ ಮಂಡಳಿಯಲ್ಲಿನ ಭ್ರಷ್ಟಾಚಾರ ತಡೆಗಟ್ಟಲು, ನೈಜ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಮಾತ್ರ ಮಂಡಳಿಯಲ್ಲಿನ ನಿಧಿ ಬಳಕೆಯಾಗುವಂತೆ ನೋಡಿಕೊಳ್ಳಲು ಕಟ್ಟಡ ಕಾರ್ಮಿಕರು ನಿರಂತರವಾಗಿ, ಮತ್ತಷ್ಟು ಬಲಗೊಂಡು ಹೋರಾಟ ನಡೆಸಬೇಕಾಗಿದೆ. ಇದುವರೆಗೂ ಮಂಡಳಿಯಲ್ಲಿ ನೊಂದಾಯಿತರಾಗದ (ಲೇಬರ್ ಕಾರ್ಡ್ ಮಾಡಿಸದ) ಲಕ್ಷಾಂತರ ಕಟ್ಟಡ ಕಾರ್ಮಿಕರನ್ನು ನೊಂದಾಯಿತರಾಗುವಂತೆ ಮಾಡುವ ಜವಾಬ್ಧಾರಿಯೂ ನಮ್ಮೆಲ್ಲರ ಮೇಲಿದೆ. ❍

ಅಮೇರಿಕಾದ ಆರ್ಥಿಕ ಪ್ರಾಬಲ್ಯ ಅಲುಗಾಡುತ್ತಿದೆ... ಪುಟ 13 ರಿಂದ

ಡಾಲರ್ ಕರೆನ್ಸಿಯಲ್ಲಿ ನಮೂದಿತವಾಗುವುದಿಲ್ಲ ಎಂಬುದಂತೂ ಸ್ಪಷ್ಟವಾಗಿದೆ. ಇದು ಬ್ರಿಕ್ಸ್ ದೇಶಗಳ ಕಜಾನ್ ಶೃಂಗಸಭೆಯ ಸಂದೇಶವೂ ಹೌದು. ಯುಎಸ್‌ನಿಂದ ತೈಲ ಆಮದುಗಳನ್ನು ನಿಷೇಧಿಸುವ ಚೀನಾದ ಕ್ರಮವು ಬ್ರಿಕ್ಸ್ ಸದಸ್ಯ ದೇಶಗಳ ನಡುವೆ ವ್ಯಾಪಾರವನ್ನು ವಿಸ್ತರಿಸುವುದು ಮಾತ್ರವಲ್ಲದೆ, ಡಾಲರ್ ಹೊಂದಿರುವ ಪ್ರಾಬಲ್ಯದ ಸ್ಥಾನವನ್ನು ದುರ್ಬಲಗೊಳಿಸಲು ಸಹಾಯವಾಗುವ ಪರ್ಯಾಯ ಕರೆನ್ಸಿ ವ್ಯವಸ್ಥೆಯನ್ನು ಬಲಪಡಿಸುತ್ತದೆ. ಖಚಿತವಾಗಿ ಹೇಳುವುದಾದರೆ, ಡಾಲರ್‌ನ ಸ್ಥಾನಪಲ್ಲಟವು ರಾತ್ರೋರಾತ್ರಿ ಸಂಭವಿಸುವುದಿಲ್ಲ. ಅದರ ಪ್ರಾಬಲ್ಯವು ದುರ್ಬಲಗೊಳ್ಳುತ್ತಾ ಹೋಗುತ್ತದೆ.

ವಿಮೋಚನಾಕಾರಿ ಆಗಬಹುದಾದ ಬೆಳವಣಿಗೆ

ಇದೊಂದು ವಿಮೋಚನಾಕಾರಿಯಾಗುವ ಸಾಧ್ಯತೆ ಇರುವ ಬೆಳವಣಿಗೆ. ಜಾಗತಿಕ ದಕ್ಷಿಣವನ್ನು ತನ್ನ ಬಿಗಿ ಹಿಡಿತದಲ್ಲಿ ಇಟ್ಟುಕೊಂಡಿರುವ ನವ ಉದಾರವಾದಿ ಆಳ್ವಿಕೆಯು ಮುಂದೆ ದಾರಿ ಕಾಣದ ಒಂದು ಹಂತವನ್ನು ತಲುಪಿದೆ, ಇದು ಅಲ್ಲಿನ ದುಡಿಯುವ ಜನರ ಸಂಕಷ್ಟವನ್ನು ಹೆಚ್ಚಿಸುತ್ತಿದೆ. ನವ ಉದಾರವಾದಿ ವ್ಯವಸ್ಥೆಯೊಳಗೇ ನವ ಉದಾರವಾದದ ಬಿಕ್ಕಟ್ಟಿನ ಅಂತ್ಯದ ಪ್ರಶ್ನೆಯೇ ಇಲ್ಲದಿದ್ದರೂ, ಈ ವ್ಯವಸ್ಥೆಯಿಂದ ಹೊರಬರುವ ಸಂಕ್ರಮಣ ಕಾಲದಲ್ಲಿ ಉಂಟಾಗುವ ನೋವು ಗಣನೀಯವಾಗಿರುತ್ತದೆ, ಅದರಲ್ಲೂ ತಮ್ಮ ಹಿತದೃಷ್ಟಿಯಲ್ಲಿ ವ್ಯವಸ್ಥೆಯಿಂದ ಹೊರಬರುವುದು ಅನಿವಾರ್ಯವಾಗಿರುವ ಜನರಿಗೆ ಈ ನೋವು ನಿರ್ದಿಷ್ಟವಾಗಿ ಗಣನೀಯವಾಗಿರುತ್ತದೆ. ಈ ನೋವು ನವ ಉದಾರವಾದದ ಸಹಜ ಕಾರ್ಯಾಚರಣೆಯಿಂದಾಗಿ ಮತ್ತು ಅಂತಹ ಸಹಜ ಕ್ರಮಗಳನ್ನು ಬೆಂಬಲಿಸುವ ಸಾಮ್ರಾಜ್ಯಶಾಹಿ ನಿರ್ಬಂಧಗಳಿಂದಾಗಿಯೂ ಉಂಟಾಗುತ್ತದೆ. ಈ ಅಂಶವನ್ನು ಹೀಗೆ ವಿವರಿಸಬಹುದು: ಜಾಗತಿಕ ದಕ್ಷಿಣದ ಯಾವುದೇ ದೇಶವು ತನ್ನ ರಾಷ್ಟ್ರ–ಪ್ರಭುತ್ವದ ಸ್ವಾಯತ್ತತೆಯನ್ನು ಹಿಂದಿರುಗಿ ಪಡೆಯಲು ಬಂಡವಾಳದ ಹರಿದಾಟದ ಮೇಲೆ ನಿಯಂತ್ರಣಗಳನ್ನು ಹೇರಬೇಕಾಗುತ್ತದೆ ಮತ್ತು ಈ ಮೂಲಕ ಬಂಡವಾಳವು ಹೊರ ಹರಿಯುವ ಭಯವಿಲ್ಲದೆ ಆ ದೇಶವು ಒಂದು ಜನಪರ ಆರ್ಥಿಕ ಕಾರ್ಯಸೂಚಿಯನ್ನು ಅನುಸರಿಸಬಹುದು. ಆ ಪರಿಸ್ಥಿತಿಯಲ್ಲಿ, ಅದು ಇನ್ನು ಮುಂದೆ ಕೆಲ ಕಾಲದವರೆಗೆ ತನ್ನ ವ್ಯಾಪಾರ ಕೊರತೆಯನ್ನು ಸರಿದೂಗಿಸುವುದು ಸಾಧ್ಯವಿಲ್ಲ ಎಂಬುದನ್ನು ಕಂಡುಕೊಳ್ಳುತ್ತದೆ. ಏಕೆಂದರೆ, ಬಂಡವಾಳದ ಹರಿದಾಟದ ಮೇಲೆ ಆ ದೇಶವು ಹೇರಿದ ನಿಯಂತ್ರಣಗಳಿಂದಾಗಿ, ಹಣಕಾಸು ಹರಿದು ಬರುವುದಿಲ್ಲ. ಆಗ, ಹೊರ ದೇಶಗಳೊಂದಿಗಿನ ವ್ಯಾಪಾರದ ಮೇಲೆ ನಿಯಂತ್ರಣಗಳನ್ನು ಹೇರಬೇಕಾಗುತ್ತದೆ. ಈ ಕ್ರಮವು ದೇಶದೊಳಗೆ ಸರಕುಗಳ ಲಭ್ಯತೆಯನ್ನು ಕಡಿಮೆ ಮಾಡುತ್ತದೆ. ಹಾಗಾಗಿ ಈ ಬದಲಾವಣೆಯ ಅವಧಿಯಲ್ಲಿ ದುಡಿಯುವ ಜನರಿಂದ ಉಂಟಾಗುವ ಬೇಡಿಕೆಯು ಮತ್ತಷ್ಟು ಕುಗ್ಗುತ್ತದೆ.

ಆದಾಗ್ಯೂ, ಒಂದು ಪರ್ಯಾಯ ವ್ಯಾಪಾರ ವ್ಯವಸ್ಥೆಯನ್ನು ಮತ್ತು ಒಂದು ಪರ್ಯಾಯ ಕರೆನ್ಸಿ ವ್ಯವಸ್ಥೆಯನ್ನು ಹೊಂದುವ ಮೂಲಕ, ಅದರಲ್ಲೂ ವಿಶೇಷವಾಗಿ, ತನ್ನ ಕಾಲದಲ್ಲಿ ಸೋವಿಯತ್ ಒಕ್ಕೂಟವು ಜಾಗತಿಕ ದಕ್ಷಿಣದ ಅನೇಕ ದೇಶಗಳೊಂದಿಗೆ ಹೊಂದಿದ್ದ ದ್ವಿಪಕ್ಷೀಯ ವ್ಯಾಪಾರ ವ್ಯವಸ್ಥೆಗಳ ರೂಪವನ್ನು ಪಡೆದರೆ, ಈ ಸಂಕ್ರಮಣ ಕಾಲದ ನೋವನ್ನು ಕಡಿಮೆ ಮಾಡಬಹುದು. ಆದ್ದರಿಂದ ನವ ಉದಾರವಾದೀ ವ್ಯವಸ್ಥೆಯಿಂದ ಹೊರಬರುವ ಸಾಧ್ಯತೆ ಹೆಚ್ಚುತ್ತಿದೆ ಮತ್ತು ತೈಲ ಆಮದಿನ ಪರ್ಯಾಯ ವ್ಯವಸ್ಥೆಗಳನ್ನು ರೂಪಿಸಿರುವ ಚೀನಾದ ಕ್ರಮವು ಈ ಸಂಭಾವ್ಯತೆಯನ್ನು ತೋರುತ್ತಿದೆ. ❍

ಮೂರು ಕರಾಳ ಕೃಷಿ ಕಾನೂನು... ಪುಟ 12 ರಿಂದ

ಪ್ರಶ್ನಿಸುವುದು ಅಗತ್ಯವಾಗುತ್ತದೆ ಎಂದು ಹೇಳಿದೆ.

ಕೃಷಿ ಮಾರುಕಟ್ಟೆ ಕುರಿತ ಕರಡು ರಾಷ್ಟ್ರೀಯ ನೀತಿ ಚೌಕಟ್ಟು

ಈ ನೀತಿ ಚೌಕಟ್ಟು ರೈತರ ಆಂದೋಲನದಿಂದಾಗಿ ಹಿಂತೆಗೆದುಕೊಳ್ಳಲಾದ ಮೂರು ಕೃಷಿ ಕಾನೂನುಗಳ ಅಂಶಗಳನ್ನು ಮರಳಿ ತರುವ ಪ್ರಯತ್ನವಾಗಿದೆ ಎಂದು ಕೇಂದ್ರ ಸಮಿತಿ ಹೇಳಿದೆ. ಈ ಕರಡು ಖಾಸಗಿ ಸಗಟು ಮಾರುಕಟ್ಟೆಗಳ ಸ್ಥಾಪನೆ, ಕಾರ್ಪೊರೇಟ್ ಸಂಸ್ಕರಣಾಕಾರರು ಮತ್ತು ರಫ್ತುದಾರರಿಂದ ನೇರವಾಗಿ ಗದ್ದೆಗಳಿಂದಲೇ ಖರೀದಿಗಳು, ಸಾಂಪ್ರದಾಯಿಕ ಮಾರುಕಟ್ಟೆ ಯಾರ್ಡ್‌ಗಳನ್ನು ಕಾರ್ಪೊರೇಟ್ ನಿಯಂತ್ರಣದೊಂದಿಗೆ ಬದಲಾಯಿಸುವುದು, ಗೋದಾಮು ಮತ್ತು ಅಗೇವುಗಳು ಮತ್ತು ಏಕೀಕೃತ ರಾಜ್ಯವ್ಯಾಪಿ ಮಾರುಕಟ್ಟೆ ಶುಲ್ಕ ಮತ್ತು ವ್ಯಾಪಾರ ಪರವಾನಗಿ ವ್ಯವಸ್ಥೆಯನ್ನು ಪರಿಚಯಿಸುವ ಬಗ್ಗೆ ಪ್ರಸ್ತಾಪಿಸುತ್ತದೆ. ದೊಡ್ಡ ಕಾರ್ಪೊರೇಟ್‌ಗಳು ಎಪಿಎಂಸಿ ಮಾರುಕಟ್ಟೆ ಯಾರ್ಡ್‌ಗಳನ್ನು ಬದಿಗೊತ್ತಿ ರೈತರಿಂದ ನೇರವಾಗಿ ಉತ್ಪನ್ನಗಳನ್ನು ಖರೀದಿಸಬಹುದು ಎಂದು ಈ ಕರಡು ಪ್ರಸ್ತಾಪಿಸುತ್ತದೆ.

ಈ ಕರಡು ನೀತಿಯ ವಿರುದ್ಧ ಕಿಸಾನ್ ಸಭಾ ಮತ್ತು ಸಂಯುಕ್ತ ಕಿಸಾನ್ ಮೋರ್ಚಾ ಪ್ರಾರಂಭಿಸಿರುವ ಆಂದೋಲನಕ್ಕೆ ಕೇಂದ್ರ ಸಮಿತಿಯು ತನ್ನ ಸಂಪೂರ್ಣ ಬೆಂಬಲವನ್ನು ನೀಡಿದೆ. ಈ ನೀತಿಯ ವಿರುದ್ಧ ಪ್ರತಿಭಟನೆಗೆ ಜನರನ್ನು ಸಜ್ಜುಗೊಳಿಸಲು ಅದು ಪಕ್ಷದ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ಚುನಾವಣಾ ಆಯೋಗದ ನಿಯಮಗಳು

ಚುನಾವಣಾ ಆಯೋಗವು ಚುನಾವಣಾ ನಿಯಮಗಳಲ್ಲಿ ಏಕಪಕ್ಷೀಯವಾಗಿ ಬದಲಾವಣೆಗಳನ್ನು ಘೋಷಿಸಿದೆ, ಇದು ರಾಜಕೀಯ ಪಕ್ಷಗಳು, ಅಭ್ಯರ್ಥಿಗಳು ಮತ್ತು ಕಾಳಜಿಯಿರುವ ನಾಗರಿಕರಿಗೆ ವೀಡಿಯೊ ಮತ್ತು ಇತರ ಡಿಜಿಟಲ್ ಹಾದಿಗಳು ಸೇರಿದಂತೆ ಎಲೆಕ್ಟ್ರಾನಿಕ್ ದಾಖಲೆಗಳು ಲಭ್ಯವಾಗದಂತೆ ಕಸಿದುಕೊಳ್ಳುತ್ತದೆ. ಚುನಾವಣಾ ಆಯೋಗದ ಈ ಪ್ರತಿಗಾಮಿ ಹೆಜ್ಜೆ ಚುನಾವಣಾ ಪ್ರಕ್ರಿಯೆಯ ನ್ಯಾಯಸಮ್ಮತತೆಯ ಮೇಲೆ ಮತ್ತೊಂದು ದಾಳಿಯಾಗಿದೆ ಎಂದು ಕೇಂದ್ರ ಸಮಿತಿ ಖಂಡಿಸಿದೆ.

ಈ ವಿಷಯವನ್ನು ಚರ್ಚಿಸಲು ಮತ್ತು ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳಲು ಎಲ್ಲಾ ರಾಜಕೀಯ ಪಕ್ಷಗಳ ಸಭೆಯನ್ನು ಕರೆಯುವಂತೆ ಕೇಂದ್ರ ಸಮಿತಿಯು ಚುನಾವಣಾ ಆಯೋಗಕ್ಕೆ ಕರೆ ನೀಡಿದೆ. ❍

ನಾರಾಯಣ ಗುರುಗಳು.... ಪುಟ 15 ರಿಂದ

ಅನೇಕ ಸ್ಥಳಗಳಲ್ಲಿ, ಧರ್ಮದ ಹೆಸರಿನಲ್ಲಿ ರಾಜಕೀಯ ಮಾಡುವುದು ಸಾಮಾಜಿಕ ಬದಲಾವಣೆ ಮತ್ತು ರಾಜಕೀಯ ಮೌಲ್ಯಗಳಲ್ಲಿನ ಬದಲಾವಣೆಗೆ ವಿರುದ್ಧವಾಗಿದೆ.

ಸಾಂಪ್ರದಾಯಿಕ "ಯಥಾಸ್ಥಿತಿ" ಸಾಮಾಜಿಕ ಪ್ರಗತಿಗೆ ಅಡ್ಡಿ

ಕೇರಳವು ವಿವಿಧ ಕ್ಷೇತ್ರಗಳಲ್ಲಿ ಹಲವು ವೈರುಧ್ಯಗಳನ್ನು ಹೊಂದಿದೆ. ಇಲ್ಲಿಯೇ ಶಂಕರಾಚಾರ್ಯರು, ವಾದ ಪ್ರತಿವಾದಗಳಲ್ಲಿ ಬೌದ್ಧರನ್ನು ಎದುರಿಸಿದರು. ಬೌದ್ಧರು ಲೌಕಿಕ ಸಮಸ್ಯೆಗಳ ಮೇಲೆ ಗಮನ ಕೇಂದ್ರೀಕರಿಸಲು ಭೌತಿಕವಾದದ ಆಧಾರದ ಮೇಲೆ ವಾದಿಸಿದರು. ಅದೇ ರೀತಿ, ಶಂಕರರು ಇಡೀ ಜಗತ್ತು ಒಂದು ಭ್ರಮೆ ಎಂದು ವಾದಿಸಲು ಪ್ರಯತ್ನಿಸುವ ಮೂಲಕ ಆದರ್ಶವಾದಿ ತತ್ತ್ವಶಾಸ್ತ್ರವನ್ನು ಪ್ರತಿಪಾದಿಸಿದರು.

ಇಂದಿನ ಭಾರತದಲ್ಲಿ ಕೇರಳವೂ ಸೇರಿದಂತೆ ನಾರಾಯಣ ಗುರು, ಕಬೀರ್ ಅವರಂತಹ ಸಂತರ ಮಾರ್ಗವನ್ನು ಅನುಸರಿಸುವ ಅವಶ್ಯಕತೆಯಿದೆ. ಅವರ ಮಾನವೀಯ ಮೌಲ್ಯಗಳು ಸಮಾಜದಲ್ಲಿ ಸೌಹಾರ್ದ ಸಂಬಂಧಗಳ ಹಾದಿಗೆ ಮಾರ್ಗದರ್ಶನ ನೀಡಿವೆ. ಅನೇಕ ವಿಷಯಗಳಲ್ಲಿ, ಸಾಂಪ್ರದಾಯಿಕ "ಯಥಾಸ್ಥಿತಿ" ಸಾಮಾಜಿಕ ಪ್ರಗತಿಗೆ ಅಡ್ಡಿಯಾಗುತ್ತದೆ.

ಕೃಪೆ: ನ್ಯೂಸ್‌ಕ್ಲಿಕ್ ಅನು:ಸಿಚಿ

ಟ್ರಂಪ್ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಮೊದಲ ದಿನವೇ ಸುಗ್ರೀವಾಜ್ಞೆಗಳ ಮಹಾಪೂರ ಹರಿದಿದೆ. ಯು.ಎಸ್.ನಲ್ಲಿ 'ಅಧ್ಯಕ್ಷೀಯ ಕಾರ್ಯಕಾರಿ ಆಜ್ಞೆ'ಗಳು ಎಂದು ಕರೆಯಲಾಗುವ ಸುಮಾರು ನೂರರಷ್ಟು ಸುಗ್ರೀವಾಜ್ಞೆಗಳನ್ನು ಟ್ರಂಪ್ ಆಗಲೇ ಮಾಡಿದ್ದಾರೆ. ಇವುಗಳಲ್ಲಿ ಪ್ರಮುಖವಾದವು: ಕಾನೂನುಬಾಹಿರ ವಲಸೆ ಮತ್ತು ವಲಸೆಗಾರರ ಮೇಲೆ ಕಠಿಣ ಕ್ರಮಗಳು, ಯು.ಎಸ್. ನಾಗರಿಕತೆ, ಇಂಧನ ಮತ್ತು ಪರಿಸರ ನೀತಿಗಳು, ಸಾಮಾಜಿಕ ನ್ಯಾಯದ ಕ್ರಮಗಳ ರದ್ದು, ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳ ರದ್ದತಿ, ಯು.ಎಸ್. ಸರಕಾರಿ ನೌಕರರ ಹಕ್ಕುಗಳನ್ನು ಮೊಟಕುಗೊಳಿಸುವ, ಜನವರಿ 2021ರಲ್ಲಿ ಯುಎಸ್ ಸಂಸತ್ ಭವನದಲ್ಲಿ ದೊಂಬಿ ಮಾಡಿದವರಿಗೆ ಕ್ಷಮಾದಾನ, ಪ್ಯಾರೀಸ್ ಒಪ್ಪಂದ ವಿಶ್ವ ಆಹಾರ ಸಂಸ್ಥೆ ಇತ್ಯಾದಿ ಅಂತರಾಷ್ಟ್ರೀಯ ವಿಷಯಗಳಿಗೆ ಈ ಸುಗ್ರೀವಾಜ್ಞೆಗಳು ಸಂಬಂಧಿಸಿವೆ.

ಟ್ರಂಪ್ 2.0: ಮೊದಲ ದಿನವೇ ಸುಗ್ರೀವಾಜ್ಞೆಗಳ ಸೆಂಚುರಿ

ಜಗದ ಸುತ್ತ
ವಸಂತರಾಜ ಎನ್.ಕೆ.

ಇವುಗಳಲ್ಲಿ ಕೆಲವು ಸಂವಿಧಾನ ಮತ್ತು ಈಗಿರುವ ಹಲವು ಕಾನೂನು ಕಟ್ಟಳೆಗಳನ್ನು ಉಲ್ಲಂಘಿಸುವಂತಹದ್ದು ಆಗಿದ್ದು ಇವುಗಳ ವಿರುದ್ಧ ವಿವಿಧ ಬಾಧಿತರು ಕೋರ್ಟಿನ ಮೆಟ್ಟಲು ಹತ್ತಲಿದ್ದಾರೆ. ಮತ್ತು ಪ್ರತಿಭಟನೆ, ಪ್ರತಿರೋಧಗಳನ್ನು ಕೈಗೊಳ್ಳಲಿದ್ದಾರೆ. ಈಗಾಗಲೇ ಜನ್ಮತಃ ನಾಗರಿಕತೆಯ ರದ್ದತಿ ಆಜ್ಞೆ ಸಂವಿಧಾನದ ಉಲ್ಲಂಘನೆಯೆಂದು 22 ಡೆಮೊಕ್ರಾಟಿಕ್ ರಾಜ್ಯಗಳ ಪರವಾಗಿ ಅರ್ಜಿ ಸಲ್ಲಿಸಲಾಗಿದೆ. ಸಿಯಾಟಲ್ ಕೋರ್ಟು ಅದರ ಜಾರಿಗೆ ತಡೆಯಾಜ್ಞೆಯನ್ನೂ ಸಹ ನೀಡಿದೆ.

ಪ್ರಮುಖ ಸುಗ್ರೀವಾಜ್ಞೆಗಳ ಹೂರಣ ಮತ್ತು ಪರಿಣಾಮಗಳ ಸಂಕ್ಷಿಪ್ತ ಪರಿಚಯ ಇಲ್ಲಿದೆ:

ವಲಸೆ ಮತ್ತು ವಲಸೆಗಾರರ ಮೇಲೆ ಕಠಿಣ ಕ್ರಮಗಳು

ಹಲವು ಆಜ್ಞೆಗಳ ಮೂಲಕ ಕಾನೂನುಬಾಹಿರ ವಲಸೆ ಮತ್ತು ವಲಸೆಗಾರರ ಮೇಲೆ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇವನ್ನು ಜಾರಿ ಮಾಡಲು ನೆರವಾಗಲು ದಕ್ಷಿಣದ ಮೆಕ್ಸಿಕೊ–ಯು.ಎಸ್. ಗಡಿಯಲ್ಲಿ ತುರ್ತು ಪರಿಸ್ಥಿತಿ ಘೋಷಿಸಲಾಗಿದೆ. ಅಕ್ರಮ ವಲಸೆಯಲ್ಲಿ ತೊಡಗಿರುವ ಕೆಲವು ಅಂತರರಾಷ್ಟ್ರೀಯ ಗ್ಯಾಂಗುಗಳನ್ನು "ವಿದೇಶೀ ಭಯೋತ್ಪಾದಕ ಸಂಸ್ಥೆಗಳೆಂದು ನಿಗದಿಸಲಾಗಿದೆ. ಇವುಗಳ ವಿರುದ್ಧ ವಿದೇಶೀ ವೈರಿಗಳ ಕಾನೂನು 1798ರ ಪ್ರಕಾರ ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶಿಸಲಾಗಿದೆ. "ನಿರಾಶ್ರಿತರಿಗೆ ಪ್ರವೇಶಾತಿ ಕಾರ್ಯಕ್ರಮ" ವನ್ನು 90 ದಿನದವರೆಗೆ ಸ್ಥಗಿತಗೊಳಿಸಲಾಗಿದೆ. ಇದರ ಪ್ರಕಾರ ಈಗಾಗಲೇ ಈ ಕಾರ್ಯಕ್ರಮದಡಿ ಪ್ರವೇಶಾತಿ ಕೊಡಲಾಗಿದ್ದ 1660 ಅಫ್ಘಾನಿ ನಿರಾಶ್ರಿತರ (ಅವರಲ್ಲಿ ಹಲವರು ಯು.ಎಸ್. ಮಿಲಿಟರಿ ಸಿಬ್ಬಂದಿಗಳ ಕುಟುಂಬದವರೂ ಸೇರಿದ್ದಾರೆ) ವಿಮಾನಯಾನವನ್ನು ರದ್ದುಗೊಳಿಸಲಾಗಿದೆ. ಇದೇ ರೀತಿ ಕ್ಯೂಬಾ, ಹೈತಿ, ನಿಕರಾಗುವ ಮತ್ತು ವೆನೆಜುವೇಲಾಗಳ ನಿರಾಶ್ರಿತರ ಪೆರೋಲ್ ಕಾರ್ಯಕ್ರಮಗಳನ್ನೂ ಸ್ಥಗಿತಗೊಳಿಸಲಾಗಿದೆ. ವಲಸೆಗಾರರನ್ನು ಅವರ ಪ್ರಕರಣಗಳ ತನಿಖೆ ಆಗುವವರೆಗೆ ಯು.ಎಸ್.ಗೆ ಪ್ರವೇಶ ಕೊಡುವ ನೀತಿ ರದ್ದು ಮಾಡಿ ಮೆಕ್ಸಿಕೊಗೆ ತಕ್ಷಣವೇ ವಾಪಸು ಕಳಿಸುವ ಆಜ್ಞೆಯನ್ನೂ ಮಾಡಲಾಗಿದೆ. ಇವೆಲ್ಲವನ್ನು ಜಾರಿ ಮಾಡಲು ಗೃಹ ಇಲಾಖೆ ಸಿಬ್ಬಂದಿ ಜತೆಗೆ ಮಿಲಿಟರಿ ಸಿಬ್ಬಂದಿಯನ್ನೂ ತೊಡಗಿಸಲಾಗುವುದು. ಈಗಾಗಲೇ ವಲಸೆ ನಿರಾಕರಿಸಿದ ವಿದೇಶೀಯರನ್ನು ವಾಪಸು ಕಳಿಸಲು ಕ್ರಮಕೈಗೊಳ್ಳಲಾಗುವುದು. ಇಂತಹ 18 ಸಾವಿರ ಭಾರತೀಯ ನಾಗರಿಕರಿದ್ದಾರೆ ಎನ್ನಲಾಗಿದೆ. ಇವಲ್ಲದೆ ಸುಮಾರು 1.2 ಕೋಟಿ ಅಕ್ರಮ (ಅಂದರೆ ಯಾವುದೇ ಅಧಿಕೃತ ದಾಖಲೆಯಿಲ್ಲದೆ ವಾಸಿಸುತ್ತಿರುವ) ವಲಸೆಗಾರರನ್ನು ಗುರುತಿಸಿ ವಾಪಸು ಕಳಿಸುವ ಕ್ರಮವನ್ನು ಕೈಗೊಳ್ಳಲು ಈ ಆಜ್ಞೆಗಳು ಅನುವಾಗುತ್ತವೆ. ಇಂತಹ ಸುಮಾರು 7.25 ಲಕ್ಷ ಭಾರತೀಯ ವಲಸೆಗಾರರಿದ್ದಾರೆ ಎನ್ನಲಾಗಿದೆ. ವಲಸಿಗರಿಗೆ ಮಾತ್ರವಲ್ಲ ಅವರಿಗೆ ಸಹಾಯ ಮತ್ತು ಬೆಂಬಲ ನೀಡುವ ವ್ಯಕ್ತಿ, ಸಂಸ್ಥೆ, ಸಂಘಟನೆಗಳಿಗೂ ಕಠಿಣ ಶಿಕ್ಷೆ ವಿಧಿಸಲಾಗುವುದು.

ಜನ್ಮತಃ ನಾಗರಿಕತೆ ರದ್ದತಿ

ಯು.ಎಸ್. ನಲ್ಲಿ ಜನಿಸಿದರೆ ತನ್ನಿಂತಾನೇ ನಾಗರಿಕತೆ ಕೊಡುವ ಸುಮಾರು ಒಂದು ಶತಮಾನದಿಂದ ಇರುವ ಸಂವಿಧಾನಿಕ ಹಕ್ಕನ್ನು ಇನ್ನೂ 30 ದಿನಗಳಲ್ಲಿ ಜಾರಿಯಾಗುವಂತೆ ರದ್ದು ಮಾಡುವ ಆಜ್ಞೆ ಮಾಡಲಾಗಿದೆ. ಈಗಾಗಲೇ ಪಾಲಕರು ನಾಗರಿಕ ಅಥವಾ ಶಾಶ್ವತ ನಿವಾಸಿ (ಹಸಿರು ಕಾರ್ಡು ಇದ್ದ) ಅಲ್ಲವಾದರೆ ಅಂತಹ ಅವರ ಮಗುವಿಗೆ ಯು.ಎಸ್. ನಾಗರಿಕತೆ ಸಿಗುವುದಿಲ್ಲ. ಅಂದರೆ ಎಚ್–1 ಮುಂತಾದ ತಾತ್ಕಾಲಿಕ ವಾಸ, ಕೆಲಸದ ವೀಸಾ ಪಡೆದು ಕಾನೂನುಬದ್ಧ ವಲಸೆಗಾರರ ಮಕ್ಕಳಿಗೂ ಇನ್ನು ಮೇಲೆ ನಾಗರಿಕತೆ ಸಿಗುವುದಿಲ್ಲ. ಎಚ್–1, ಕೆಲಸದ ಮುಂತಾದ ತಾತ್ಕಾಲಿಕ ನಿವಾಸದ ವೀಸಾ ಹೊಂದಿರುವ ಲಕ್ಷಾಂತರ ಭಾರತೀಯರಿಗೆ ಇನ್ನು ಮೇಲೆ ಹುಟ್ಟುವ ಮಕ್ಕಳಿಗೆ ಇದು ಅನ್ವಯವಾಗಲಿದೆ. ಈಗಾಗಲೇ ಹೇಳಿದಂತೆ ಇದು ಕೋರ್ಟು ಮೆಟ್ಟಿಲು ಹತ್ತಿದ್ದು ತಡೆಯಾಜ್ಞೆ ಸಹ ಕೊಡಲಾಗಿದೆ. ಇದರ ವಿರುದ್ಧ ಅಪೀಲ್ ಮಾಡಲಾಗುವುದು ಎಂದು ಟ್ರಂಪ್ ಹೇಳಿದ್ದಾರೆ.



ಇಂಧನ ಮತ್ತು ಪರಿಸರ ನೀತಿಗಳು

"ರಾಷ್ಟ್ರೀಯ ಇಂಧನ ತುರ್ತು ಪರಿಸ್ಥಿತಿ" ಹೇರುವ ಆಜ್ಞೆ ಸಹ ಮೊದಲ ದಿನದ ಸುಗ್ರೀವಾಜ್ಞೆಗಳಲ್ಲಿ ಸೇರಿದೆ. ತೈಲ ಬಾವಿಗಳನ್ನು ಕೊರೆಯುವುದರ ಮೇಲೆ ಇದ್ದ ಎಲ್ಲ ನಿರ್ಬಂಧಗಳನ್ನು ಕಿತ್ತು ಹಾಕಲಾಗಿದೆ. ಇದರಲ್ಲಿ ಅಲಾಸ್ಕಾ ರಾಜ್ಯದ ಪರಿಸರ–ಸೂಕ್ಷ್ಮ ಕರಾವಳಿ ಪ್ರದೇಶಗಳಲ್ಲಿ ತೈಲ ಬಾವಿ ಕೊರೆಯಲು ಇದ್ದ ನಿರ್ಬಂಧಗಳೂ ಸೇರಿವೆ. ಇದರ ಜತೆಗೆ ಪುನರ್ನವೀಕರಣದ ಇಂಧನಗಳಿಗೆ ಕೊಡುವ ಉತ್ತೇಜನಗಳನ್ನೂ ಹಿಂತೆಗೆದುಕೊಳ್ಳಲಾಗಿದೆ. ಭೂ ಅಥವಾ ಸಾಗರ ಪ್ರದೇಶಗಳಲ್ಲಿ ಹೊಸ ಪವನ ಶಕ್ತಿ ಪ್ರಾಜೆಕ್ಟುಗಳಿಗೆ ಉತ್ತೇಜನ ನೀಡುವ (ಅನುಮತಿ, ಜಾಗ, ಪರ್ಮಿಟ್, ಲೀಸ್, ಸಾಲ ಮುಂತಾದ) ಎಲ್ಲ ಕ್ರಮಗಳನ್ನು ಸ್ಥಗಿತಗೊಳಿಸಲಾಗಿದೆ. 2030ರೊಳಗೆ ಅರ್ಧದಷ್ಟು ವಾಹನಗಳು ವಿದ್ಯುತ್ ವಾಹನಗಳಾಗಿರಬೇಕೆಂಬ ಮತ್ತು ಫೆಡೆರಲ್ ಸರಕಾರ ವಿದ್ಯುತ್ ವಾಹನ ಇತ್ಯಾದಿ ಶುದ್ಧ ಇಂಧನ ಬಳಸುವ ಉತ್ಪನ್ನಗಳ ಖರೀದಿಗೆ ನಿಗದಿ ಪಡಿಸಿದ ಗುರಿಗಳಿರುವ ಅಧ್ಯಕ್ಷ ಬೈಡೆನ್ ಅವರ 2022ರ ಆಜ್ಞೆಯನ್ನು ರದ್ದುಗೊಳಿಸಲಾಗಿದೆ. ಹವಾಮಾನ ಬದಲಾವಣೆ ಆತಂಕಗಳಿಂದಾಗಿ ಸ್ಥಗಿತಗೊಳಿಸಿದ್ದ ದ್ರವ ಸ್ವಾಭಾವಿಕ ಅನಿಲಗಳ (ಎಲ್.ಎನ್.ಜಿ.) ರಫ್ತಿಗೆ ಅರ್ಜಿಗಳನ್ನು ಪರಿಶೀಲಿಸಲು ಆರಂಭಿಸಲು ಆಜ್ಞೆ ಮಾಡಲಾಗಿದೆ.

ಸಾಮಾಜಿಕ ನ್ಯಾಯದ ಕ್ರಮಗಳ ರದ್ದು

ಕರಿಯರು, ಲ್ಯಾಟಿನೊ, ವಿಶೇಷಚೇತನರು, ಲೈಂಗಿಕ ಅಲ್ಪಸಂಖ್ಯಾತರು ಇತ್ಯಾದಿ ವಂಚಿತ ಸಮುದಾಯಗಳ ನಡುವೆ ಸಾಮಾಜಿಕ ನ್ಯಾಯವನ್ನು ಸಾಧಿಸುವ ವೈವಿಧ್ಯತೆ, ಸಮಾನತೆ ಮತ್ತು ಒಳಗೊಳ್ಳುವಿಕೆಯ ಸರಕಾರಿ ಉದ್ಯೋಗ ಮತ್ತು ಸವಲತ್ತುಗಳಲ್ಲಿನ ಎಲ್ಲ ನಿರ್ದಿಷ್ಟ ಕ್ರಮಗಳನ್ನು, ನೀತಿಗಳನ್ನು ಸ್ಥಗಿತಗೊಳಿಸಿ ಶುದ್ಧ ಮೆರಿಟ್ ಮಾತ್ರ ಪರಿಗಣಿಸುವಂತೆಯೂ ಆಜ್ಞೆ ಹೊರಡಿಸಲಾಗಿದೆ. ಖಾಸಗಿ ಕ್ಷೇತ್ರದಲ್ಲಿಯೂ ವೈವಿಧ್ಯತೆ, ಸಮಾನತೆ ಮತ್ತು ಒಳಗೊಳ್ಳುವಿಕೆಯನ್ನು ಉತ್ತೇಜಿಸುವ 'ತಾರತಮ್ಯದ' ಕ್ರಮಗಳು, ಆದ್ಯತೆಗಳು, ನಿರ್ದೇಶನಗಳು, ನೀತಿಗಳು, ಕಾರ್ಯಕ್ರಮಗಳು, ಚಟುವಟಿಕೆಗಳನ್ನು ನಿಲ್ಲಿಸಲು ಆರಂಭಿಸಲು ಆಜ್ಞೆ ಹೊರಡಿಸಲಾಗಿದೆ. ಈ ಆಜ್ಞೆ ಲಿಂಡನ್ ಜಾನ್ಸನ್ 1965ರಲ್ಲಿ ಹೊರಡಿಸಿದ "ಸಮಾನ ಉದ್ಯೋಗ ಅವಕಾಶ"ದ ಕಾನೂನುಗಳಿಂದ ಆರಂಭಿಸಿ ಹಲವು ದಶಕಗಳ 'ಸಕಾರಾತ್ಮಕ ತಾರತಮ್ಯ'ದ ಕ್ರಮಗಳನ್ನು ರದ್ದು ಪಡಿಸಿದೆ.

ಲೈಂಗಿಕ ಅಲ್ಪಸಂಖ್ಯಾತರ ಅಮಾನ್ಯತೆ

ಗಂಡು, ಹೆಣ್ಣು ಎರಡೂ ಅಲ್ಲದ ದೈಹಿಕ, ಮಾನಸಿಕ ಕಾರಣಗಳಿಂದಾಗಿ ಬದಲಿ ಲೈಂಗಿಕ ಅಸ್ಮಿತೆ ಮತ್ತು ಲೈಂಗಿಕತೆ ಹೊಂದಿರುವುದು ಸಹಜವೆಂದು ಒಪ್ಪಿಕೊಂಡು ಅವರ ಮದುವೆ, ಲೈಂಗಿಕ ಆಯ್ಕೆ ಮತ್ತಿತರ ಹಕ್ಕುಗಳಿಗೆ ಇದುವರೆಗೆ ಕೊಟ್ಟಿದ್ದ ಮಾನ್ಯತೆಯನ್ನು ಮತ್ತು ಅವರ ರಕ್ಷಣೆಯ ಎಲ್ಲ ಕ್ರಮಗಳನ್ನು ಒಂದು ಅಧ್ಯಕ್ಷೀಯ ಆಜ್ಞೆ ರದ್ದು ಮಾಡಿದೆ. ಲೈಂಗಿಕ ಅಲ್ಪಸಂಖ್ಯಾತರು ಸೈನ್ಯಕ್ಕೆ ಸೇರಲು ಹಿಂದಿನ ಸರಕಾರ ಕೊಟ್ಟಿದ್ದ ಅವಕಾಶವನ್ನು ಸಹ ರದ್ದು ಮಾಡಲಾಗಿದೆ.

ಸರಕಾರಿ ನೌಕರರ ಹಕ್ಕುಗಳು ಮೊಟಕು

ವೈವಿಧ್ಯತೆ, ಸಮಾನತೆ ಮತ್ತು ಒಳಗೊಳ್ಳುವಿಕೆಯ ಜಾರಿಯ ಮೇಲುಸ್ತುವಾರಿ ನೋಡುವ, ಉತ್ತೇಜಿಸುವ ಸರಕಾರದ ಘಟಕಗಳ ಉದ್ಯೋಗಿಗಳಿಗೆ ಈಗ ರಜಾ ಕೊಡಲಾಗಿದೆ ಮತ್ತು ಮುಂದೆ ಉದ್ಯೋಗ ನಷ್ಟ ಕಾದಿದೆ. ವಲಸೆ–ನಿರೋಧ, ಮಿಲಿಟರಿ, ಆಂತರಿಕ ಭದ್ರತಾ ಸಿಬ್ಬಂದಿ ಬಿಟ್ಟು ಎಲ್ಲ ಸರಕಾರಿ ಉದ್ಯೋಗಗಳಿಗೆ ನೇಮಕಾತಿ ಕ್ರಮಗಳನ್ನು ಸ್ಥಗಿತಗೊಳಿಸುವ ಆಜ್ಞೆ ಹೊರಡಿಸಲಾಗಿದೆ. 'ಮನೆಯಿಂದ ಕೆಲಸ ಮಾಡುವ' ಸವಲತ್ತನ್ನು ತಕ್ಷಣವೇ ರದ್ದು ಮಾಡಲಾಗಿದೆ. ಟ್ರಂಪ್ ತಮ್ಮ ಮೊದಲ ಅವಧಿಯಲ್ಲಿ ಜಾರಿ ಮಾಡಿದ್ದ ಸರಕಾರಿ ನೀತಿಗಳನ್ನು ಒಪ್ಪದ ಮತ್ತು ಜಾರಿ ಮಾಡದ ಉದ್ಯೋಗಿಗಳ ವಜಾ ಮಾಡುವುದನ್ನು ಸುಲಭಗೊಳಿಸುವ 'ಶೆಡ್ಯೂಲ್ ಎಫ್' ಮತ್ತೆ ಜಾರಿಗೆ ತರಲಾಗಿದೆ. ಸರಕಾರಿ ಉದ್ಯೋಗಿಗಳ ಹಕ್ಕುಗಳನ್ನು ಹರಣ ಮಾಡುವ ಮತ್ತು ಅದನ್ನು ರಾಜಕೀಯಕರಣಗೊಳಿಸುವ ಕ್ರಮವೆಂದು ಇದನ್ನು ಹಿಂದೆ ಆಪಾದಿಸಲಾಗಿತ್ತು.

ಶತಕೋಟ್ಯಾಧಿಪತಿ ಮತ್ತು ಅತ್ಯಂತ ದುಷ್ಟ ಉದ್ಯಮಿಯೆಂದು ಕುಖ್ಯಾತನಾದ ಎಲೊನ್ ಮಸ್ಕ್ ನಾಯಕತ್ವದಲ್ಲಿ ಹೊಸ "ಸರಕಾರದ ದಕ್ಷತೆಯ ವಿಭಾಗ"ವೊಂದನ್ನು ತೆರೆಯಲಾಗಿದೆ. ಇದು "ಸರಕಾರದ ದಕ್ಷತೆ" ಉತ್ತಮ ಪಡಿಸುವ ಹೆಸರಲ್ಲಿ ಸಾಮಾಜಿಕ ಮತ್ತು ಸಾಮುದಾಯಿಕ ಸೇವೆಯ ಸರಕಾರಿ ಉದ್ಯೋಗಗಳನ್ನು ಕಡಿತಗೊಳಿಸುವ ನಿರೀಕ್ಷೆಯಿದೆ. ಈಗಾಗಲೇ ಮಿತವ್ಯಯದ ಹೆಸರಲ್ಲಿ ಅಗ್ನಿಶಾಮಕ ದಳದ ಸಿಬ್ಬಂದಿಯಲ್ಲಿ ವ್ಯಾಪಕ ಕಡಿತ ಮತ್ತು ಹೊಸ ನೇಮಕಾತಿ ಮಾಡಿದ್ದರಿಂದ ಲಾಸ್ ಏಂಜಲೀಸ್ ಕಾಡ್ಗಿಚ್ಚು ನಿಯಂತ್ರಿಸುವಲ್ಲಿ ವಿಳಂಬ ಮತ್ತಿತರ ಪ್ರಮಾದಗಳು ಜರುಗಿವೆ ಎನ್ನಲಾಗಿದೆ.

ಸಂಸತ್ ಭವನದಲ್ಲಿ ದೊಂಬಿ ಮಾಡಿದವರಿಗೆ ಕ್ಷಮಾದಾನ

ಜನವರಿ 6, 2021ರಂದು 'ಕ್ಯಾಪಿಟೊಲ್ ಹಿಲ್' ಎಂದು ಕರೆಯಲಾಗುವ ಸಂಸತ್ ಭವನದಲ್ಲಿ ದೊಂಬಿ ಮಾಡಿದವರು ಎನ್ನಲಾದ ಸುಮಾರು 1500 ಆಪಾದಿತರಿಗೆ ಕ್ಷಮಾದಾನ ಮಾಡುವ ಆಜ್ಞೆ ಹೊರಡಿಸಲಾಗಿದೆ. ಈ ಆಪಾದಿತರು ಅಂದು ಸಂಸತ್ ಭವನಕ್ಕೆ ಕಾನೂನುಬಾಹಿರವಾಗಿ ನುಗ್ಗಿ ಭದ್ರತಾ ಸಿಬ್ಬಂದಿ, ಸಂಸತ್ ಸದಸ್ಯರು, ಸಂಸತ್ ಭವನದ ಸಿಬ್ಬಂದಿಗಳ ಮೇಲೆ ಹಿಂಸಾತ್ಮಕ ದಾಳಿ ಮಾಡಿ ಹಲವು ಸಾವು–ನೋವುಗಳಾಗಿದ್ದವು. ಇವರಲ್ಲಿ ಹಲವರು ಕುಖ್ಯಾತವಾದ ಟ್ರಂಪ್ ಬೆಂಬಲಿಗರ ಉಗ್ರಗಾಮಿ ಗುಂಪುಗಳ ಸದಸ್ಯರು ಮತ್ತು ನಾಯಕರಾಗಿದ್ದರು. 2020ರಲ್ಲಿ ವಾಶಿಂಗಟನ್ ನಲ್ಲಿ ಕರಿಯ ಯುವಕನೊಬ್ಬನ ಕೊಲೆ ಮಾಡಿ ಶಿಕ್ಷೆ ಅನುಭವಿಸುತ್ತಿದ್ದ ಇಬ್ಬರು ಪೋಲಿಸ್ ಅಧಿಕಾರಿಗಳಿಗೆ ಸಹ ಕ್ಷಮಾದಾನ ಮಾಡುವ ಆಜ್ಞೆ ಸಹ ಹೊರಡಿಸಲಾಗಿದೆ.

ಪ್ಯಾರೀಸ್ ಒಪ್ಪಂದ ಮತ್ತು ವಿಶ್ವ ಆಹಾರ ಸಂಸ್ಥೆಗಳಿಂದ ಹೊರಕ್ಕೆ

ಹವಾಮಾನ ಬದಲಾವಣೆ ತಡೆಯಲು ಜಾಗತಿಕ ಕ್ರಮಗಳನ್ನು ನಿರ್ದೇಶಿಸುವ ಪ್ಯಾರೀಸ್ ಕಾಪ್ ಒಪ್ಪಂದದಿಂದ ಮತ್ತೆ ಯು.ಎಸ್. ಅನ್ನು ಹೊರಗೆ ತರುವ ಆಜ್ಞೆ ಸಹ ಬಂದಿದೆ. ಟ್ರಂಪ್ ಮೊದಲ ಅವಧಿಯಲ್ಲಿ ಸಹ ಇಂತಹ ಕ್ರಮ ಕೈಗೊಳ್ಳಲಾಗಿತ್ತು. ಹವಾಮಾನ ಬದಲಾವಣೆಗೆ ಕಾರಣವಾದ ಅನಿಲಗಳ ಹೊರಸೂಸುವಿಕೆಯಲ್ಲಿ ಚಾರಿತ್ರಿಕವಾಗಿ ಅತಿ ದೊಡ್ಡ ಪಾಲು ಇರುವ ಮತ್ತು ಈಗಲೂ ಎರಡನೇ ಅತಿ ದೊಡ್ಡ ಅನಿಲಗಳ ಹೊರಸೂಸುವಿಕೆ ಕೊಡುವ ದೇಶವಾದ ಯು.ಎಸ್. ಈ ಒಪ್ಪಂದದಿಂದ ಹೊರನಡೆಯುವುದು ಅತ್ಯಂತ ಬೇಜವಾಬ್ದಾರಿ ಕ್ರಮ.

ಅದೇ ರೀತಿಯಲ್ಲಿ ಜಾಗತಿಕ ಕೊವಿಡ್ ನಿಯಂತ್ರಣದಲ್ಲಿ ಪರಿಣಾಮಕಾರಿಯಾಗಿರಲಿಲ್ಲ ಮತ್ತು ಪ್ರಮಾದಗಳನ್ನು ಮಾಡಿದೆಯೆಂದು ಆಪಾದಿಸಿ ವಿಶ್ವ ಆಹಾರ ಸಂಸ್ಥೆಯಿಂದ ಸಹ ಹೊರಕ್ಕೆ ಬರುವ ಕುರಿತು ಸಹ ಆಜ್ಞೆ ಹೊರಡಿಸಲಾಗಿದೆ.

ಯೆಮೆನ್ ನ ಹೌತಿ ಗೆರಿಲ್ಲಾ ಸಂಘಟನೆಯನ್ನು ಜಾಗತಿಕ ಭಯೋತ್ಪಾದಕ ಸಂಘಟನೆಗಳ ಮತ್ತು ಕ್ಯೂಬಾವನ್ನು ಮತ್ತೆ ಜಾಗತಿಕ ಭಯೋತ್ಪಾದಕ ದೇಶಗಳ ಪಟ್ಟಿಗೆ ಮತ್ತೆ ಸೇರಿಸುವ ಆಜ್ಞೆ ಹೊರಡಿಸಲಾಗಿದೆ.

ಮೆಕ್ಸಿಕೊ ಕೊಲ್ಲಿಯನ್ನು ಅಮೆರಿಕ ಕೊಲ್ಲಿ ಎಂದು ಕರೆಯುವುದೂ ಆಜ್ಞೆಗಳಲ್ಲಿ ಸೇರಿದೆ. ❍

NEW No. MAG(3)/NPP/205/2021-2022
JANASHAKTHI KANNADA VARA PATRIKE January 27-February 2, 2025 Price: Rs. 10/- Date of Publication: 24 January 2025 RNI No. KARKAN /2006/17926 Posted on 28-01-2025
Posted at BG PSO, BG - 560026 **Posted at Periodical Rate -** Rs. 2

ನಾರಾಯಣ ಗುರುಗಳು ಸನಾತನ ಧರ್ಮದ ಭಾಗವೇ?

ರಾಮ್ ಪುನಿಯಾನಿ

ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು, ಪುರುಷರು ದೇವಾಲಯಗಳಿಗೆ ಪ್ರವೇಶಿಸುವ ಮೊದಲು ತಮ್ಮ ಅಂಗಿಗಳನ್ನು ತೆಗೆಯುವ ಪದ್ಧತಿಯನ್ನು ನಿಲ್ಲಿಸಬೇಕೆಂಬ ಸ್ವಾಮಿ ಸಚ್ಚಿದಾನಂದ ಅವರ ಪ್ರಸ್ತಾಪವನ್ನು ಸಮರ್ಥಿಸಿದರು. ನಾರಾಯಣ ಗುರುಗಳು ಸನಾತನ ಧರ್ಮದ ಭಾಗವಾಗಿದ್ದಾರೆ ಎಂದು ಪ್ರಚಾರ ಮಾಡುವ ಪ್ರಯತ್ನಗಳು ನಡೆದಿವೆ, ಆದರೆ ಅವರು "ಒಂದೇ ಜಾತಿ, ಒಂದೇ ಧರ್ಮ, ಒಂದೇ ದೇವರು" ಎಂದು ಪ್ರಚಾರ ಮಾಡಿದ್ದರಿಂದ ಅವರು ಸನಾತನ ಧರ್ಮದಿಂದ ದೂರವಾಗಿದ್ದರು, ಜಾತಿ, ಧರ್ಮವನ್ನು ಲೆಕ್ಕಿಸದ ಈ ಸಮಾನತೆಯು ಸನಾತನ ಧರ್ಮದಿಂದ ತುಂಬಾ ದೂರವಿದೆ ಎಂದು ವಿಜಯನ್ ಹೇಳಿದರು.

2024ರ ಡಿಸೆಂಬರ್ 31 ರಂದು ಶಿವಗಿರಿ ಮಠ ಯಾತ್ರೆಯ ಭಾಗವಾಗಿ ಒಂದು ಸಭೆಯನ್ನು ಉದ್ಘಾಟಿಸುತ್ತ ಮಾತನಾಡಿದ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು, ಪುರುಷರು ದೇವಾಲಯಗಳಿಗೆ ಪ್ರವೇಶಿಸುವ ಮೊದಲು ತಮ್ಮ ಅಂಗಿಗಳನ್ನು ತೆಗೆಯುವ ಪದ್ಧತಿಯನ್ನು ನಿಲ್ಲಿಸಬೇಕೆಂಬ ಸ್ವಾಮಿ ಸಚ್ಚಿದಾನಂದ ಅವರ ಪ್ರಸ್ತಾಪವನ್ನು ಸಮರ್ಥಿಸಿದರು. ಜನಿವಾರ ಧರಿಸುವವರನ್ನು ಗುರುತಿಸುವುದಕ್ಕಾಗಿ ಈ ಪದ್ಧತಿ ಅಸ್ತಿತ್ವಕ್ಕೆ ಬಂದಿದೆ, ಕೇವಲ ಮೇಲ್ಜಾತಿಗೆ ಸೇರಿದವರು ಮಾತ್ರವೇ ಇದನ್ನು ಧರಿಸುತ್ತಾರೆ ಎಂದು ನಂಬಿರುತ್ತಾರೆ. ದೇಹ ತೋರಿಸಿಕೊಳ್ಳಲು ಬೇರೆ ಯಾವುದೇ ಕಾರಣವಿರಲು ಸಾಧ್ಯವಿಲ್ಲ ಎಂದು ಕೆಲವರು ಅನುಮಾನಿಸುತ್ತಿದ್ದಾರೆ. ಜನಿವಾರ ಧರಿಸದೇ ಇರುವವರನ್ನು ದೇವಾಲಯದೊಳಗೆ ಪ್ರವೇಶಿಸುವುದನ್ನು ನಿಷೇಧಿಸಬೇಕಾಗಿತ್ತು. ನಾರಾಯಣ ಗುರುಗಳು ಸನಾತನ ಧರ್ಮದ ಭಾಗವಾಗಿದ್ದಾರೆ ಎಂದು ಪ್ರಚಾರ ಮಾಡುವ ಪ್ರಯತ್ನಗಳು ನಡೆದಿವೆ, ಆದರೆ ಅವರು "ಒಂದೇ ಜಾತಿ, ಒಂದೇ ಧರ್ಮ, ಒಂದೇ ದೇವರು" ಎಂದು ಪ್ರಚಾರ ಮಾಡಿದ್ದರಿಂದ ಅವರು ಸನಾತನ ಧರ್ಮದಿಂದ ದೂರವಾಗಿದ್ದರು ಎಂದು ವಿಜಯನ್ ಹೇಳಿದರು. ಜಾತಿ, ಧರ್ಮವನ್ನು ಲೆಕ್ಕಿಸದ ಈ ಸಮಾನತೆಯು ಸನಾತನ ಧರ್ಮದಿಂದ ತುಂಬಾ ದೂರವಿದೆ. ಇಂದು ಧಾರ್ಮಿಕ ಭಾವನೆಗಳನ್ನು ಕೆರಳಿಸುವ ಮೂಲಕ ಹಿಂಸಾಚಾರ ನಡೆಸುತ್ತಿರುವ ಕಾರಣದಿಂದಾಗಿ ಗುರುಗಳ ಬದುಕು ಮತ್ತು ಅವರ ಕೆಲಸಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ವಿಜಯನ್ ಹೇಳಿದರು.



ನಾರಾಯಣ ಗುರುಗಳು ಒಂದು ಧರ್ಮದ ಗುರುಗಳು ಮಾತ್ರವಲ್ಲ, ಮಹಾನ್ ಮಾನವತಾವಾದಿಯೂ ಆಗಿದ್ದರು. ವಿಜಯನ್ ಮುಖ್ಯಮಂತ್ರಿಯಾಗಿರುವ ಅವಧಿಯಲ್ಲಿ ಹಿಂದೂಗಳೆಲ್ಲಾ ತೊಂದರೆಗಳಿಗೆ ಒಳಗಾಗುತ್ತಿದ್ದಾರೆ ಎಂದು ವಿಜಯನ್ ಟೀಕಾಕಾರರು ಟೀಕಿಸುತ್ತಿದ್ದಾರೆ. ಅವರು ಇದಕ್ಕೆ ಶಬರಿಮಲೆಯನ್ನು ಉದಾಹರಿಸುತ್ತಾರೆ. ಮುಟ್ಟಿನ ವಯಸ್ಸಿನ ಮಹಿಳೆಯರು ಅಲ್ಲಿನ ದೇವಾಲಯಕ್ಕೆ ಪ್ರವೇಶಿಸಲು ಅವಕಾಶ ನೀಡುವ ಸುಪ್ರೀಂ ಕೋರ್ಟ್ ತೀರ್ಪನ್ನು ಎತ್ತಿಹಿಡಿಯಲು ಆಡಳಿತ ಪಕ್ಷ ನಿರ್ಧರಿಸಿತು. ಈ ವಿಷಯದಲ್ಲಿ ಭಾರತೀಯ ಜನತಾ ಪಕ್ಷದ ಅಧಿಕೃತ ಪ್ರತಿನಿಧಿಗಳೆಲ್ಲಾ ವಿಜಯನ್ ವಿರುದ್ಧವಾಗಿ ತಿರುಗಿಬಿದ್ದರು.


ನಾರಾಯಣ ಗುರುಗಳ ಸ್ತಬ್ಧ ಚಿತ್ರದ ರಚನೆಯನ್ನು ಒಪ್ಪಿಕೊಳ್ಳಲಿಲ್ಲ

ಸನಾತನ ಧರ್ಮದ ಸುತ್ತಲೂ ನಡೆಯುತ್ತಿರುವ ಚರ್ಚೆ ಎರಡನೇ ಬಾರಿಗೆ ಮುನ್ನೆಲೆಗೆ ಬಂದಿರುವಂತೆ ಕಾಣುತ್ತಿದೆ. ಮೊದಲ ಬಾರಿಗೆ, ಆ ಚರ್ಚೆ ಉದಯನಿಧಿ ಸ್ಟಾಲಿನ್ ಸನಾತನ ಧರ್ಮದ ವಿರುದ್ಧ ಮಾತನಾಡಿದಾಗ ಹುಟ್ಟಿಕೊಂಡಿತು. ಬಿಜೆಪಿ ಮತ್ತು ಆರ್‌ಎಸ್‌ಎಸ್ ಸನಾತನ ಧರ್ಮವನ್ನು ಕೇವಲ ಜಾತಿ ಮತ್ತು ಧರ್ಮದ ಸ್ಥಾನದ ಮಟ್ಟಕ್ಕೆ ಇಳಿಸಲು ಸಾಧ್ಯವಿಲ್ಲ ಎಂದು ಘೋಷಿಸುತ್ತಿವೆ. ಕಾಕತಾಳೀಯವೆಂದರೆ, 2022ರಲ್ಲಿ, ನವದೆಹಲಿಯಲ್ಲಿ ಗಣರಾಜ್ಯೋತ್ಸವ ದಿನದಂದು ನಡೆದ ಪ್ರದರ್ಶನದಲ್ಲಿ ಕೇರಳ ಸಿದ್ದಪಡಿಸಿದ ನಾರಾಯಣ ಗುರುಗಳ ಚಿತ್ರವಿದ್ದ ಸ್ತಬ್ಧಚಿತ್ರವನ್ನು ಕೇಂದ್ರ ಸರ್ಕಾರ ತಿರಸ್ಕರಿಸಿತು. ಕೇಂದ್ರ ರಕ್ಷಣಾ ಸಚಿವಾಲಯಕ್ಕೆ ಸೇರಿದ ತೀರ್ಪುಗಾರರ ಸದಸ್ಯರು, ಕೇರಳದ ಸ್ತಬ್ಧಚಿತ್ರ ನಾರಾಯಣ ಗುರುಗಳಿಗಿಂತ ಶಂಕರಾಚಾರ್ಯರನ್ನು ಹೆಚ್ಚು ಪ್ರದರ್ಶಿಸಬೇಕೆಂದು ಹೇಳಿದರು. ಇದೇ ಕೇರಳದ ಆ ಸ್ತಬ್ಧಚಿತ್ರವನ್ನು ತಿರಸ್ಕರಿಸಲು ಒಂದು ಪ್ರಮುಖವಾದ ಕಾರಣ.

ಬ್ರಾಹ್ಮಣವಾದ ಮತ್ತು ಶ್ರಮಿಕವಾದ

ಶಾಶ್ವತತೆಯನ್ನು ಪ್ರತಿನಿಧಿಸುವ ಸನಾತನ ಧರ್ಮವನ್ನು ಬೌದ್ಧ, ಜೈನ ಹಿಂದೂ ಧರ್ಮಗಳಿಗಾಗಿ ಬಳಸುತ್ತಿದ್ದಾರೆ. ಒಬ್ಬನೇ ಪ್ರವಾದಿ ಅಥವಾ ಒಂದೇ ಪವಿತ್ರ ಗ್ರಂಥವನ್ನು ಹೊಂದಿರದ ಧರ್ಮ ಹಿಂದೂ ಧರ್ಮವಾಗಿದೆ. ಹಿಂದೂ ಧರ್ಮದ ಪವಿತ್ರ ಗ್ರಂಥಗಳಲ್ಲಿ ಎಲ್ಲಿಯೂ "ಹಿಂದೂ" ಎಂಬ ಪದವನ್ನು ಉಲ್ಲೇಖಿಸಲಾಗಿಲ್ಲ. ಇದಕ್ಕೆ ಎರಡು ಮುಖ್ಯ ಧಾರೆಗಳಿವೆ – ಬ್ರಾಹ್ಮಣವಾದ ಮತ್ತು ಶ್ರಮಿಕವಾದ. ಬ್ರಾಹ್ಮಣವಾದವು, ಶ್ರೇಣೀಕೃತ ಅಸಮಾನತೆ ಮತ್ತು ಪಿತೃಪ್ರಧಾನ ಮೌಲ್ಯಗಳ ಮೇಲೆ ಆಧರಿಸಿದೆ. ಹಿಂದೂ ಧರ್ಮದ ಮೇಲೆ ಬ್ರಾಹ್ಮಣ್ಯ ಮೌಲ್ಯಗಳು ಆಧಿಪತ್ಯ ಚಲಾಯಿಸುತ್ತಿವೆ ಎಂದು ಭಾವಿಸಿದ್ದರಿಂದ ಅಂಬೇಡ್ಕರ್ ಹಿಂದೂ ಧರ್ಮವನ್ನು ತ್ಯಜಿಸಿದರು. ಶ್ರಮದಾಯಕ ಸಂಪ್ರದಾಯಗಳಲ್ಲಿ, ಅಸಮಾನತೆಯ ಮೌಲ್ಯಗಳಿಂದ ದೂರವಿರುವ ಭಕ್ತಿ ಸಂಪ್ರದಾಯಗಳಿವೆ. ಹಿಂದೂ ಧರ್ಮವು ಒಂದು ಧರ್ಮವಲ್ಲ, ಬದಲಾಗಿ ಧರ್ಮ ಆಧರಿಸಿದ ಒಂದು ಜೀವನ ವಿಧಾನ ಎಂದು ಕೆಲವರು ಹೇಳುತ್ತಾರೆ. ಅದೇ ರೀತಿ, ಸನಾತನ ಧರ್ಮವು ಮುಖ್ಯವಾಗಿ ವರ್ಣ ವ್ಯವಸ್ಥೆ, ಜಾತಿ ಅಸಮಾನತೆಗಳು, ಅವುಗಳ ಸಂಪ್ರದಾಯಗಳಿಗೆ ಬದ್ಧವಾಗಿದೆ. ಧರ್ಮ ಎನ್ನುವುದು ಧಾರ್ಮಿಕವಾಗಿ ವಿಧಿಸಲಾದ ಕರ್ತವ್ಯವೆಂದು ಅರ್ಥೈಸಿಕೊಳ್ಳಬಹುದು. ಅಸಮಾನತೆಯ ಆಧಾರದ ಮೇಲೆ ಒಂದು ಧರ್ಮವನ್ನು ಪ್ರತಿಪಾದಿಸುವುದನ್ನು ಸಮಾಜ ಸುಧಾರಕರು ವಿರೋಧಿಸುತ್ತಾರೆ.

ಬುದ್ಧ, ಕಬೀರ್, ಜ್ಯೋತಿರಾವ್ ಫುಲೆ ಅವರನ್ನು ತಮ್ಮ ಗುರುಗಳೆಂದು ಪರಿಗಣಿಸಿದ್ದ ಅಂಬೇಡ್ಕರ್ ಅವರ ಉದಾಹರಣೆಯನ್ನು ತೆಗೆದುಕೊಳ್ಳೋಣ. ಅವರಿಗೆ ಜಾತಿ, ಲಿಂಗ ಅಸಮಾನತೆಗಳನ್ನು ತಿರಸ್ಕರಿಸುವುದು ಮುಖ್ಯವಾಗಿತ್ತು. ಮಧ್ಯಕಾಲೀನ ಯುಗದ ಅಂದಿನ ಭಾರತದಲ್ಲಿ ಕಬೀರ್, ತುಕಾರಾಮ್, ನಾಮದೇವ ಮತ್ತು ನರಸಿ ಮೆಹ್ತಾರಂತಹ ಸಂತರು, ಅವರ



ಹಿತಾಸಕ್ತಿಗಳು ಯಾವಾಗಲೂ ಜಾತಿ ವ್ಯವಸ್ಥೆಯ ವಿರುದ್ಧವಾಗಿದ್ದವು ಮತ್ತು ಅವರಲ್ಲಿ ಕೆಲವರು ಮೇಲ್ಜಾತಿಯ ಆಡಳಿತಗಾರರ ದಾಳಿಯನ್ನು ಸಹ ಎದುರಿಸಬೇಕಾಯಿತು. ನಾರಾಯಣ ಗುರುಗಳು ಜಾತಿ ವ್ಯವಸ್ಥೆಯ ವಿರುದ್ಧ ಮಹಾನ್ ಸಮಾಜ ಸುಧಾರಕರಾಗಿ ಹೊರಹೊಮ್ಮಿ, ಧಾರ್ಮಿಕ ವಿಭಜನೆಗಳನ್ನು ಜಯಿಸಿದರು. ಬ್ರಾಹ್ಮಣ್ಯದ ಹಿಂದೂ ಧರ್ಮದಿಂದ ಮಾರ್ಗದರ್ಶಿಸಲ್ಪಟ್ಟ ಪ್ರಸ್ತುತ ಆಳುವ ವರ್ಗವು, ಕೇರಳದಿಂದ ನಾರಾಯಣ ಗುರು ಸ್ತಬ್ಧಚಿತ್ರದ ರಚನೆಯನ್ನು ಒಪ್ಪಿಕೊಳ್ಳದಿರುವುದು ಆಶ್ಚರ್ಯವೇನಿಲ್ಲ. ನಾರಾಯಣ ಗುರುಗಳು ಮಾನವೀಯತೆಯ ವ್ಯಕ್ತಿ.

ಬ್ರಾಹ್ಮಣೇತರ ಶಿವನ ವಿಗ್ರಹ ಪ್ರತಿಷ್ಠಾಪಿಸಿದರು

ಅರುವಿಪ್ಪುರಂ ಭಾರತದ ಕೇರಳದ ತಿರುವನಂತಪುರಂನ ದಕ್ಷಿಣ ಜಿಲ್ಲೆಯಲ್ಲಿರುವ ಒಂದು ಹಳ್ಳಿ. ಇದು ನಾರಾಯಣ ಗುರುಗಳಿಂದ ಸ್ಥಾಪಿಸಲ್ಪಟ್ಟ ಶಿವ ದೇವಾಲಯಕ್ಕೆ ಪ್ರಸಿದ್ಧವಾಗಿದೆ. 1888 ರಲ್ಲಿ ಕೇರಳ ಸಮಾಜದಲ್ಲಿ ಹಾಗೆ ಮಾಡಿದ ಮೊದಲ ಬ್ರಾಹ್ಮಣೇತರ ಶಿವನ ವಿಗ್ರಹವನ್ನು ಗುರುಗಳು ಪ್ರತಿಷ್ಠಾಪಿಸಿದರು. ಅವರ ಬೆಳೆಯುತ್ತಿರುವ ದಿನಗಳಲ್ಲಿ ಅವರು ಆಧ್ಯಾತ್ಮಿಕತೆ ಮತ್ತು ಯೋಗಾಭ್ಯಾಸದಲ್ಲಿ ಆಳವಾಗಿ ತೊಡಗಿಸಿಕೊಂಡಿದ್ದರು. 1888 ರಲ್ಲಿ, ತಮ್ಮ ತಾತ್ವಿಕ ಪ್ರಯಾಣದ ಸಮಯದಲ್ಲಿ ಅರುವಿಪ್ಪುರಂಗೆ ಭೇಟಿ ನೀಡಿ, ಅಲ್ಲಿ ಧ್ಯಾನಕ್ಕೆ ಹೋದರು. ಅಲ್ಲಿರುವ ಸಮಯದಲ್ಲಿಯೇ ಅವರು ನದಿಯಿಂದ ಒಂದು ಕಲ್ಲನ್ನು ತೆಗೆದುಕೊಂಡು, ಅದನ್ನು ಪ್ರತಿಷ್ಠಾಪಿಸಿ, ಅದಕ್ಕೆ ಶಿವನ ವಿಗ್ರಹ ಎಂದು ಹೆಸರಿಟ್ಟರು. ಅಂದಿನಿಂದ, ಈ ಸ್ಥಳವು ಅರುವಿಪ್ಪುರಂ ಶಿವ ದೇವಾಲಯವೆಂದು ಪ್ರಸಿದ್ಧವಾಗಿದೆ. ಅದಾದ ನಂತರ ಅರುವಿಪ್ಪುರಂ ಪ್ರತಿಷ್ಠಿತ ಸ್ಥಳವಾಗಿ ಪ್ರಖ್ಯಾತ ಹೊಂದಿದೆ. ಇದು ಒಂದು ದೊಡ್ಡ ಸಾಮಾಜಿಕ ಕೋಲಾಹಲವನ್ನು ಸೃಷ್ಟಿಸಿತು, ವಿಶೇಷವಾಗಿ ಮೇಲ್ಜಾತಿಯವರಿಂದ ವಿರೋಧವನ್ನು ಸೃಷ್ಟಿಸಿತು. ಬ್ರಾಹ್ಮಣರು ನಾರಾಯಣ ಗುರುಗಳು ಕೈಇಟ್ಟ ವಿಗ್ರಹ ಪ್ರತಿಷ್ಠಾಪನೆಯನ್ನು ಸ್ವೀಕರಿಸಲಿಲ್ಲ. "ಇದು ಬ್ರಾಹ್ಮಣ ಶಿವನಲ್ಲ, ಆದರೆ ಈಳವ ಶಿವ" ಎಂದು ಅವರಿಗೆ ಉತ್ತರಿಸಿದರು. ಈ ಉಲ್ಲೇಖವು ನಂತರದ ಕಾಲದಲ್ಲಿ ಪ್ರಸಿದ್ಧವಾಗಿ, ಜಾತಿತಾರತಮ್ಯದ ವಿರುದ್ಧವಾಗಿ ಬಳಸಲ್ಪಟ್ಟಿತು. ಅವರು ತಮ್ಮ ಜೀವನವನ್ನು ಜಾತಿತಾರತಮ್ಯದ ವಿರುದ್ಧದ ಹೋರಾಟಕ್ಕೆ ಮುಡಿಪಾಗಿಟ್ಟರು. ಬೇರುಬಿಟ್ಟ ಜಾತಿ ವ್ಯವಸ್ಥೆಯನ್ನು ಪ್ರಶ್ನಿಸುವಲ್ಲಿ ಅವರ ಕಾರ್ಯಾಚರಣೆಯು ಪ್ರಮುಖ ಪ್ರಾಯೋಗಿಕ ಸಾಧನವಾಗಿದೆ. ನಾರಾಯಣ ಗುರುಗಳ ಕ್ರಾಂತಿಕಾರಿ ಘೋಷಣೆ "ಒಂದೇ ಜಾತಿ, ಒಂದೇ ಧರ್ಮ, ಒಬ್ಬನೇ ದೇವರು". ನಾರಾಯಣ ಗುರುಗಳು ಜಾತಿ, ಧರ್ಮಗಳ ಭೇದಗಳನ್ನು ಮೀರಿ ಒಂದು ಮಾನವೀಯತೆಯನ್ನು ಘೋಷಿಸಿದರು. ನಂತರದ ಕಾಲದಲ್ಲಿ ಅವರು, ಮಹಾರಾಷ್ಟ್ರದ ಜ್ಯೋತಿರಾವ್ ಫುಲೆಯವರಂತೆ ಕೆಳಜಾತಿಯವರಿಗಾಗಿಯೂ ಶಾಲೆಗಳನ್ನು ಪ್ರಾರಂಭಿಸಿದರು. ಅಂಬೇಡ್ಕರ್ ಕಲಾರಾಮ್ ದೇವಾಲಯ ಪ್ರವೇಶ ಚಳವಳಿಯ ತತ್ವಗಳ ಪ್ರಕಾರ, ಅವರು ಎಲ್ಲಾ ಜಾತಿಗಳಿಗೆ ಸೇರಿದವರಿಗಾಗಿ ದೇವಾಲಯಗಳನ್ನು ನಿರ್ಮಿಸಿದರು.

ಸ್ತನಗಳನ್ನು ಮುಚ್ಚಿಕೊಳ್ಳುವ ಮಹಿಳೆಯರು ತೆರಿಗೆ ಕೊಡಬೇಕಿತ್ತು

ಪಿಣರಾಯ್ ವಿಜಯನ್ ಸಮರ್ಥಿಸಿದ ಸ್ವಾಮಿ ಸಚ್ಚಿದಾನಂದ ಅವರ ಸಲಹೆಯು ಕೂಡಾ, ಪುರುಷರು ತಮ್ಮ ದೇಹದ ಮೇಲ್ಭಾಗವನ್ನು ತೋರ್ಪಡಿಸುವ ರೀತಿಯಲ್ಲಿ ಶರ್ಟ್‌ಗಳನ್ನು ಬಿಚ್ಚುವುದರಿಂದ ಆರೋಗ್ಯದ ಮೇಲೂ ಪರಿಣಾಮ ಉಂಟಾಗುತ್ತದೆ ಎಂದು ಹೇಳುತ್ತದೆ. ಏಕೆಂದರೆ ಅದು ದೇಹದಾದ್ಯಂತ ರೋಗಗಳನ್ನು ಹರಡುತ್ತದೆ. ಕಾಲಕ್ಕೆ ಅನುಗುಣವಾಗಿ ಹಲವು ಪದ್ಧತಿಗಳು ಬದಲಾಗಬೇಕಾದ ಅವಶ್ಯಕತೆ ಇದೆ. ಮಹಿಳೆಯರಿಗೆ ತಮ್ಮ ಸ್ತನಗಳನ್ನು ಕಾಣದಂತೆ ಮುಚ್ಚಿಕೊಳ್ಳುವ ಹಕ್ಕಿರಲಿಲ್ಲ ಎಂಬ ವಿಷಯ ಎಲ್ಲರಿಗೂ ತಿಳಿದಿರುವ ವಿಚಾರ. ಸ್ತನಗಳು ಕಾಣಿಸದಂತೆ ಮುಚ್ಚಿಕೊಳ್ಳುವ ಮಹಿಳೆಯರು ತೆರಿಗೆ ಪಾವತಿಸಬೇಕಾಗಿತ್ತು. ಟಿಪ್ಪು ಸುಲ್ತಾನ್ ಕೇರಳವನ್ನು ಆಕ್ರಮಿಸಿಕೊಂಡ ನಂತರ ಸ್ತನ ತೆರಿಗೆಯನ್ನು ರದ್ದುಗೊಳಿಸಿದನು. ಆ ರೀತಿಯಲ್ಲಿ ಮಹಿಳೆಯರು ತಮ್ಮ ಗೌರವವನ್ನು ಕಾಪಾಡಿಕೊಂಡರು.

ದೇವಾಲಯಗಳು ನಮ್ಮ ಸಾಮಾಜಿಕ ಜೀವನದ ಒಂದು ಭಾಗ. ಉಡುಪು ಧರಿಸುವುದರಲ್ಲಿನ ಬದಲಾವಣೆಗಳು ಸಾಮಾಜಿಕ ರೂಢಿಗಳಲ್ಲಿನ ಬದಲಾವಣೆಗಳ ಜೊತೆಗೂಡುವ ಅಗತ್ಯವಿದೆ. ಇದಕ್ಕೆ ಯಾವುದೇ ವಿರೋಧ ಬಂದರೂ ಅದು ಹಿಮ್ಮುಖ ಚಲನೆಯಾಗಲಿದೆ. ಪುಟ 14 ಕ್ಕೆ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**